
₹ 5/-

# ನೇಸರು

ವಿಶೇಷ ಸಂಚಿಕೆ

## ಮೈಸೂರು ಅಸೋಸಿಯೇಷನ್ ಮುಂಬೈ

Nesaru **Tingalole** Vol XXX -9 September 2012



ಶತಪದ ಹಾದಿಯಲ್ಲಿ ನಿಘಂಟು ಸಾರ್ವಭೌಮ

## ಜಿ. ವೆಂಕಟಸುಬ್ಬಯ್ಯ

**The Mysore Association, Bombay**
393, Bhaudaji Road, Matunga, Mumbai - 400 019.
Tel.: 2402 4647, 2403 7065 ● Fax : 2401 0574



# ಕಣಜ

## ಪ್ರೊ. ಜಿ. ವೆಂಕಟಸುಬ್ಬಯ್ಯ 13.08.1913

ನಿಘಂಟು ತಜ್ಞರಾದ ವೆಂಕಟಸುಬ್ಬಯ್ಯನವರು ಹುಟ್ಟಿದ್ದು ಮಂಡ್ಯಜಿಲ್ಲೆಯ ಕ್ಯೆಗೋನಹಳ್ಳಿ, ತಂದೆ ಗಂಜಾಂ ತಿಮ್ಮಣ್ಣಯ್ಯ ಅರಮನೆಯ ವಿದ್ವಾಂಸರು. ತಾಯಿ ಸುಬ್ಬಮ್ಮ ಪ್ರಾರಂಭಿಕ ಶಿಕ್ಷಣ ಹುಟ್ಟಿದೂರಿನಲ್ಲಿ. ಹೈಸ್ಕೂಲಿಗೆ ಸೇರಿದ್ದು ಮಧುಗಿರಿ. ಇಂಟರ್ ಮೀಡಿಯೆಟ್ ಮತ್ತು ಆನರ್ಸ್ ಓದಿದ್ದು ಮೈಸೂರು ಮಹಾರಾಜ ಕಾಲೇಜು. 1937 ರಲ್ಲಿ ಎಂ.ಎ. 1929 ರಲ್ಲಿ ಬಿ.ಟಿ. ಪದವಿ. ಉದ್ಯೋಗಕ್ಕಾಗಿ ಸೇರಿದ್ದು ಮಂಡ್ಯದ ಪುರಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ, ನಂತರ ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕರಾಗಿ, ಬೆಂಗಳೂರಿನ ಹೈಸ್ಕೂಲಿನಲ್ಲಿ ಕೆಲಕಾಲ ಅಧ್ಯಾಪಕರಾಗಿ, ಬೆಂಗಳೂರಿನ ವಿಜಯಾ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿ, ಉಪಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, 1972 ರಲ್ಲಿ ಸಂಜೆ ಕಾಲೇಜಿನ ಪ್ರಿನ್ಸಿಪಾಲರಾಗಿ 1973 ರಲ್ಲಿ ನಿವೃತ್ತಿ.

ಜಿ.ವೆಂ.ಗೆ ಸಾಹಿತ್ಯಾಭಿರುಚಿ ಬಳುವಳಿಯಾಗಿ ಬಂದುದು ಅವರ ತಂದೆಯಿಂದಲೇ. ತಿಮ್ಮಣ್ಣಯ್ಯನವರು ವೇದ ಉಪನಿಷತ್ತುಗಳಲ್ಲಿ ಪಾರಂಗತರು – ಅಷ್ಟಾದಶ ಪುರಾಣಗಳ ಅನುವಾದ ಕಾರ್ಯದಲ್ಲಿ ಇವರು ನೀಡಿದ ಸಹಾಯ ಹಸ್ತ. ಆದರೆ ಜಿ.ವೆಂ.ರವರು ಕನ್ನಡ ಸಾಹಿತ್ಯವನ್ನು ಬೆಳೆಸುವ ಕೈಂಕರ್ಯದಲ್ಲಿ ಎಂದೂ ಮುಂದು. ಮಹಾರಾಜಾ ಕಾಲೇಜಿನ ಪ್ರಚಾರೋಪನ್ಯಾಸ ಪುಸ್ತಕ ಮಾಲೆಯಲ್ಲಿ ಹಲವಾರು ಕೃತಿ ರಚನೆ. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ 'ಬಾಲ ಕರ್ನಾಟಕ' ಸಂಘ ಸ್ಥಾಪನೆ. ಎಚ್.ಎಂ.ಶಂಕರ ನಾರಾಯಣರಾಯರು ಹೊರತಂದ 'ರೋಹಿಣಿ' ಕೈಬರಹದ ಪತ್ರಿಕೆಗೆ ನೀಡಿದ ಸಹಾಯ. ಬೆಂಗಳೂರಿಗೆ ಬಂದ ನಂತರ ಸಾರ್ವಜನಿಕ ಚಟುವಟಿಕೆಗಳಲ್ಲಿ ಭಾಗಿ. 1954 –56ರ ವರೆಗೆ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ, 1965–69ರ ವರೆಗೆ ಅಧ್ಯಕ್ಷರಾಗಿ, ಪರಿಷತ್ತಿನ ನಿಘಂಟು ಸಮಿತಿಯ ಸದಸ್ಯರಾಗಿ, 1965–67 ರವರೆಗೆ ವಿಶ್ವಕೋಶದ ಸಮಿತಿಯ ಸದಸ್ಯರಾಗಿ, ವಿಶ್ವವಿದ್ಯಾಲಯದ ಅಕೆಡಮಿಕ್ ಕೌನ್ಸಿಲ್, ಸೆನೆಟ್, ಪಠ್ಯಪುಸ್ತಕ ಸಮಿತಿ, ಪರೀಕ್ಷಾ ಸಮಿತಿಯ ಸದಸ್ಯರಾಗಿ ಸಲ್ಲಿಸಿದ ಸೇವೆ.

ರಚಿಸಿದ ಕೃತಿಗಳು, ವಿಮರ್ಶೆ–ನಯಸೇನ, ಅನುಕಲ್ಪನೆ, ಸಂಪಾದಿತ (ಇತರರೊಡನೆ)–ವಿಕಾಸ, ಕಾವ್ಯಲಹರಿ, ಕಾವ್ಯಸಂಪುಟ, ಅನುವಾದ–ಶಂಕರಾಚಾರ್ಯ, ಕಬೀರ, ಲಿಂಡನ್ ಜಾನ್ಸನ್, ಮಕ್ಕಳಿಗಾಗಿ– ರಾಬಿನ್‌ಸನ್ ಕ್ರೂಸೋ, ಕವಿಜನ್ನ ಚಾವುಂಡರಾಯ. ಕಾವ್ಯಕೃತಿಗಳು–ನಳಚಂಪು ಸಂಗ್ರಹ, ಅಕ್ರೂರ ಚರಿತ್ರೆ ಸಂಗ್ರಹ, ಕರ್ಣ ಕರ್ಣಾಮೃತ ಇತರ ಕನ್ನಡ ಶಾಸನ ಪರಿಚಯ, ಭಾಷಾಂತರ ಪಾಠಗಳು, ಕಾಲೇಜು ಭಾಷಾಂತರ, ಇಗೋ ಕನ್ನಡ ಸಾಮಾಜಿಕ ನಿಘಂಟು, 60ಕ್ಕೂ ಹೆಚ್ಚು ಕೃತಿ ರಚನೆ. ಹಲವಾರು ಪ್ರಶಸ್ತಿಗಳು–ರಾಜ್ಯೋತ್ಸವ ಪ್ರಶಸ್ತಿ, ಸಾಹಿತ್ಯ ಅಕಾಡಮಿ ಪ್ರಶಸ್ತಿ, ಶಂಬಾ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಅ.ನ.ಕೃ ಪ್ರತಿಷ್ಠಾನ ಪ್ರಶಸ್ತಿ, ಕೆ.ಎಂ. ಮುನ್ಶಿ ಪ್ರಶಸ್ತಿ ಮುಂತಾದವು.

ಕೃಪೆ : ಅಂತರ್ಜಾಲ

---

**ಅಸೋಸಿಯೇಶನ್‌ನಲ್ಲಿ**

## ವಿದ್ವಾನ್ ಡಿ. ಬಾಲಕೃಷ್ಣ ಅವರ ವೀಣಾ ವಾದನ




ಮೈಸೂರು ಅಸೋಸಿಯೇಷನ್ ಮುಂಬೈ ಇವರ ಆಶ್ರಯದಲ್ಲಿ ದಿನಾಂಕ 11.08.2012 ರಂದು ಗಾನ ಕಲಾಶ್ರೀ ವಿದ್ವಾನ ಡಿ. ಬಾಲಕೃಷ್ಣ ಅವರ ವೀಣಾ ವಾದನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಅಂದು ಅಸೋಸಿಯೇಷನ್‌ನ ಅಧ್ಯಕ್ಷರಾದ ಶ್ರೀ. ರಾಮಭದ್ರರವರು ಕಲಾವಿದರ ಬಗ್ಗೆ ಮಾತನಾಡುತ್ತಾ ಅವರ ತಂದೆಯವರಾದ ವಿದ್ವಾನ ವೀಣಾ ದೊರೆಸ್ವಾಮಿ ಅಯ್ಯಂಗಾರ್ ಮತ್ತು ಅಧ್ಯಕ್ಷರ ತಾತಂದಿರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಗೆಳೆತನ ಮತ್ತು ಪ್ರೀತಿಯನ್ನು ತಿಳಿಸಿದರು. ಇವರಿಗೆ ಪ್ರಿಯವಾದ ಎರಡು ಕೃತಿಗಳನ್ನು ದೊರೆಸ್ವಾಮಿ ಅಯ್ಯಂಗಾರರು ನುಡಿಸಿದ ವೈಖರಿಯನ್ನು ವಿವರಿಸಿ ಇಂದು ಇವರು ಕೂಡಾ ಆ ಎರಡು ಕೃತಿಗಳನ್ನು ನುಡಿಸಬೇಕೆಂದು ವಿನಂತಿಸಿಕೊಂಡರು.

ಶ್ರೀಯುತರು ತ್ಯಾಗರಾಜರ ವಿರಚಿತ ಮಾಯಾ ಮಾಳವಗೌಳ ರಾಗದ "ತುಳಸೀದಳ" ಎಂಬ ಕೃತಿಯನ್ನು ರೂಪಕತಾಳದಲ್ಲಿ ಪ್ರಸ್ತುತಪಡಿಸಿದರು. ಸೊಗಸಾಗಿ ಸ್ವರ ಪ್ರಸ್ತಾರವನ್ನು ಮಾಡಿ ತಮ್ಮ ಕಛೇರಿಗೆ ತಳಪಾಯ ಹಾಕಿದರು, ಪುರಂದರ ದಾಸ ವಿರಚಿತ "ಜಯ ಜಯ ಜಯಜಾನಕಿಕಾಂತ" ಎಂಬ ಕೀರ್ತನೆಯನ್ನು ನಾಟರಾಗದಲ್ಲಿ ನುಡಿಸಿ, ಅದರಲ್ಲಿರುವ ಮಧ್ಯಮಕಾಲ ಸಾಹಿತ್ಯ ಮತ್ತು ತ್ವರಿತ ಗತಿಯ ಸ್ವರ ಪ್ರಸ್ತಾರದಿಂದ ಶ್ರೋತೃಗಳ ಮನಗೆದ್ದರು.

ಮುತ್ತುಸ್ವಾಮಿ ದೀಕ್ಷಿತರ ದ್ವಿಜಾವಂತಿ ರಾಗದ "ಅಖಿಲಾಂಡೇಶ್ವರಿ"ಯನ್ನು ರಾಗ ಭಾವದೊಂದಿಗೆ ನುಡಿಸಿದರು, ಶ್ರೀರಂಜನಿ ರಾಗದಲ್ಲಿ ಚಿಕ್ಕ ಆಲಾಪನೆ, "ಸೊಗಸುಗಾ ಮೃದಂಗತಾಳಮು" ಕೃತಿ ಮತ್ತು ಸ್ವರ ಪ್ರಸ್ತಾರಗಳು ಭಾವ ಸ್ಪಷ್ಟತೆಯನ್ನು ಎತ್ತಿಹಿಡಿಯಿತು. ತದನಂತರ ಪಟ್ಣಂ ಸುಬ್ರಮಣ್ಯ ಅಯ್ಯರ್ ಅವರ 'ಕದನಕೂತುಹಲ'ರಾಗದ ರಘುವಂಶವನ್ನು ಶ್ರೋತೃಗಳ ಮನಸ್ಸಿನ ವೇಗಕ್ಕೆ ನುಡಿಸಿ ರಂಜಿಸಿದರು. ನಂತರ ಸಾರಮತಿಯಲ್ಲಿ ನುಡಿಸಿದ ತ್ಯಾಗರಾಜರ "ಮೋಕ್ಷಮುಗಲದಾ" ಸಾಹಿತ್ಯ ಸ್ಪಷ್ಟತೆಯಿಂದ ಕೂಡಿತ್ತು.

*(ಪುಟ 23ಕ್ಕೆ)*

ನೇಸರು

ತಿಂಗಳೋಲೆ

ಸಂಪುಟ 30 ಸಪ್ಟೆಂಬರ್ 2012 ಸಂಚಿಕೆ 8

ಗೌ. ಸಂಪಾದಕರು :

**ಡಾ. ಗಿರಿಜಾ ಶಾಸ್ತ್ರಿ**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎಸ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Fax : 2401 0574

Email :

mysoreassociation.mumbai@gmail.com

Website :

www.mysoreassociation.in

# ಶತಾಯುಷಿ ನಿಘಂಟು ಸಾರ್ವಭೌಮ



"ನೀವು ಮಾತಾಡಿ ನಾನು ಕೇಳ್ತೀನಿ" ಸೋಫಾದಮೇಲೆ ಕುಳಿತುಕೊಳ್ಳುತ್ತಾ ಹೇಳಿದ'ರು ಶತಾಯುಷಿ, ನಿಘಂಟು ಸಾರ್ವಭೌಮರಾದ ಜಿ. ವೆಂಕಟಸುಬ್ಬಯ್ಯನವರು. ತಮ್ಮ ಶಿಸ್ತು ಬದ್ಧ ಜೀವನ, ಕಾರ್ಯ ಹಾಗೂ ಮಾತುಗಳಿಂದ ನೂರಾರು ಕನ್ನಡ ಮನಸ್ಸುಗಳನ್ನು ಅರಳಿಸಿರುವ ಕನ್ನಡದ ಭಾ'ಗ್ಯವನ್ನು ಬರೆಯುಂವತಹ ಕೆಲವೇ ವಿದ್ವಾಂಸರಲ್ಲಿ ಒಬ್ಬರಾದ ಅವರು ನಮ್ಮ ಮಾತುಗಳಿಗೆ ಕಿವಿಕೊಡಲು ತಯಾರಾದರು. ಅರಿವು ಕಣ್ತೆರೆದವರಲ್ಲಿ ಮಾತ್ರ ಇನ್ನೊಬ್ಬರ ಮಾತುಗಳನ್ನು ಕೇಳಿಸಿಕೊಳ್ಳುವ ಶಕ್ತಿಯಿರುತ್ತದೆ. ಅದೂ ನಮ್ಮಂತಹ ಕಿರಿಯರ ಮಾತುಗಳನ್ನು ಕೇಳಿಸಿಕೊಳ್ಳಲು ತಯಾರಾಗುವುದೆಂದರೆ !?

"ನಿಮ್ಮ ಮಾತುಗಳನ್ನು ಕೇಳಬೇಕೆಂದೇ ನಾವು ಬಂದಿದ್ದೀವಿ ಸಾರ್" ಎಂದಾಗ ನಮ್ಮ ಕೋರಿಕೆಗೆ ಬೆಲೆಯಿತ್ತು ಮಾತನಾಡುತ್ತಲೇ ಹೋದರು ಒಂದು ತಾಸು. ಮುಖದ ಮೇಲೆ ಅಯಾಸ ಸುಳಿಯಲಿಲ್ಲ. ನಡುವೆ ನೀರನ್ನೂ ಕುಡಿಯಲಿಲ್ಲ. ನೇರ ಶಿಸ್ತಾಗಿ ಕುಳಿತ ಭಂಗಿಯನ್ನು ಒಮ್ಮೆಯೂ ಬದಲಾಯಿಸಲಿಲ್ಲ. ನಾವುಗಳೇ ಕಾಲಮೇಲೆ ಕಾಲು ಹಾಕಿ ಅವರ ಮುಂದೆ ಕುಳಿತಿದ್ದೆವು.

ಒಂದು ಸಂವತ್ಸರವನ್ನು ಪೂರೈಸುತ್ತಿರುವ' ಜಿ. ವೆಂಕಟಸುಬ್ಬಯ್ಯನವರನ್ನು ಅಭಿನಂದಿಸಬೇಕೆಂದು, ಅಸೋಸಿಯೇಷನ್ನಿನ ಪರವಾಗಿ ನಾವು ಐದು ಜನ– ಮಂಜುನಾಥಯ್ಯ, ಡಾ. ಮಂಜುನಾಥ್, ಉಮಾರಾವ್, ಪ್ರಭಾಕರರಾವ್ ಇವರುಗಳು ಅವರ ಜಯನಗರದ ಮನೆಯಲ್ಲಿ ಸೇರಿದ್ದೆವು. ನಾವೆಲ್ಲಾ ಸೇರಿ ಅವರ ಜೊತೆ ಸಂವಾದ ಮಾಡಬೇಕೆಂದು ನಿರ್ಧರಿಸಿ ಅವರ ಅನುಕೂಲವಾದ ಸಮಯ ಕೇಳಿ ಅವರಿಗೆ ಫೋನ್ ಮಾಡಿದಾಗ ಮಾರನೆಯ ದಿನವೇ ನಮಗೆ ಅಂತಹ ಅವಕಾಶವನ್ನು ಒದಗಿಸಿಕೊಟ್ಟರು. ಆವರಿಗೆ ತಿಳಿಸಿದಂತೆ ಆಗಸ್ಟ್ 10, ಶುಕ್ರವಾರ ಸಂಜೆ ಅವರ ಮನೆಯ ಕರೆಗಂಟೆಯನ್ನು ಒತ್ತಿದಾಗ ಖುದ್ದಾಗಿ ಅವರೇ ಬಂದು ಬಾಗಿಲು ತೆರೆದು ನಮ್ಮನ್ನು ಒಳ ಬರಮಾಡಿಕೊಂಡರು. ಬಿಳಿಯ ಪಂಚೆ ಬಿಳಿಯ ಶರಟು, ತೊಂಬತ್ತೊಂಬತ್ತು ವಸಂತಗಳ ಗುರುತೇ ಸಿಗದ ಬೆಳ್ಳಗಿನ ಮುಖದ ಮೇಲೆ ಬೆಳಕು ಪ್ರತಿಫಲಿಸುತ್ತಿತ್ತು. ಅವರ ಕುಳಿತ ಭಂಗಿ, ಮಾತನಾಡುವುದರಲ್ಲಿದ್ದ ಉತ್ಸಾಹ, ಯಾವುದರ ಬಗ್ಗೆಯೂ ಆಕ್ಷೇಪಣೆ ಇಲ್ಲದ ಅವ'ರ ಎಣೆಯಿಲ್ಲದ ಆಶಾವಾದ ಬೆರಗು ಹುಟ್ಟಿಸುತ್ತಿತ್ತು. ಹೊರನಾಡ ಕನ್ನಡಿಗರ ಕನ್ನಡ ಚಟುವಟಿಕೆಗಳನ್ನು ಬಾಯಿತುಂಬಾ ಪ್ರಶಂಸಿಸಿದರು. ಅಸೋಸಿಯೇಷನ್ನಿನ ಪರವಾಗಿ ನಾವು ಅರ್ಪಿಸಿದ ಸಣ್ಣ ಸತ್ಕಾರವನ್ನು ತುಂಬು ಸಂತೋಷದಿಂದ ಸ್ವೀಕರಿಸಿದರು. 'ನನಗೆ ನೂರು ವರ್ಷವಾಗುತ್ತಿದೆಯೇ ಕಾಲ ಹೋದದ್ದೇ ತಿಳಿಯಲಿಲ್ಲ' ಎಂದು ಆಶ್ಚರ್ಯ ಪಟ್ಟರು. ಈ ಮಗುವಿನ ಬೆರಗೇ, ದಣಿವರಿಯದ ಉತ್ಸಾಹವೇ ಅವರನ್ನು ನೂರುಕಾಲ ಬಾಳಿಸುತ್ತಿರುವುದರ ಹಿಂದಿನ ರಹಸ್ಯವಿರಬೇಕು. ನಾನು ಆಗ್ರಹ ಪಡಿಸಿದ್ದಕ್ಕೆ ಅವರ ಪಾರಿತೋಷಕಗಳು ಇಟ್ಟಿರುವ ಕೋಣೆಗೆ ಕರೆದುಕೊಂಡು ಹೋದರು. ಅಲ್ಲಿ ಎಲ್ಲೆಲ್ಲೂ ಜೋಡಿಸಿಟ್ಟ ಪುಸ್ತಕಗಳು ಮತ್ತು ಪಾರಿತೋಷಕಗಳು! "ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಲು ಬೇಡಿರೋ ಹುಚ್ಚಪ್ಪಗಳಿರಾ" ಎನ್ನುವುದರ ಪ್ರತೀಕವಾಗಿ ಅವು ಹೊಳೆಯುತ್ತಿದ್ದವು. ಅವುಗಳ ಮಧ್ಯೆ ನಿಂತಿದ್ದರು ವಿನೀತ ಮೂರ್ತಿ. ನೂರು ವಸಂತಗಳನ್ನು ಸಮೀಪಿಸುತ್ತಿರುವ ಸಾರ್ಥಕ್ಯ ಭಾವ ಅವರ ಕಣ್ಣುಗಳಲ್ಲಿ ಹೊರಹೊಮ್ಮುತಿತ್ತು. ಅವರಿಂದ ಬೀಳ್ಕೊಂಡು ಹೊರಟ ನಾವು ಡ್ರೈವರಿಗಾಗಿ ಕಾದು ಬಹಳ ಹೊತ್ತಿನಂತರ ಅವನು ಬಂದ ಮೇಲೆ ಕಾರು ಮರೆಯಾಗುವವರೆಗೆ ಗೇಟಿನ ಬಳಿ ನಿಂತೇ ಇದ್ದರು. ಅವರ ಭೌತಿಕ ಎತ್ತರಕ್ಕೆ ಸವಾಲಾಗಿ ನಿಂತಿತ್ತು ಅವರ ದೈತ್ಯ ಪ್ರತಿಭೆ. ಅವರ ಸೌಜನ್ಯಕ್ಕೆ, ಅವರ ಮೌಲ್ಯಾರಾಧನೆಗೆ ನಮೋನಮಃ.

**— ಡಾ. ಗಿರಿಜಾ ಶಾಸ್ತ್ರಿ**



# ಪ್ರೊ. ಜಿ.ವಿ. ಅವರೊಂದಿಗೆ ಸಂವಾದ

*ಭಾಗವಹಿಸಿದವರು :* **ಡಾ. ಮಂಜುನಾಥ್, ಮಂಜುನಾಥಯ್ಯ, ಉಮಾ ರಾವ್, ಪ್ರಭಾಕರ್ ರಾವ್ ಮತ್ತು ಡಾ. ಗಿರಿಜಾ ಶಾಸ್ತ್ರಿ**



ಆಗಸ್ಟ್ 10, 2012ರಂದು ಮೈಸೂರು ಅಸೋಸಿಯೇಷನ್ನಿನ ಸದಸ್ಯರು, ಪ್ರಾ. ಈ. ವೆಂಕಟಸುಬ್ಬಯ್ಯನವರ ಜಯನಗರದ ಮನೆಗೆ ಹೋಗಿ, ''ಮೇಷ್ಟ್ರನ್ನ'' ಸನ್ಮಾನಿಸಿದರು.

ಮೇಷ್ಟರಿಗೆ ಆಗಸ್ಟ್ 23ರಂದು 99 ತುಂಬಿ ನೂರನೆಯ ವರ್ಷ ಮೊದಲಾಗಿದೆ. 'ನೇಸರು' ಪತ್ರಿಕೆಯ ಸಂಪಾದಕರು, ಡಾ.ಗಿರಿಜಾ ಶಾಸ್ತ್ರಿ, ಹೆಸರಾಂತ ಬರಹಗಾರ್ತಿ ಶ್ರೀಮತಿ ಉಮಾ ರಾವ್, ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ. ಕೆ. ಮಂಜುನಾಥಯ್ಯ ಹಾಗೂ ಡಾ. ಮಂಜುನಾಥ್ ಅವರು, ಈ ಸಂದರ್ಭದಲ್ಲಿ ಪ್ರಾ. ವೆಂಕಟಸುಬ್ಬಯ್ಯನವರೊಡನೆ ಮಾತು-ಕತೆ ಆಡಿದರು

ನಿಘಂಟು ನಿಸ್ಸೀಮ, ನಿಘಂಟು ಸಾರ್ವಭೌಮ, ಸಂಚಾರಿ ಜೀವಂತ ಪದಕೋಶ, ಭಾಷಾವಿಜ್ಞಾನ ಪ್ರವೀಣ, ಕನ್ನಡದ ಕಿಟ್ಟೆಲ್ ಎಂದೆಲ್ಲಾ ಹೆಸರಾದ ಜಿ. ವೆಂಕಟಸುಬ್ಬಯ್ಯನವರು ಹುಟ್ಟಿದ್ದು 1913 ನೆಯ ಇಸವಿ ಆಗಸ್ಟ್ 23ರಂದು ಕೃಷ್ಣರಾಜಪೇಟೆ ತಾಲೂಕಿನ ಕೈಗೋನಹಳ್ಳಿಯಲ್ಲಿ. 1937 ರಲ್ಲಿ ಮೈಸೂರಿನ ಮಹಾರಾಜಾ ಕಾಲೇಜಿನಿಂದ ಸುವರ್ಣ ಪದಕದೊಂದಿಗೆ ಎಂ.ಎ. ಪದವಿಯನ್ನು ಪಡೆದ ಶ್ರೇಯಸ್ಸು ಇವರದು. ಶಿಕ್ಷಣ, ಸಾಹಿತ್ಯ ವಿಮರ್ಶೆ, ಭಾಷಾ ಸಂಶೋಧನೆ, ಸಮಾಜಸೇವೆ-ಹೀಗೆ ಹಲವು ಪ್ರಕಾರಗಳಲ್ಲಿ ಪ್ರಸಿದ್ಧರಾದ ಪ್ರೊ. ಜಿ.ವಿ, ಈ ಶತಮಾನ ಕಂಡ ಅಪರೂಪದ ಭಾಷಾತಜ್ಞ. ಸು. ನಾಲ್ಕು ದಶಕಗಳ ಕಾಲ ಶಿಕ್ಷಣ ಕ್ಷೇತ್ರದಲ್ಲಿ ಅಹರ್ನಿಶಿ ದುಡಿದು ಅನೇಕ ವಿದ್ಯಾರ್ಥಿಗಳಿಗೆ, ಜ್ಞಾನಾರ್ಥಿಗಳಿಗೆ ದಾರಿದೀವಿಗೆಯಾದರು. ಇವರ ನಿರಂತರ ಭಾಷಾ ಸಂಶೋಧನೆಯ ಫಲವಾಗಿ ಕನ್ನಡಿಗರಿಗೆ ದೊರಕಿದ ಅಮೂಲ್ಯ ಆಸ್ತಿ ಎಂದರೆ ಹಲವಾರು ನಿಘಂಟುಗಳು. ಅಖಿಲ ಭಾರತ ನಿಘಂಟುಕಾರರ ಸಂಘಕ್ಕೆ ಅನೇಕ ವರ್ಷಗಳಕಾಲ ಉಪಾಧ್ಯಕ್ಷರಾಗಿದ್ದ ಪರೊ. ಜಿ. ವೆಂಕಟಸುಬ್ಬಯ್ಯನವರು ಇಪ್ಪತ್ತು ವರುಷಗಳ ಕಾಲಕನ್ನಡ ಸಾಹಿತ್ಯ ಪರಿಷತ್ತಿನ ಬೃಹನ್ನಿಘಂಟಿನ ಪ್ರದಾನ ಸಂಪಾದಕರಾಗಿ ಆರು ಆರು ಸಂಪುಟಗಳನ್ನು ಪ್ರಕಟಿಸಿದರು. ಆನಂತರದಲ್ಲಿಯೂ ಪ್ರೊ. ಜಿ.ವಿ ಯವರ ಸಂಪಾದಕತ್ವದಲ್ಲಿ ಅನೇಕ ನಿಘಂಟುಗಳು ಹೊರಬಂದಿವೆ. ಮೂರು ಭಾಷೆಗಳನ್ನು ಆಳವಗಿ ಅಭ್ಯಾಸ ಮಾಡಿರುವ ಇವರ **'ಇಗೋ ಕನ್ನಡ'** ಎಂಬ ಪ್ರಜಾವಾಣಿಯ ಅಂಕಣ ಕನ್ನಡಿಗರ ಭಾಷೆಯ ಸೊಗಡನ್ನು ಸವಿಯುವಂತೆ ಮಾಡಿದೆ. ಜನಸಾಮಾನ್ಯರಿಂದಲೂ ಬಂದ ವೈವಿಧ್ಯಮಯ ಪ್ರಶ್ನೆಗಳಿಗೆ ಉತ್ತರ ನೀಡುವುದರಲ್ಲಿ ತೊಡಗಿಸಿಕೊಂಡ ಈ ಅಂಕಣ, ಹಲವರ, ಭಾಷೆಗೆ ಸಂಬಂಧಿಸಿದ ಸಂದೇಹಗಳನ್ನು ನಿವಾರಣೆ ಮಾಡಿತು. ಇಂತಹ ಭಾಷೆಗೆ ಸಂಬಂಧಿಸಿದ ಪ್ರಶ್ನೋತ್ತರಗಳನ್ನು ಒಟ್ಟುಗೂಡಿಸಿ ವೆಂಕಟಸುಬ್ಬಯ್ಯನವರು **'ಇಗೋ ಕನ್ನಡ'** ಎಂಬ ಹೆಸರಿನಲ್ಲೇ ಒಂದು ಸಾಮಾಜಿಕ ನಿಘಂಟನ್ನು ಹೊರತಂದರು.

**ವೈ.ಅ** : ನೀವು ನೂರನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಅಭಿನಂದನೆಗಳನ್ನು ಸಲ್ಲಿಸಲು ನಾವು ಮುಂಬಯಿಯ ಮೈಸೂರು ಅಸೋಸಿಯೇಷನ್ನಿನಿಂದ ಬಂದಿದ್ದೇವೆ.

**ಜಿ.ವೆಂ:** ನನಗೆ ನೂರುವರುಷ ವಾಗುತ್ತಿದೆಯೇ? ನೀವು ಹೇಳಿದಾಗ ಮಾತ್ರ ನನಗೆ ನೂರು ತುಂಬುತ್ತಿದೆ ಎಂದು ಅನಿಸುತ್ತದೆ. ಕಾಲ ಎಷ್ಟು ಬೇಗ ಹೋಯಿತು.

**ವೈ.ಅ:** ಸಾರ್, ನಿಮ್ಮ ಈ ನೂರುವರ್ಷಗಳಲ್ಲಿ ನೀವು ಕಂಡ ಮಹತ್ವದ ಮಾರ್ಪಾಡುಗಳೇನೇನು?

**ಜಿ.ವೆಂ:** ನನ್ನ ಜೀವನದಲ್ಲಿ ನಾನು ಕಂಡ ಮುಖ್ಯ ಘಟನೆ ಎಂದರೆ ಗುಲಾಮರಾಜ್ಯವಾಗಿದ್ದ ಭಾರತ್, ಸ್ವತಂತ್ರವಾಯಿತಲ್ಲಾ ಅದು. ಅದು ಒಂದು ನಮ್ಮನ್ನೆಲ್ಲಾ ರೋಮಾಂಚಕಗೊಳಿಸಿತ್ತು. ಹಾಗೆ ನೋಡಿದರೆ ಮೈಸೂರು ರಾಜ್ಯದಲ್ಲಿ 1942 ರ ವರೆಗೆ ಸ್ವಾತಂತ್ರ್ಯ ಚಳುವಳಿಯ ಬಿಸಿ ಮುಟ್ಟಿರಲೇ ಇಲ್ಲ. ಏಕೆಂದರೆ ರಾಜ್ಯಭಾರ ಅಷ್ಟು ಚೆನ್ನಾಗಿತ್ತು. ಲಂಚದ ಹೆಸರೇ ಇರಲಿಲ್ಲ. ಮಿರ್ಜಾ ಇಸ್ಮಾಯಿಲ್, ಮಾಧವರಾವ್, ವಿಶ್ವೇಶ್ವರಯ್ಯನಂತಹ ದಿವಾನರು ಇದ್ದದ್ದರಿಂದ ರಾಜ್ಯದಲ್ಲಿ ಯಾವ ಆತಂಕ-ಶಂಕೆಗಳೇ ಇರಲಿಲ್ಲ. ನಲ್ಲಿಗೆ ಕೊಳವೆ ಹಾಕಿಸಿದಾಗ, ಪುರಸಭೆಯಲ್ಲಿ ಕಾರಕೂನ, ತಾನೇ ಮನೆ ಮನೆಗೆ ಬಂದು "ರೂಪಾಯಿ ಕೊಂಡು 3½ ರೂಪಾಯಿಕೊಂಡು ರಸೀತಿ ಕೊಟ್ಟು ಹೋಗುತ್ತಿದ್ದ. ಇವತ್ತು ಕಾಲ ಬದಲಾಗಿದೆ.

ಹೀಗಾಗಿ, ಸ್ವಾತಂತ್ರ್ಯ ಚಳುವಳಿಯ ಬಿಸಿ ಮೈಸೂರಿಗೆ ತಾಗಿಯೇ ಇರಲಿಲ್ಲ. 1942 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಗಾಂಧಿಯವರನ್ನು ಅರೆಸ್ಟ್ ಮಾಡಿದಾಗ ಮೈಸೂರು ರಾಜ್ಯದಲ್ಲೆಲ್ಲಾ ಬಿಸಿ ಏರಿತು. ನಾವೆಲ್ಲಾ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳು ಪೋಲಿಸರ ಮುಂದೆ ದಸ್ತಗಿರಿಗಾಗಿ ನಿಂತಿದ್ದೀವಿ. ಈ ಸ್ವಾತಂತ್ರ್ಯ ನಮಗೆ 1947 ಸಿಕ್ಕಾಗ ನಾವೆಲ್ಲಾ ತರುಣರು ಕುಣಿದಾಡಿದ್ದಿವಿ. ಅದೊಂದು ಅಪೂರ್ವ ಘಟನೆ, ನನ್ನ ಮನಸ್ಸಿನಲ್ಲಿ ಅಚ್ಚೊತ್ತಿ ನಿಂತಿದೆ.

**ವೈ.ಅ:** ನೀವು ತರುಣರಾಗಿದ್ದಾಗ, ವಿದ್ಯಾರ್ಥಿಯಾಗಿದ್ದಾಗಿನ ಮಾತನ್ನು ಆಡಿದಿರಿ. ಆಗ ವಿದ್ಯಾಭ್ಯಾಸ ಹೇಗಿತ್ತು?

**ಜಿ.ವೆಂ:** ವಿದ್ಯಾಭ್ಯಾಸ ಅಚ್ಚು ಕಟ್ಟಾಗಿತ್ತು. ಪ್ರೈಮರಿ ಹಾಗೂ ಮಿಡಲ್ ಸ್ಕೂಲ್ ವಿದ್ಯಾಭ್ಯಾಸವಂತೂ ಎಲ್ಲರಿಗೂ ಫ್ರೀ. ಮಹಾರಾಜ ಕಾಲೇಜ್‌ನಲ್ಲಿ ಕೇವಲ 300 ಜನ



ವಿದ್ಯಾರ್ಥಿಗಳಿದ್ದರು. ಪ್ರೊಫೆಸರ್‌ಗಳಂತೂ ಅಂತಹ ಘಟಾನುಘಟಿಗಳಿದ್ದರು. ಬಿ.ಎಂ.ಶ್ರೀ. ಅವರ ಮುಂದಾಳುತನದಲ್ಲಿ ನವೋದಯ ಮೊದಲಾಗಿ ಎಲ್ಲರಲ್ಲೂ ಮಿಂಚು ಹರಿಯುತ್ತಿತ್ತು. ನಮಗೆಲ್ಲರಿಗೂ ಕನ್ನಡ ಎಷ್ಟು ಚೆನ್ನಾಗಿ ಬರುತ್ತಿತ್ತೋ, ಇಂಗ್ಲೀಷ್ ಕೂಡ ಅಷ್ಟೇ ಚೆನ್ನಾಗಿ ಬರುತ್ತಿತ್ತು. ಪ್ರತಿಯೊಬ್ಬರಿಗೂ ಅವರವರ ಪ್ರಾಧ್ಯಾಪಕರ ಗಮನ ಇರುತ್ತಿತ್ತು. ಅಂತಹ ಪ್ರಾಧ್ಯಾಪಕರನ್ನು ವಿಶ್ವವಿದ್ಯಾಲಯ ಹಾಗೂ ದಿವಾನರು ಹುಡುಕಿ ಕರೆಯುತ್ತಿದ್ದರು. ಈಗ ವಿಶ್ವವಿದ್ಯಾಲಯಗಳಲ್ಲಿ, ಕಾಲೇಜುಗಳಲ್ಲಿ ರಾಜಕೀಯ ತುಂಬಿದೆ. ಜಾತಿ–ಮತಗಳ ಮತ್ತು ಶಿಫಾರಿಸಿನ ಆಧಾರದ ಮೇಲೆ ನೇಮಕಾತಿ ನಡೆಯುತ್ತಿದೆ. ಹೀಗಾಗಿ ಶಿಕ್ಷಣ ಮಟ್ಟ ಕೀಳಾಗಿದೆ. ಈಗ ಬುದ್ಧಿವಂತರು ಯಾರೂ ಅಧ್ಯಾಪಕ ವೃತ್ತಿಗೆ ಬರುತ್ತಿಲ್ಲ. ಆದರೆ ಸಂತೋಷದ ಸಂಗತಿ ಎಂದರೆ ಈಗ ವಿದ್ಯಾರ್ಥಿ ವೃಂದದಲ್ಲಿ ತಿಳಿದ ಅಂತ ಬುದ್ಧಿವಂತ ಮಕ್ಕಳು ಸಾಕಷ್ಟಿದ್ದಾರೆ.

**ವೈ.ಅ:** ಕನ್ನಡ ಬಾಷೆಯಲ್ಲಿ ಈಗ ಬೇರೆ ಬೇರೆ ಭಾಷೆಗಳ ಶಬ್ದಗಳು ಸೇರಿಕೊಳ್ಳುತ್ತಿವೆ. ಕೆಲವೆಡೆ, ಕನ್ನಡ ಪದಗಳು ಮರೆಯಾಗಿ, ಇಂಗ್ಲೀಷ್ ಪದಗಳು, ಕನ್ನಡ ಪದಗಳ ಉಚ್ಚಾಟನೆ ಮಾಡುತ್ತಿದೆ. ಈಗ ಬೆಂಗಳೂರಿನಲ್ಲಿ ಆಟೋ ರಿಕ್ಷಾದಲ್ಲಿ ಕೂತಾಗ ಲೆಫ್ಟ್, ರೈಟ್, ಸ್ಟ್ರೈಟ್ ಎಂದು ಹೇಳಬೇಕು. ಎಡ–ಬಲ–ನೇರ, ಎಲ್ಲವೂ ಅರ್ಥವಾಗದ ಪದಗಳಾಗಿವೆಯಲ್ಲ. ಹೀಗಾದರೆ ಕನ್ನಡಕ್ಕೆ ಆತಂಕವಲ್ಲವೇ?

**ಜಿ.ವೆಂ:** ಇಲ್ಲ. ಭಾಷೆ ನಿರಂತರವಾಗಿ ಬೆಳೆಯುತ್ತಾ ಹೋಗುತ್ತದೆ. ಇದಕ್ಕೆ ಯಾವ ಚೌಕಟ್ಟಿನ ಅಗತ್ಯವೂ ಇಲ್ಲ. ಲೈಫ್ಟ್ ರೈಟ್‌ಗಳ ಜೊತೆ, ಎಡ–ಬಲ ಕೂಡ ಇರುತ್ತವೆ. ಕನ್ನಡದ ಭಾಷಾ ಸಂಪತ್ತು ಹೆಚ್ಚಾಗುತ್ತದೆ. ನಮಗೆ ಯಾವ ಆತಂಕವೂ ಇಲ್ಲ. ಸಂಸ್ಕೃತದ ಪ್ರಭಾವ ಕನ್ನಡದ ಮೇಲಾದಾಗ, ಕನ್ನಡವನ್ನೂ ತಡೆಯುವ ಶಕ್ತಿ ಕನ್ನಡಕ್ಕಿದೆ. ಯಾವ ಅಪಾಯವೂ ಇಲ್ಲ.

**ವೈ.ಅ:** ಕನ್ನಡ ವಿನಾಶದ ಅಂಚಿನಲ್ಲಿವೆಯೇ?

**ಜಿ.ವೆಂ:** ಖಂಡಿತ ಇಲ್ಲ. 5 ಕೋಟಿ ಜನರ ಆಡುಮಾತಿನಲ್ಲಿದೆ. ಬೇರೆ ಬೇರೆ ಭಾಷೆಯ ಪದಗಳು ಸೇರಿ ಭಾಷೆ ಎನ್ರಿಚ್ ಆಗುತ್ತಿದೆ. ಅಮೇರಿಕಾದಲ್ಲಿ ಒಂದು ಕ್ರಿಶ್ಚಿಯನ್ ಸೆಮಿನರಿ ಒಂದು ರಿಸರ್ಚ್ ಮಾಡಿದೆ. ಪ್ರಪಂಚದಲ್ಲಿ ಇರುವ ಎಲ್ಲಾ ಭಾಷೆಗಳನ್ನು ಅಧ್ಯಯನ ಮಾಡಿ, ಅದು ಕನ್ನಡವನ್ನು 29 ನೆಯ ಮುಖ್ಯ ಭಾಷೆಯಾಗಿ ಪರಿಗಣಿಸಿದೆ. ಈಗ ಭಾಷೆ ಬಲ್ಲಿದವಾಗಿದೆ.

ಬಿ.ಎಂ.ಶ್ರೀ ಅವರ್ 'ಕನ್ನಡ ತಲೆ ಎತ್ತುವ ಬಗೆ' ಎನ್ನುವ ಉಪನ್ಯಾಸ 1911 ರಲ್ಲಿ ಆದ ಮೇಲೆ, ಕನ್ನಡ ನವೋದಯ ನಾಂದಿಯಾಯಿತು ಆನಂತರ 75 ವರ್ಷಗಳಲ್ಲಿ ಕನ್ನಡದಲ್ಲಿ ಸೊಗಸಾದ ಪ್ರಗತಿಯಾಯಿತು. ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಎಲ್ಲಾ ಚಳುವಳಿಗಳೂ ಕನ್ನಡ ಭಾಷೆಯನ್ನು ಪ್ರವರ್ಧಮಾನಕ್ಕೆ ತಂದವು. ನಮಗೆ 8 ಜ್ಞಾನಪೀಠ ಪ್ರಶಸ್ತಿಗಳು ಸಂದಿವೆ. ಇಂತಹ ಸಾಹಿತ್ಯ ಕೃಷಿ ಇನ್ನಾವ ಭಾಷೆಯಲ್ಲಿಯೂ ಆಗಿಲ್ಲ. ಮೊದಲು ನಮ್ಮ ಕಾಲದಲ್ಲಿ ಕೇವಲ 15–20 ಪುಸ್ತಕಗಳು ವರ್ಷದಲ್ಲಿ ಪ್ರಕಟವಾಗುತ್ತಿದ್ದವು. ಈಗ 3000–5000 ಪುಸ್ತಕಗಳು ವರ್ಷದಲ್ಲಿ ಪ್ರಕಟಿತವಾಗುತ್ತಿದೆ. ಮಹಿಳೆಯರು ಬಹು ಪ್ರಮಾಣದಲ್ಲಿ ಬರೆಯಲು ಮುಂದು ಬರುತ್ತಿದ್ದಾರೆ. ಆದುದರಿಂದ ಕನ್ನಡಕ್ಕೆ ಯಾವ ಭಯವೂ ಇಲ್ಲ.

**ವೈ.ಅ:** ಈಗ ಇಂಗ್ಲಿಷ್ ಮಾಧ್ಯಮದಿಂದ, ವಿದ್ಯಾರ್ಥಿಗಳು ಕನ್ನಡವನ್ನೇ ಕಲಿಯುತ್ತಿಲ್ಲವಲ್ಲ?

**ಜಿ.ವೆಂ:** ನಮ್ಮ ಸರ್ಕಾರದ ಶಿಕ್ಷಣದ ನೀತಿ ತಲೆ ಕೆಳಗಾಗಿದೆ. ಇಂಗ್ಲಿಷ್ ಕಲಿಕೆಯಿಂದ ಯಾವ ಅಪಾಯವೂ ಇಲ್ಲ. ಭಾಷೆಗಳನ್ನು ಕಲಿತಷ್ಟೂ ಲಾಭವೇ. ಆದರೆ ಪ್ರಾಥಮಿಕ, ಮಾಧ್ಯಮಿಕ ಹಂತದಲ್ಲಿ ಶಿಕ್ಷಣ ಮಾಧ್ಯಮ ಕನ್ನಡವೇ ಆಗಿರಬೇಕು. ಜೊತೆಗೆ ಇಂಗ್ಲಿಷ್ ನೂ ಒಂದು ವಿಷಯವಾಗಿ ಕಲಿಸಲಿ. ಅದಕ್ಕೆ ಬೇಕಾದರೆ ಒಳ್ಳೆಯ ತಕ್ಕಂತಹ ಉಪಾಧ್ಯಾಯರನ್ನು ನೇಮಿಸಲಿ, ವಿಶೇಷ ತರಗತಿಗಳನ್ನು ಏರ್ಪಾಡು ಮಾಡಿ ಒಳ್ಳೆಯ ಇಂಗ್ಲಿಷ್ ಅನ್ನು ಕಲಿಸುವ ವ್ಯವಸ್ಥೆ ಇರಬೇಕು. ನಂತರ ಮೇಲ್ತರಗತಿಗಳಲ್ಲಿ ಕನ್ನಡ – ಇಂಗ್ಲಿಷ್ ಸಮಸಮವಾಗಿ ನದೆದು, ವಿಶ್ವವಿದ್ಯಾಲಯಗಳಲ್ಲಿ ಇಂಗ್ಲಿಷ್ ಕಲಿತರೆ ಏನೂ ತೊಂದರೆ ಇಲ್ಲ. ಆದರೆ ಸರ್ಕಾರ ಇಂಗ್ಲಿಷ್ ಅನ್ನು ಪ್ರಾಥಮಿಕವೇಕೆ – ಶಿಶುವಿಹಾರಗಳಲ್ಲಿಯೇ ಕಲಿಸಲು ಆರಂಭಿಸಿದಾಗ ಈ ತೊಂದರೆ ಉಂಟಾಗುತ್ತದೆ. ಚೈನಾ–ಜಪಾನ್ ನಲ್ಲಿ ಕೇವಲ ಅವರ ಭಾಷೆಗಳೇ ಶಾಲೆಗಳಲ್ಲಿ ನಡೆಯುತ್ತವೆ.





ಇದರಲ್ಲಿ ತಂದೆ–ತಾಯಿಗಳು ಕೂಡ ಹೊಣೆಗಾರರು. ಏಕೆಂದರೆ ತಮ್ಮ ಮಕ್ಕಳ ಭವಿಷ್ಯ ಕೇವಲ ಇಂಗ್ಲಿಷ್ ಮೇಲೆಯೇ ಅವಲಂಬಿಸಿದೆ ಎಂದು ಕೊಂಡಾಗ, ಈ ವ್ಯವಸ್ಥೆಗೆ ಬೆಂಬಲ ದೊರೆಯುತ್ತದೆ. ನಮ್ಮ ಕಾಲದಲ್ಲಿ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಪಡೆದ ಎಷ್ಟೋ ಜನ ಇಂಗ್ಲಿಷ್ ನಲ್ಲಿಯೂ ಪರಿಣತೆಯನ್ನು ಪಡೆದಿದ್ದರು. ಅಧ್ಯಾಪಕರು ಕೂಡ ವಿದ್ಯಾರ್ಥಿಗಳನ್ನು ತಮ್ಮ ಮಕ್ಕಳಂತೆಯೇ ಕಂಡು, ಅವರ ಏಳಿಗೆಗೆ ಗಮನ ಕೊಡುವ ನಿಷ್ಠೆಯನ್ನು ಹೊಂದಿದ್ದರು. ಈಗ ಶಿಕ್ಷಣ ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತಿದೆ.


**ವೈ.ಅ:** ನಿಘಂಟು ರಚನೆಯ ಬಗ್ಗೆ ನಿಮ್ಮ ಆಸಕ್ತಿ ಎಂದಿನಿಂದ?

ಜಿವೆಂ: ಜನರ ಆಡುಮಾತಿನಲ್ಲಿ ನನಗೆ ಆಸಕ್ತಿ ಇತ್ತು. ಹಳ್ಳಿ ಹಳ್ಳಿಗೆ ಹೋಗಿ ಅವರ ಮಾತುಗಳನ್ನು ಗಮನಿಸುತ್ತಿದೆ. ಆಗ ಕಿಟ್ಟೆಲ್ ಅವರ ಪದಕೋಶ ಹೆಸರುವಾಸಿಯಾಗಿತ್ತು. ಆದರೆ ಅದು ಪರಿಪೂರ್ಣ ವೆಂದು ನನ್ನ ಅನಿಸಿಕೆಯಾಗಿರಲಿಲ್ಲ. ನನ್ನ ಗುರುಗಳಾಗಿದ್ದ ಎ.ಆರ್.ಕೃಷ್ಣಶಾಸ್ತ್ರಿಗಳು ನಿಘಂಟು ರಚನೆಯ ಯೋಜನೆಗೆ ನನ್ನನ್ನು ನೇಮಿಸಿದರು. ಹಗಲೂ ರಾತ್ರಿ ದುಡಿದು ಆರು ಸಂಪುಟಗಳನ್ನು ಹೊರತಂದೆ. ಏಳನೆಯ ಸಂಪುಟವನ್ನು ಅನಿವಾರ್ಯವಾಗಿ ಕೈಬಿಡಬೇಕಾಯಿತು.

**ವೈ.ಅ:** ಭಾಷೆಯ ಪ್ರಯೋಗದಲ್ಲಿ ಗೊಂದಲವಿದೆಯಲ್ಲಾ? ಮಹಿಳೆಯರು ಹೆಚ್ಚು ಹೆಚ್ಚಾಗಿ ಸಾಹಿತ್ಯ ಕೃಪೆಯಲ್ಲಿ ತೊಡಗಿದ್ದಾರೆ ಎಂದಿರಿ. ಆದರೆ ನಮ್ಮ ಸಾಹಿತ್ಯದಲ್ಲೆಲ್ಲಾ ಪುರುಷನೇ ಪ್ರಧಾನವಾಗಿರುವುದರಿಂದ "ಮಾನವ" ಎಂಬ



ಮೈಸೂರು ಅಸೋಸಿಯೇಷನ್‌ನ ಅಧ್ಯಕ್ಷರಾದ ಬಿ. ರಾಮಭದ್ರ, ಪತ್ನಿಯೊಂದಿಗೆ.



ಶಬ್ದದ ಗ್ರಹಿಕೆ ಹಿಂದೆ ಪುರುಷನೇ ಇದ್ದಾನೆ. ಇದಕ್ಕೆ ಪರ್ಯಾಯವೇನು?

**ಜಿ.ವೆಂ:** ಕನ್ನಡಲ್ಲಿ ಸಾಮಾನ್ಯ ಲಿಂಗ ಸಂಬೋಧನೆ ಇಲ್ಲ. ಹಿಂದೆ ಬರೆಯುತ್ತಿದ್ದವರೆಲ್ಲಾ ಪುರುಷರೇ ಆದುದರಿಂದ, ಅಲ್ಲಿ 'ಅವನೇ' ಹೆಚ್ಚಾಗಿ ಇದ್ದಿದ್ದು, ಏನೂ ಆಶ್ಚರ್ಯವಿಲ್ಲ. ಈಗ ಮಹಿಳೆಯರೂ ಚೆನ್ನಾಗಿ ಬರೆಯುತ್ತಿರುವುದರಿಂದ ನೀವು 'ಮಾನವಿ' ಎಂದು ಬಳಸಬಹುದು.

**ಮೈ.ಅ:** ಈಗ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಪಟ್ಟ ದೊರಕಿದೆ. ಈಗ ಮುಂದಿನ ಹಾದಿಯೇನು?

**ಜಿ.ವೆಂ:** ಶಾಸ್ತ್ರೀಯ ಭಾಷೆ ಎನ್ನುವುದು ಅನುಚಿತ. ನಾವು 'ಅಭಿಜಾತ ಭಾಷೆ' ಅಥವಾ 'ಸಮೃದ್ಧ ಪ್ರಾಚೀನ ಭಾಷೆ' ಎಂಬ ಹೆಸರನ್ನು ಉಪಯೋಗಿಸಬೇಕು. ಕನ್ನಡಕ್ಕೆ ಅಭಿಜಾತ ಭಾಷೆಯ ಸ್ಥಾನವೇನೋ ಸಿಕ್ಕಿತು. ಆದರೆ ನಮ್ಮವರು ಯಾವ ಯೋಜನೆಗಳನ್ನು ಹಾಕಿಕೊಂಡಿಲ್ಲ. ತಮಿಳರು ಯೋಜನೆಗಳನ್ನು ರೂಪಿಸಿದರು. ಅದಕ್ಕಾಗಿ ಸರ್ಕಾರ ಅವರಿಗೆ ಗ್ರಾಂಟ್ಸ್ ಮಂಜೂರು ಮಾಡಿತು. ಈಗ ನಮ್ಮವರೂ ಯೋಜನೆಗಳನ್ನು ಹಾಕಿಕೊಂಡು ಮೈಸೂರಿನಲ್ಲಿ ಮೊದಲು ಮಾಡಿರುವುದು ಸಂತೋಷದ ಸುದ್ದಿ. ಹಿಂದೆ ಶ್ರೀ.ವಿ.ಕೆ.ಆರ್.ವಿ.ರಾವ್ ಅವರು 'ಅಖಿಲ ಭಾಷಾ ನಿಘಂಟು' ಗಾಗಿ ಕೇಂದ್ರ ಸರ್ಕಾರದ ಆಸರೆಯಲ್ಲಿ ಒಂದು ಸಭೆಯನ್ನು ಕರೆದು ಮೊದಲ ಗ್ರಾಂಟ್ ಕೇವಲ ಹಿಂದಿಗೆ ಮೀಸಲಾಗಿರಬೇಕೆಂದಾಗ ನಾನು ಅದನ್ನು ಪ್ರತಿಭಟಿಸಿದ್ದೆ.

**ಮೈ.ಅ:** ಜೆ. ಕೃಷ್ಣಮೂರ್ತಿಯವರ ಕೃತಿಯೊಂದನ್ನು 'ತಿಳಿದುದೆಲ್ಲ ಬಿಟ್ಟು' ಎಂದು ಕನ್ನಡಕ್ಕೆ ಅನುವಾದಿಸಿದ್ದೀರಿ. ಅವರ ವಿಚಾರ ಪ್ರಭಾವ ನಿಮ್ಮ ಮೇಲೆ ಆಗಿದೆಯೇ?



**ಜಿ.ವೆಂ:** ನಾನೇನು ಅವರ ವಿಚಾರಗಳ ಅನುಯಾಯಿ ಅನುವಾದಿಸ ಬೇಕು ಅನ್ನಿಸಿತು. ಹೀಗಾಗಿ ಅನುವಾದ ಮಾಡಿದೆ ಅಷ್ಟೆ.

**ಮೈ.ಅ:** ಆಡುಮಾತಿನ ಸೊಗಡು ಬರವಣಿಗೆಯ ಭಾಷೆಗಿಲ್ಲ. ಬರವಣಿಗೆಯಲ್ಲಿ ತೊಡಗಿದವರು ಬೇರೆಯೇ ಕ್ಲಿಷ್ಟ ಭಾಷೆಯನ್ನು ಕಟ್ಟುತ್ತಿದ್ದಾರೆಯಲ್ಲಾ?

**ಜಿ.ವೆಂ:** ಆಡುಮಾತು ಆಯಾ ಪ್ರದೇಶದ ವೈವಿಧ್ಯತೆಯನ್ನು ಒಳಗೊಂಡಿದೆ. ಆದರೆ ಕರ್ನಾಟಕದ ಏಕೀಕರಣ ಕೇವಲ ಗ್ರಂಥಸ್ಥ ಭಾಷೆ ಇಂದಾಗಿದೆ ಎನ್ನಬಹುದು. ಆ ಎಲ್ಲಾ ವೈವಿಧ್ಯತೆಗಳನ್ನು ಏಕೀಕರಣಗೊಳಿಸುವುದು ಬರವಣಿಗೆ. ಹೀಗಾಗಿ ಕರಾವಳಿಯ, ಉತ್ತರ ಕರ್ನಾಟಕದ, ದಲಿತರ, ಎಲ್ಲರ ಮಾತುಗಳು ಕೇಳುವುದು ಈ ಬರವಣಿಗೆಯ ಭಾಷೆಯಲ್ಲಿಯೇ, ಎಲ್ಲಾ ದೇಶಗಳಲ್ಲಲ್ಲಿಯೂ ಹೀಗೆಯೇ. ಚೀನಾದಲ್ಲಿ ಹಲವಾರು ಭಾಷೆಗಳಿವೆ. ಇವೆಲ್ಲವನ್ನೂ ಮೇಂಡರಿನ್ ಮೂಲಕವೇ ಪರಿಚಯ ಮಾಡಲಾಗುತ್ತದೆ. ಆದುದರಿಂದ ವ್ಯವಹಾರಕ್ಕೆ ನಮಗೆ ಗ್ರಾಂಥಿಕ ಭಾಷೆಯೊಂದು ಬೇಕೇ ಬೇಕು.

**ಮೈ.ಅ:** ಈಗ ರಾಜಕೀಯ ಹೊಲಸಾಗಿ ಅದರ ಪ್ರಭಾವ ಇನ್ನಿತರ ಎಲ್ಲಾ ಕ್ಷೇತ್ರಗಳಲ್ಲೂ ಮುಟ್ಟಿದೆ. ಹೀಗಾದರೆ ನಮ್ಮ ಮುಂದಿನ ಭವಿಷ್ಯ ಎಂತು?

**ಜಿ.ವೆಂ:** ನನಗೆ ಹೊಸ ಪೀಳಿಗೆಯ ಮೇಲೆ ಅಪಾರ ನಂಬಿಕೆ ಇದೆ. ಬುದ್ಧಿವಂತ ಪೀಳಿಗೆ. ಬೇರೆ ಬೇರೆ ಸಂಸ್ಕೃತಿಗಳ ಭಾಷೆಗಳ ಪರಿಚಯವಿದೆ. ಅವರುಗಳು ಇದಕ್ಕೆ ಪರಿಹಾರ ನೀಡುತ್ತಾರೆಂಬುದು ನನಗೆ ಭರವಸೆ ಇದೆ. ಇಂದಿನ ರಾಜಕೀಯ ಇನ್ನು ಕೇವಲ 15 ವರ್ಷಗಳಲ್ಲಿ ಬದಲಾಗುತ್ತದೆ. ಭವಿಷ್ಯದ ಬಗ್ಗೆ ನಾನು ಆಪ್ಟಿಮಿಸ್ಟಿಕ್. ಹಾಗೆ ನೋಡಿದರೆ ನಾವೆಲ್ಲರೂ ಆಶಾವಾದಿಗಳೇ ಆಗಿರಬೇಕು. ಅದೇ ಸಾಹಿತ್ಯದ ಸಮಾಜದ ನಾಗರಿಕತೆಯ ಗುರಿ

**ಮೈ.ಅ:** ಹೊರನಾಡಿನ ಕನ್ನಡಿಗರಿಗೆ ನಿಮ್ಮ ಸಂದೇಶವೇನು?

ಜಿವೆಂ: ನೀವುಗಳೆಲ್ಲಾ ಕನ್ನಡದ ಕೆಲಸವನ್ನು ಆಗಲೇ ಮಾಡುತ್ತಿದ್ದೀರಿ. ಮುಂಬಯಿ ಒಳ್ಳೆಯ ಸಾಹಿತ್ಯವನ್ನು ನೀಡಿದೆ. ಚಿತ್ತಾಲ, ಬಲ್ಲಾಳರಂತಹ ವರು ಕನ್ನಡವನ್ನು ಸಮೃದ್ಧಿ ಮಾಡಿದ್ದಾರೆ. ನಿಮ್ಮ ಕೆಲಸವನ್ನು ಹೀಗೆಯೇ ಮುಂದುವರೆಸಿ ಎನ್ನುವುದೇ ನನ್ನ ಸಂದೇಶ.

**ಮೈ.ಅ:** ನಿಮಗೆ ನಮ್ಮಗಳ ನಮಸ್ಕಾರ. ನಮ್ಮನ್ನು ಹರಸಿಬಿಡಿ.

ಜಿವೆಂ: ಹಾಗೇ ಆಗಲಿ. ಸುಖವಾಗಿರಿ.

ಮೈಸೂರು ಅಸೋಸಿಯೇಷನ್‌ನ ಅಧ್ಯಕ್ಷರಾದ ಬಿ. ರಾಮಭದ್ರ, ಪತ್ನಿಯೊಂದಿಗೆ.



# 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಭಾಷಣ

## (ಆಯ್ದ ಭಾಗ)

ಸರ್ವಜ್ಞಂ ತದಹಂ ವಂದೇ
ಪರಂಜ್ಯೋತಿಸ್ತಮೋಪಹಂ
ಪ್ರವೃತ್ತಾಯನ್ಮುಖಾದೇವಿ ಸರ್ವಭಾಷಾ ಸರಸ್ವತೀ
– **ನಾಗವರ್ಮ**

ಯಾರ ಮುಖದಿಂದೆಳ್ದು ನಿಂದಳೊ
ಭಾಷೆಯೆಲ್ಲಕು ದೇವಿ ಸರಸತಿ
ಅಂಥ ದೇವಗೆ ಎಲ್ಲ ಬಲ್ಲಗೆ
ತಮವ ದೂಡುವ ಹೊಳೆವ ಬೆಳಕಿಗೆ
ಇದಿಗೊ ನನ್ನಯ ವಂದನೆ

ಎಲ್ಲ ಸಾರಸ್ವತ ಚೇತಗಳಿಗೂ ನನ್ನ ನಮಸ್ಕಾರ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಲೇಖಕರಿಗೆ ನೀಡುವ ಅತ್ಯಂತ ಪ್ರಮುಖವಾದ ಗೌರವ ಇಂಥ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷ ಪದವಿ. ನನಗೆ ಈ ಗೌರವವನ್ನು ನೀಡಿರುವ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೂ ಇತರ ಕಾರ್ಯಕಾರಿ ಸಮಿತಿ ಸದಸ್ಯರಿಗೂ ನನ್ನ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಕೆಲವು ಅರಿವಿನ ಮಾತುಗಳನ್ನು ಹೇಳುತ್ತೇನೆ. ಶಾಂತವಾಗಿ ಕೇಳಬೇಕೆಂದು ನನ್ನ ಬಿನ್ನಹ.

**ಕನ್ನಡದ ಕಥೆ ಬಲು ದೊಡ್ಡದು.**

ಕನ್ನಡನಾಡಿನ ಚರಿತ್ರೆಯಲ್ಲಿ ಕ್ರಿ.ಶ. ಹದಿನೆಂಟನೆಯ ಶತಮಾನದ ಕೊನೆಯ ಭಾಗಕ್ಕೂ ಹತ್ತೊಂಬತ್ತನೆಯ ಶತಮಾನದ ಮೊದಲ ಭಾಗಕ್ಕೂ ಉಂಟಾದ ಸಂಧಿಕಾಲವು ಕನ್ನಡ ಭಾಷಾ ಸಾಹಿತ್ಯಗಳ ದೃಷ್ಟಿಯಿಂದ ಒಂದು ವಿಶಿಷ್ಟ ಪರಿಸರದಲ್ಲಿ ಮುಳುಗಿದ್ದ ಕಾಲ. ರಾಜಕೀಯವಾಗಿ ಕನ್ನಡ ಪ್ರದೇಶಗಳು ವಿವಿಧ ಆಡಳಿತಗಳಿಗೆ ಸಿಕ್ಕಿಕೊಂಡು ಯಾರಿಗೂ ಯಾವ ರಾಜಾಶ್ರಯವೂ ದೊರಕದಿದ್ದ ಕಾಲ. ಇಂಥ ಸಮಯದಲ್ಲಿ ಪಾಶ್ಚಾತ್ಯ ದೇಶಗಳಿಂದ ಕ್ರಿಸ್ತಮತ ಪ್ರಚಾರಕರು ಭಾರತ ದೇಶಕ್ಕೆ ಬಂದು ಭಾರತೀಯರಲ್ಲಿದ್ದ ಶೋಷಿತವರ್ಗದ ಬಡಜನರನ್ನು ಕ್ರಿಸ್ತಮತಕ್ಕೆ ಮತಾಂತರಗೊಳಿಸುವ ಪ್ರಯತ್ನವನ್ನು ಪ್ರಾರಂಭ ಮಾಡಿದ್ದರು. ಜರ್ಮನಿಯಿಂದ ಬಂದ ಬಾಸೆಲ್ ಮಿಷನ್ನಿನ ಮತ ಪ್ರಚಾರಕರು ಭಾರತದ ಪಶ್ಚಿಮ ಕರಾವಳಿಯಲ್ಲಿ ಮಂಗಳೂರನ್ನು ತಮ್ಮ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಕರಾವಳಿಯ ಉದ್ದಕ್ಕೂ ತಮ್ಮ ಉದ್ದೇಶವನ್ನು ಸಾರ್ಥಕಗೊಳಿಸುತ್ತಿದ್ದರು. ಈ ಮತಪ್ರಚಾರಕರೆಲ್ಲ ತುಂಬ ಸಮರ್ಥರಾದ ಬುದ್ಧಿವಂತರು. ವಿಶ್ವವಿದ್ಯಾನಿಲಯಗಳಲ್ಲಿ ತಿಳಿವಳಿಕೆಯನ್ನು ಸಂಪಾದಿಸಿದ್ದವರು. ಮತಪ್ರಚಾರದಲ್ಲಿ ಸಿದ್ಧಹಸ್ತರು. ಅವರು ತಮ್ಮ ಮತಪ್ರಚಾರ ಕಾರ್ಯವು ಕರ್ನಾಟಕದಲ್ಲಿ ಸಫಲವಾಗಬೇಕಾದರೆ ದೇಶಭಾಷೆಯಾದ ಕನ್ನಡದ ಸಹಾಯವು ಅಗತ್ಯವೆಂಬುದನ್ನು ಮನಗಂಡು ಕನ್ನಡ



ಭಾಷೆಯನ್ನು ಚೆನ್ನಾಗಿ ಕಲಿತರು. ಅದರಲ್ಲಿ ವಿದ್ವಾಂಸರಾಗಿ ಕಾವ್ಯ, ವ್ಯಾಕರಣ, ನಿಘಂಟು ಇತ್ಯಾದಿ ವಿಷಯಗಳಲ್ಲಿ ನಿಷ್ಣಾತರಾಗಿ ತಮ್ಮ ಪ್ರಚಾರ ವರ್ಗದವರಿಗೆ ತಿಳಿವಳಿಕೆಯನ್ನು ನೀಡಲು ಉತ್ತಮ ಸಾಹಿತ್ಯವನ್ನು ರಚಿಸಿದರು. ಅವರು ಮಾಡಿದ

✍ ಜಿ. ವೆಂಕಟಸುಬ್ಬಯ್ಯ

ಕಾರ್ಯವೆಲ್ಲ ಸಮರ್ಥರು ಮಾಡುವ ಕಾರ್ಯವಾಗಿತ್ತು. ಅವರ ಉದ್ದೇಶ ಮತ ಪ್ರಚಾರವಾದರೂ ಅದು ಕನ್ನಡದ ಹಳೆಯ ಗ್ರಂಥಗಳ ಪರಿಷ್ಕರಣಗಳಿಗೆ ಕಾರಣವಾಯಿತು. ಡಾ. ಫರ್ಡಿನಾಂಡ್ ಕಿಟ್ಟಲನು 1894 ರಲ್ಲಿ ಮುದ್ರಿಸಿದ ಕನ್ನಡ ಇಂಗ್ಲೀಷ್ ನಿಘಂಟು ಇಂಥ ಕಾರ್ಯದ ತಲೆಮಣಿಯಾಯಿತು.

ಇದೇ ವೇಳೆಗೆ ಭಾರತದ ಎಲ್ಲೆಡೆಗಳಲ್ಲಿಯೂ ಬ್ರಿಟಿಷರ ಆಡಳಿತ ಪರಿಣಾಮವಾಗಿ ಇಂಗ್ಲಿಷ್ ಭಾಷಾ ಸಾಹಿತ್ಯಗಳನ್ನು ಬೋಧಿಸುವ ಶಾಲೆಗಳು ಸ್ಥಾಪಿತವಾದವು. ಅವುಗಳಲ್ಲಿ ವ್ಯಾಸಂಗ ಮಾಡಿದ ಭಾರತೀಯ ಯುವಕರಲ್ಲಿ ಆಂಗ್ಲ ಸಾಹಿತ್ಯದ ವಿಷಯದಲ್ಲಿ ಅಪಾರ ವಿಶ್ವಾಸವು ಬೆಳೆಯಿತು. ಅಂಥ ಸಾಹಿತ್ಯವು ಕನ್ನಡದಲ್ಲಿ ಇರಲಿಲ್ಲವಾದುದರಿಂದ ಕೆಲವರು ಇಂಗ್ಲಿಷ್ ಸಾಹಿತ್ಯದ ಅತ್ಯುತ್ತಮ ಕವನಗಳನ್ನೂ ಗದ್ಯಕೃತಿಗಳನ್ನೂ ನಾಟಕಗಳನ್ನೂ ಕನ್ನಡಕ್ಕೆ ಅನುವಾದ ಮಾಡಿದರು. ಬಿಡಿಬಿಡಿಯಾಗಿ ಇಂಥ ಪ್ರಯತ್ನಗಳು ನಡೆದರೂ ಕನ್ನಡದ ಬೆಳವಣಿಗೆಗೆ ಸ್ಥಿರವಾದ ಯಾವ ಪ್ರಯತ್ನಗಳೂ ನಡೆದಿರಲಿಲ್ಲ. ಇಂಥ ಅತಂತ್ರ ಸನ್ನಿವೇಶದಲ್ಲಿ ಬೊಂಬಾಯಿ ವಿಶ್ವವಿದ್ಯಾನಿಲಯದಲ್ಲಿ ಎಂ.ಎ. ಪದವಿಯನ್ನು ಪಡೆದ ಉತ್ಸಾಹಿ ತರುಣರಾದ ರಾ.ಹ. ದೇಶಪಾಂಡೆ ಅವರು ಕೆಲವರು ಸ್ನೇಹಿತರೊಡಗೂಡಿ ಧಾರವಾಡದಲ್ಲಿ 1890ರಲ್ಲಿ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದರು. ಕನ್ನಡದ ಬೆಳವಣಿಗೆಗೆ ಇದೊಂದು ಪ್ರಮುಖವಾದ ಘಟನೆಯಾಯಿತು. ಈ ಸಂಘದಿಂದ ಕನ್ನಡದ ಅಭಿವೃದ್ಧಿಯ ಕೆಲಸಗಳು ಕೆಲವು ನೆರವೇರಿದವು. ಇದರ ಮುಂದಿನ ಪ್ರಮುಖವಾದ ಘಟನೆಯೂ ಅದೇ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ನೆರವೇರಿತು. ಮೈಸೂರಿನಲ್ಲಿದ್ದ ಬಿ.ಎಂ.ಶ್ರೀಕಂಠಯ್ಯನವರು ಆ ಸಂಘದಲ್ಲಿ 1911ರಲ್ಲಿ 'ಕನ್ನಡ ಮಾತು ತಲೆ ಎತ್ತುವ ಬಗೆ' ಎಂಬ ವಿಷಯವನ್ನು ಕುರಿತು ವಿಚಾರಪೂರ್ಣವಾದ ಒಂದು ಉಪನ್ಯಾಸವನ್ನು ಮಂಡಿಸಿದರು. ಈ ಉಪನ್ಯಾಸದ ಪ್ರಭಾವವು ಕನ್ನಡ ಜನರ ಮನಸ್ಸಿನಲ್ಲಿ ಗಾಢವಾದ ಪರಿಣಾಮವನ್ನು ಉಂಟುಮಾಡಿತು. ಜನತೆಯ ಮನಸ್ಸಿನಲ್ಲಿ ಈ ಉಪನ್ಯಾಸದ ಪರಿಣಾಮವಾಗಿ, ಕನ್ನಡದ ಅಭಿವೃದ್ಧಿಗೆ ಒಮ್ಮತದ ಕಾರ್ಯಗಳು ನಡೆಯಬೇಕೆಂಬ ಭಾವನೆ ಬೇರೂರಿಬಿಟ್ಟಿತು. ಇದೇ ಕನ್ನಡದ ನವೋದಯದ ಪ್ರಾರಂಭದ ಕೆಲಸ.

ಇದೇ 1911 ರಲ್ಲಿ ಮಂಜೇಶ್ವರದ ಗೋವಿಂದ ಪೈಗಳು ಒಂದು ಕ್ರಾಂತಿಕಾರಕ ಕಾರ್ಯವನ್ನು ಮಾಡಿದರು. ಕನ್ನಡದ ಪದ್ಯಗಳ ಪ್ರತಿಸಾಲಿನ ಮೊದಲ ಭಾಗದಲ್ಲಿ ಎರಡನೆಯ ವರ್ಣವು ಒಂದೇ ಆಗಿರಬೇಕೆಂಬ ಸಂಪ್ರದಾಯವು ಕೃತಿಮವಾದುದೆಂದು ತೀರ್ಮಾನಿಸಿ ಆ ಸಂಪ್ರದಾಯವನ್ನು ಮುರಿದು, ಪ್ರಾಸವನ್ನು ಬಿಟ್ಟು 'ಹೊಲೆಯನು ಯಾರು?'' ಎಂಬ ಕವನವನ್ನು ರಚಿಸಿ 'ಸ್ವದೇಶಾಭಿಮಾನಿ' ಎಂಬ ಪತ್ರಿಕೆಯಲ್ಲಿ ಪ್ರಕಟಿಸಿಬಿಟ್ಟರು. ಇದೇ ಸಮಯದಲ್ಲಿ ಬಿ.ಎಂ.ಶ್ರೀಯವರ ಶಿಷ್ಯರಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ತಮ್ಮ 'ಸಣ್ಣಕತೆಗಳು' ಎಂಬ ಪುಸ್ತಕವನ್ನು ಪ್ರಕಟಪಡಿಸಿದರು. ಈ ಕಾರ್ಯಗಳಿಂದ ಕೋಪಗೊಂಡ ಸಂಪ್ರದಾಯವಾದಿಗಳು ಪೈ ಅವರನ್ನು ಸಾಹಿತ್ಯ ಲೋಕದಲ್ಲಿ 'ಹುಲಿ' ಎಂದೂ ಮಾಸ್ತಿಯವರ ಸಣ್ಣಕತೆಗಳನ್ನು 'ಸಣ್ಣಕತ್ತೆ'ಗಳೆಂದೂ ಟೀಕಿಸಿದರು. ಪೈ ಅವರು ಈ ಟೀಕಾಕಾರರಿಗೆ ಇತ್ತ ಉತ್ತರ ಹೀಗಿತ್ತು.

‘ಇಂದು ಒಬ್ಬನೇ ನಡೆದ ಮೇಕೆದಾರಿ ಮುಂದೆ ತೇರೆಳೆಯುವ ಹೆದ್ದಾರಿ’. ಮಾಸ್ತಿಯವರ ಪ್ರತಿಕ್ರಿಯೆ ಹೀಗಿತ್ತು: ‘ನಿಜ, ನನ್ನ ಸಣ್ಣ ಕತ್ತೆಗಳು ನಿಮ್ಮ ಮನಸ್ಸಿನ ಮೈಲಿಗೆಯನ್ನು ಅಗಸನ ಬಳಿಗೆ ಒಯ್ಯುತ್ತವೆ.’ ಶ್ರೀಯವರ ಬಗ್ಗೆ ಅವರ ಕವನಸಂಕಲನ ಪ್ರಕಟವಾದಾಗಲೂ ಇಂಥವೇ ವ್ಯಂಗ್ಯವಾದ ಮಾತುಗಳು ಬಂದವು. ಆದರೆ ಅವರು ವ್ಯಸನದಿಂದ ಆ ಬಗೆಯ ಮಾತುಗಳನ್ನು ನುಂಗಿಕೊಂಡರು. ಹೊಸಗನ್ನಡದ ನವೋದಯವು ಪ್ರಾರಂಭವಾಗಿ ಬಿಟ್ಟಿತ್ತು.

ಶ್ರೀಯವರ ‘ಇಂಗ್ಲಿಷ್ ಗೀತಗಳು’ ಪುಸ್ತಕವು ಪ್ರಕಟವಾಗಿ ಈ ಆಂದೋಳನವು ಬೃಹತ್ಪ್ರಮಾಣದಲ್ಲಿ ಮುಂದುವರೆಯಿತು. ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಶ್ರೀಯವರ ಶಿಷ್ಯರು ‘ಕಿರಿಯ ಕಾಣಿಕೆ’, ‘ತಳಿರು’ ಎಂಬ ಹೊಸಕನ್ನಡ ಕವನ ಸಂಕಲನಗಳನ್ನು ಪ್ರಕಟಿಸಿ ಈ ಚಳವಳಿಯನ್ನು ಮುಂದುವರಿಸಿದರು. ಬಳಿಕ ಶ್ರೀಯವರು ಕೈಗೊಂಡ ಭಾಷಣಗಳ ಪ್ರಚಾರಕಾರ್ಯ ಗಾಢವಾಯಿತು. ನವೋದಯ ಬೆಳೆಯಿತು. ಈ ಉದಯದ ದೊಡ್ಡ ಕವಿ ಕುವೆಂಪು ‘ನವೀನ’ ಎಂಬ ಕವನವನ್ನು ಪ್ರಕಟಿಸಿ ನವೋದಯದ ಪ್ರಭಾವವನ್ನು ಕಾವ್ಯದಲ್ಲಿ ಮೂಡಿಸಿದರು. ಆ ಕವನವು ಹೀಗಿದೆ:

ನಾಡಿನ ಪುಣ್ಯದ ಪೂರ್ವದಿಗಂತದಿ
ನವ ಅರುಣೋದಯ ಹೊಮ್ಮುತಿದೆ!
ಚಿರನೂತನ ಚೇತನದುತ್ಸಾಹದಿ
ನವೀನ ಜೀವನ ಚಿಮ್ಮುತಿದೆ!
ಅಭಿನವ ಮಧುಕೋಕಿಲ ಕಲಕಂಠದಿ
ಸ್ವರ ಸುರಚಾಪಗಳುಣತಿದೆ!
ಶ್ಯಾಮಲ ಕಾನನ ಸುಮ ಸಮ್ಮೇಲದಿ
ಇಂಚರ ಸಾಸಿರ ಹೊಮ್ಮುತಿವೆ!
ಕಿವಿ ಕಣ್ಣಾಗುತಿದೆ!
ಕಣ್ ಕಿವಿಯಾಗುತಿದೆ!

ಈ ಸಾಲುಗಳು ಯುವಕವಿಗಳ ಬಾಯಲ್ಲಿ ಶಾಶ್ವತವಾಗಿ ನಿಂತುಬಿಟ್ಟವು. ಈ ಕಾರ್ಯಗಳೆಲ್ಲವೂ 1911 ರ ಉಪನ್ಯಾಸದ ಪರಿಣಾಮವಾಗಿ ಕನ್ನಡ ಜನತೆ ಕಂಡ ಕನಸಿನ ಪ್ರಭಾವ. ಈ ಕನಸುಗಳು ಮೂಡಿದ್ದು ಇಂದಿಗೆ, ಈ ಬೆಂಗಳೂರಿನ ಸಾಹಿತ್ಯ ಸಮ್ಮೇಳನವು ನಡೆಯುತ್ತಿರುವ 2011 ರ ಸಮಯಕ್ಕೆ ಸರಿಯಾಗಿ ನೂರು ವರ್ಷಗಳ ಹಿಂದೆ. ಆದ್ದರಿಂದ ಇಂದು ನೆರವೇರುತ್ತಿರುವ ಸಮ್ಮೇಳನವು ನವೋದಯದ ಶತಮಾನದ ಉತ್ಸವ ಸಮಾರಂಭವೆಂದು ನಾನು ತಿಳಿದಿದ್ದೇನೆ. ಇಂದು ಇದರಲ್ಲಿ ಭಾಗವಹಿಸಿ ತಮ್ಮೆದುರು ಮಾತನಾಡಲು ನನಗೆ ಸಂತೋಷವಾಗುತ್ತಿದೆ.

ಈ ನೂರು ವರ್ಷಗಳಲ್ಲಿ ಈ ಆಂದೋಲನದಿಂದ ನಮಗೆ ಆದ ಲಾಭವೇನು ಎಂದು ಲೆಕ್ಕ ಹಾಕುವುದು ತಪ್ಪಲ್ಲ. ಅದು ಲಾಭದಾಯಕವಾದ ಸಿಂಹಾವಲೋಕನ ವಾಗುತ್ತದ್.


ಶ್ರೀಯವರ ಉದ್ದೇಶದಲ್ಲಿ ಮೂರು ಮುಖ್ಯವಾದ ವಿಷಯಗಳಿದ್ದವು.

1. ಇಲ್ಲಿಯವರೆಗೆ ಸಂಸ್ಕೃತದ ಪೋಷಣೆಯಲ್ಲಿ ಬೆಳೆದ ಕನ್ನಡವು ಇನ್ನು ಮುಂದೆ ಇಂಗ್ಲೀಷ್ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಬೇಕು.
2. ಹೊಸಗನ್ನಡಕ್ಕೆ ನೂತನ ಗದ್ಯದ ಶೈಲಿಯನ್ನು ತಂದುಕೊಡಬೇಕು.
3. ಒಟ್ಟಿನಲ್ಲಿ ಉದಾರವಾದ ಜೀವನ ಧರ್ಮದ ಸಾರವನ್ನು ಪ್ರಚಾರ ಮಾಡಬೇಕು.

ಇಂಗ್ಲೀಷ್ ಸಾಹಿತ್ಯಕ್ಕೆ ಗ್ರೀಕ್, ಜರ್ಮನ್, ಫ್ರೆಂಚ್ ಮತ್ತು ಲ್ಯಾಟಿನ್ ಭಾಷಾ ಸಾಹಿತ್ಯಗಳ ಸತ್ವಗಳು ಇಳಿದು ಬಂದಿದ್ದವು. ಆ ಎಲ್ಲ ಪ್ರಭಾವಗಳೂ ಕನ್ನಡದ ಬೆಳವಣಿಗೆಯಲ್ಲಿ ಸಹಾಯವಾಗುತ್ತವೆ ಎಂಬುದು ಶ್ರೀಯವರ ಆಸೆಯಾಗಿತ್ತು. ಕನ್ನಡದಲ್ಲಿ ಇಂದಿನವರೆಗೆ ಆಗಿರುವ ಬೆಳವಣಿಗೆಯಿಂದ ಆ ಆಸೆಯು ಈಡೇರಿದೆ ಎಂಬುದು ಸಾಬೀತಾಗುತ್ತದೆ. ನವೋದಯದ ಪರಿಣಾಮವಾಗಿ ಕನ್ನಡದ ಸಾಹಿತ್ಯದಲ್ಲಿ ಏನೇನು ಬದಲಾವಣೆಯಾಗಿವೆ ಎಂಬುದನ್ನು ಮೇಲುಸ್ತರದಲ್ಲಿ ಪರಿಶೀಲಿಸಿದರೂ ನಿಜವಾಗಿ ಆಶ್ಚರ್ಯವಾಗುತ್ತದೆ.

ಮೈಸೂರಿನಲ್ಲಿ 1946ರಲ್ಲಿ ವಿಶ್ವವಿದ್ಯಾನಿಲಯವು ಸ್ಥಾಪಿತವಾದ ಮೇಲೆ ಆ ಊರಿನ ಮಹಾರಾಜ ಕಾಲೇಜು ಕನ್ನಡ ಸಾಹಿತ್ಯದ ಚಟುವಟಿಕೆಗಳ ಕೇಂದ್ರವಾಯಿತು. ಮೈಸೂರಿನಲ್ಲಿ ಪ್ರಾಚ್ಯವಸ್ತು ಭಂಡಾರವು ಕಾರ್ಯವನ್ನು ಪ್ರಾರಂಭಿಸಿತು. ಆ ಭಂಡಾರದಲ್ಲಿ ಪ್ರಾಚೀನವಾದ ಸಂಸ್ಕೃತ, ಕನ್ನಡ ಗ್ರಂಥಗಳು ಸಂಗ್ರಹವಾದವು. ಅನೇಕ ಹಸ್ತಪ್ರತಿಗಳು ಶೇಖರಗೊಂಡವು. ಹೊಸದಾಗಿ ಅನೇಕ ಗ್ರಂಥಗಳು ಸಮ್ಪಾದಕರಿಂದ ಪರಿಷ್ಕರಿಸಲ್ಪಟ್ಟು ಮುದ್ರಣಕ್ಕೆ ಸಿದ್ಧವಾದವು. ಕಾಲೇಜಿನಲ್ಲಿ ಕನ್ನಡದ ಆಳವಾದ ವ್ಯಾಸಂಗ ನಡೆಯಿತು. ಹೊಸಗನ್ನಡದಲ್ಲಿ ಪ್ರಾಚೀನ ಗ್ರಂಥ ವಿಮರ್ಶೆಗಳು ರಚಿತವಾದವು. ಮೊತ್ತಮೊದಲಿಗೆ ಕುಮಾರವ್ಯಾಸ ಪ್ರಶಸ್ತಿ ರಚಿತವಾಯಿತು. ನಾಡಿನಲ್ಲೆಲ್ಲ ಹೊಸ ಹೊಸ ಕರ್ನಾಟಕ ಸಂಘಗಳು ಪ್ರಚಾರಕಾರ್ಯ ನೆರವೇರಿತು. ಜನತೆಯಲ್ಲಿ ಕನ್ನಡದ ಬಗ್ಗೆ ಜಾಗೃತಿಯುಂಟಾಯಿತು.

ಸೃಷ್ಟಿಶೀಲ ಸಾಹಿತ್ಯವು ಪ್ರಕಟವಾದಂತೆಲ್ಲ ಹೊಸ ಲೇಖಕರ ಧ್ಯೇಯೋದ್ದೇಶಗಳು ಪ್ರಕಟವಾದವು. ಹಿಂದೆ ಆಧ್ಯಾತ್ಮಿಕದಲ್ಲಿ ಪ್ರಮುಖವಾದ ಆಸಕ್ತಿ ಇದ್ದದ್ದು ಈಗ ಬದಲಾಗಿ ಇಹದಲ್ಲಿರುವ ಮಾನವನ ಬಾಳಿನ ವಿಶ್ಲೇಷಣೆಯು ಹೆಚ್ಚು ಪ್ರಾಧಾನ್ಯವನ್ನು ಪಡೆಯಿತು. ಮಾನವನು ದೇವನೂ ಅಲ್ಲ ರಾಕ್ಷಸನೂ ಅಲ್ಲ ಆದರೆ ಅವನು ಒಳಿತು



ಕೆಡುಕುಗಳ ಮಿಶ್ರಣವಾದ ಸೃಷ್ಟಿ. ಅವನಿಗೆ ದೇಶಪ್ರೇಮವಿದೆ, ಭಾಷಾ ಪ್ರೇಮವಿದೆ, ದೈವದಲ್ಲಿ ನಂಬಿಕೆ ಇದೆ, ಸಹಜೀವಿಗಳಲ್ಲಿ ಸ್ನೇಹವಿದೆ. ಎಲ್ಲಕ್ಕಿಂತ ಹೆಚ್ಚಾಗಿ ಜೀವನದಲ್ಲಿ ಶ್ರದ್ಧೆ ಇದೆ ಭಕ್ತಿ ಭಾವನೆಯೂ ಇದೆ. ಕೆಡುಕನ್ನು ತಿರಸ್ಕರಿಸಿ ಒಳಿತನ್ನು ಬಳಸುವ, ಮಾನವನ ಸ್ವಭಾವವಾದ ನೀತಿಯುತವಾದ ಪ್ರಾಮಾಣಿಕವಾದ ಬದುಕಿನ ಆಸಕ್ತಿ ಹೆಚ್ಚಾಯಿತು. ಅವನಿಗೆ, ಭಾರತ ದೇಶದ ಅತ್ಯಂತ ಹಿರಿಯ ಚೇತನಗಳಾದ ರಾಮಕೃಷ್ಣ ಪರಮಹಂಸ, ವಿವೇಕಾನಂದ, ಅರಬಿಂದೊ, ರವೀಂದ್ರನಾಥ, ರಾಜಾರಾಮಮೋಹನರಾಯ್ ಮುಂತಾದವರ ತಾತ್ವಕ ಚಿಂತನೆಗಳು ಈ ಹೊಸ ಯುವಜನಾಂಗಕ್ಕೆ ಮಾರ್ಗದರ್ಶಕವಾದವು. ಬಾಳು ನ್ಯಾಯನಿಷ್ಠೆಯಿಂದ ಕೂಡಿರಬೇಕು. ಪ್ರಾಮಾಣಿಕತೆ ಪ್ರದರ್ಶಿತವಾಗಬೇಕು. ಪಾರದರ್ಶಕವಾಗಿರಬೇಕು. ಮುಂತಾದ ಉದಾತ್ತ ಭಾವನೆಗಳು ಜನತೆಗೆ ಬೇಕಾದವು. ಒಟ್ಟಿನಲ್ಲಿ ನವಭಾರತ ನಿರ್ಮಾಣವಾಗಬೇಕೆಂಬುದು ಮುಖ್ಯದೃಷ್ಟಿ.

ಈ ಹೊಸ ನಂಬಿಕೆಗಳಿಂದ ಸಾಹಿತ್ಯದ ಎಲ್ಲ ಪ್ರಕಾರಗಳೂ ಜೀವಂತವಾದವು.

ಕಾವ್ಯ, ನಾಟಕ, ಕತೆ, ಕಾದಂಬರಿ, ಜೀವನಚಿತ್ರ, ಪ್ರಬಂಧ, ವಿಮರ್ಶೆ ಇವೆಲ್ಲ ಬಹುಸಂಖ್ಯೆಯಲ್ಲಿ ಮುದ್ರಣಗೊಂಡವು. ದೇಶೋದ್ಧಾರದ ಜೊತೆಗೆ ಆತ್ಮೋದ್ಧಾರವೂ ಸೇರಿಕೊಂಡಿತು. ಶೋಷಿತರನ್ನು ಎತ್ತಿ ನಿಲ್ಲಿಸುವ ಪ್ರಯತ್ನ ಹೆಚ್ಚಾಯಿತು. ಸ್ವಾತಂತ್ರ್ಯಪ್ರಿಯತೆ ಎಷ್ಟು ಗಾಢವಾಯಿತೆಂದರೆ ಕವಿಗಳು ಹಾಡಿದರು ಹೀಗೆ:

ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು ಪೂಜಿಸುವ ಬಾರ!

ಹೀಗೆ ಗಟ್ಟಿಯಾಗಿ ಘೋಷಿಸುವುದು ಸಾಧ್ಯವಾಯಿತು.

ನವ ಸಾಹಿತಿಗಳೂ ತಮ್ಮ ಕೃತಿಗಳಿಂದ ಗಳಿಸಿದ ಹಿರಿಮೆ ಪ್ರಖರವಾಗಿತ್ತು. ಪರ್ವತೋಪಮವಾದ ಪ್ರತಿಭೆಯ ಮೂವರು ಮಹಾಕವಿಗಳು ನಾಡಿನಲ್ಲಿ ಬೆಳಗಿದರು. ಮಹಾಕಾವ್ಯಗಳ ಕಾಲ ಮುಗಿದುಹೋಯಿತು ಎಂಬಂತಿದ್ದ ಸಮಯದಲ್ಲಿ ಒಂದು ಅದ್ಭುತ ಮಹಾಕಾವ್ಯ ಸೃಷ್ಟಿಯಾಯಿತು. ಸಂಕೀರ್ಣವಾದ ಮಾನವ ಜೀವಿತದ ಸಾವಿರ ಮುಖಗಳನ್ನು ಅತ್ಯಂಅ ಭಾವತೀವ್ರತೆಯಿಂದ ಜಾನಪದ ಸತ್ವದಿಂದ ಚಿತ್ರಿಸಿ ಹಾಡಿದ ಕವಿಯೊಬ್ಬರು ಮಹಾಕವಿಗೆ ಸಮಾನರಾದರು. ಹರಿಸರ್ವೋತ್ತಮತ್ವದ ಆಧ್ಯಾತ್ಮಿಕ ದೃಷ್ಟಿಯ ಮತ್ತೊಬ್ಬ ಕವಿ ಮತ್ತೊಂದು ಕಿರು ಮಹಾಕಾವ್ಯವನ್ನೇ ರಚಿಸಿದರು. ಈ ಮೂವರಿಗೆ ಬೆನ್ನಾಗಿ ಅನೇಕ

ಕವಿಗಳು ಆಸಕ್ತರಾದ ಓದುಗರಿಗೆ ಹೃದಯ ತುಂಬುವ ಕವಿತೆಗಳನ್ನು ರಚಿಸಿದರು. ನವ್ಯ ಕಾವ್ಯವೆಂಬ ಹೊಸ ರಚನೆಗಳನ್ನು ರಚಿಸಿ ಮತ್ತೆ ಇಬ್ಬರು ಕವಿವರ್ಯ ಇಂಗ್ಲೆಂಡ್ ಅಮೆರಿಕಗಳ ಹೊಸಕಾವ್ಯವನ್ನು ಅನುಸರಿಸಿ ಕನ್ನಡ ಕಾವ್ಯ ರಚನೆಗೆ ಹೊಸ ಭಾಷೆಯನ್ನು ಹೊಂದಿಸಿದರು. ಕ್ರಮೇಣ ನವ್ಯತೆ ಮಾಯವಾಗಿ ಕೆಲವು ಬದಲಾವಣೆಗಳೊಡನೆ ನವೋದಯದ ಪ್ರಭಾವ ಮತ್ತೂ ಪ್ರಖರವಾಗುತ್ತಾ ಇದೆ. ಇಂದು ರಸಿಕರ ಮನಸ್ಸನ್ನು ಮುದಗೊಳಿಸುವ ಕಾವ್ಯರಾಶಿ ರಚಿತವಾಗುತ್ತಲೆ ಇದೆ. ಸ್ತ್ರೀಯರು ಕೂಡ ಕೆಲವು ಉತ್ತಮ ಕವನಸಂಕಲನಗಳನು ತಂದಿದ್ದಾರೆ.

ಕಾವ್ಯಕ್ಷೇತ್ರದಷ್ಟೇ ಪ್ರಭಾವವುಳ್ಳ ಕತೆ–ಕಾದಂಬರಿಗಳ ವಿಭಾಗವೂ ಅತ್ಯಂತ ಜೀವಂತವಾದ ಪುಸ್ತಕಗಳಿಂದ ಅಲಂಕೃತವಾಗಿದೆ. ಕನ್ನಡದ ಆಸ್ತಿಯಾದ ಸಣ್ಣ ಕತೆಗಾರರಿಂದ ಸಾವಿರ ಪುಟಗಳ ಕಾದಂಬರಿಕಾರವರೆಗೆ ಪ್ರಭಾವಿತರಾದ ಹತ್ತಾರು ಜನ ಕಥಾಸಾಹಿತ್ಯ ನಿರ್ಮಾಪಕರು ಈಗಲೂ ಇದ್ದಾರೆ. ಪ್ರಗತಿಶೀಲವೆಂಬ ಹೆಸರಿನ ಚಳವಳಿಯಿಂದ ಪ್ರಭಾವಿತರಾದ ಕೆಲವರು ನೂರಾರು ಕಾದಂಬರಿಗಳನ್ನು ರಚಿಸಿದ್ದಾರೆ. ಆ ದಾರಿಯಲ್ಲಿಯೇ ನಂಬಿಕೆ ಇದ್ದರೂ ಚಾರಿತ್ರಿಕ ಕಾದಂಬರಿಗಳನ್ನು ರಚಿಸಿದ ಹಿರಿಯರು, ದಲಿತರ ಉದ್ಧಾರಕ್ಕೆಂದೋ ಜನತೆಯ ಬಾಳಿನ ಸೊಗಸಿಗೆಂದೋ ರಚಿಸಿದ ಅನೇಕ ಕಾದಂಬರಿಗಳು ಪ್ರಕಟವಾಗಿವೆ. ಹತ್ತು ಜನ ಕಾದಂಬರಿಕಾರರು ವಿಶ್ವಕಾವ್ಯದ ರಚನೆಯ ಮಟ್ಟಕ್ಕೆ ಬರುವ ಕಾದಂಬರಿಗಳನ್ನು ರಚಿಸಿದ್ದಾರೆ. ಇವರೆಲ್ಲರ ಆಂದೋಳನವು ಬಹು ದಟ್ಟವಾದ ಪರಿಣಾಮವನ್ನು ಬೀರಿತು.

ನಾಟಕ ಪ್ರಕಾರವೂ ಅಷ್ಟೇ! ಮೈಸೂರರಸರ ಚರಿತ್ರೆಗೆ ಸಂಬಂಧಪಟ್ಟ ನಾಟಕಗಳು, ಸಮಾಜದ ಸಂಸಾರದ ಸಿಹಿಕಹಿ ಪ್ರಸಂಗಗಳು, ವ್ಯಂಗ್ಯ ಚಿತ್ರಣದ ಕನ್ನಡ ಇಂಗ್ಲೀಷ್ ವಿಶ್ರಭಾಷೆಯ ಹಾಸ್ಯನಾಟಕಗಳು, ಸ್ವಾತಂತ್ರ್ಯ ಹೋರಾಟದ ಸಮಯದ ವಿವಿಧ ಚಿತ್ರಗಳುಳ್ಳ ಹೃದಯವಿದ್ರಾವಕ ನಾಟಕಗಳು, ಶಾಲಾಕಾಲೇಜುಗಳ ವಾರ್ಷಿಕ ಸಮಾರಂಭಗಳಿಗೆ ಅನುಕೂಲವಾಗಿರುವ ಏಕಾಂಕಗಳು ಇತ್ಯಾದಿ ಅನೇಕ ನಾಟಕಗಳಿವೆ. ಹೆಗ್ಗೋಡಿನ ನಾಟಕ ಪ್ರದರ್ಶನ ಮತ್ತು ಅಭಿನಯ ಶಿಕ್ಷಣವು ಬೇರೊಂದು ರೀತಿಯ ಚಟುವಟಿಕೆಯಲ್ಲಿ ತೊಡಗಿದೆ. ಹೊಸ ನಾಟಕಗಳ ಪ್ರದರ್ಶನಕ್ಕೆಂದು ಬೆಂಗಳೂರಿನಲ್ಲಿಯ ರಂಗಶಂಕರವೆಂಬ ಪ್ರಾಯೋಗಿಕ ನಾಟಕಮಂದಿರವೇ ಸಿದ್ಧವಾಗಿದೆ. ಈ ಎಲ್ಲ ಸಾಹಿತ್ಯ ರಚನೆಯನ್ನು ಬೇರೊಂದು ಮಗ್ಗುಲಿನಿಂದಲೂ ಪರಿಶೀಲಿಸ ಬಹುದಾಗಿದೆ. ಅದು ಒಂದು ರಸಯಾತ್ರೆಯೇ!

ನವೋದಯದ ಪರಿಣಾಮವಾಗಿ ಇಂಗ್ಲೆಂಡನ್ನೂ ಇಂಗ್ಲೀಷ್ ಭಾಷೆಯನ್ನೂ ಸಾಹಿತ್ಯವನ್ನೂ ಪ್ರೀತಿಯಿಂದ ಕಂಡು ಭಾರತೀಯ ಭಾಷಾ ಸಾಹಿತ್ಯಗಳನ್ನು ಒಂದು ಅವಗಣನೆಯ ದೃಷ್ಟಿಯಿಂದ ಕಾಣುವ ವ್ಯವಸ್ಥೆಯುಂಟಾಯಿತು. ಒಬ್ಬ ಕವಿ ಹಾಡಿದನು ಹೀಗೆ:

ಬೀಸುತಿದೆ ಪಶ್ಚಿಮದ ರಸಪೂರ್ಣ ಹೊಸಗಾಳಿ
ಭಾರತದ ಬಣಗು ಬಾಳ್ಮರವನುಲುಗಾಡಿ

ಈ ಬಗೆಯ ಭಾವನೆ ಕೆಲವರಲ್ಲಿ ಬೇರೂರಿತು. ಇಂಥ ಮಾತಿನಿಂದ ಇಂಗ್ಲೆಂಡನ್ನು ತುಂಬ ಎತ್ತರದಲ್ಲಿ ನಿಲ್ಲಿಸಿದಂತೆ ಕಾಣುತ್ತದೆ. ಇದಕ್ಕೆ ಕಾರಣವಿಲ್ಲದಿಲ್ಲ. ಭಾರತದಲ್ಲಿ ಚೆನ್ನಾಗಿ ಬೇರೂರಿದ್ದ ವಿವಿಧ ಧರ್ಮಗಳ, ಜಾತಿಕೋಮುಗಳ, ಹೆಣ್ಣನ್ನು ಅವಗಣಿಸುತ್ತಿದ್ದ ಭಾವನೆಗಳ ಪರಿಣಾಮವಾಗಿ ವರ್ಗಗಳೇರ್ಪಟ್ಟು ಶೋಷಿತವರ್ಗಗಳು ಹುಟ್ಟಿಕೊಂಡಿದ್ದವು. ಇಂಗ್ಲೆಂಡಿನ ಸರ್ವಾಧಿಕಾರದ ಆಡಳಿತದಲ್ಲಿ ಶೋಷಿತವರ್ಗಗಳೆಲ್ಲ ಎದ್ದು ನಿಂತು ಸಮಾಜದಲ್ಲಿ ಹೆಚ್ಚಿನ ಸ್ಥಾನಮಾನಗಳನ್ನು ಕಾಣಬಹುದು ಎಂಬ ಆಸೆಯನ್ನು ಹೊಂದಿದ್ದು ಆಶ್ಚರ್ಯವಲ್ಲ. ಅದನ್ನು ಕೆಲವರು ಕವಿಗಳು ಮೆಚ್ಚಿಕೊಂಡರು. ಅಂಥಾವಕಾಶವನ್ನು ಹೊಗಳಿ ಕವನಗಳನ್ನು ರಚಿಸಿರಬಹುದು.

ಸ್ವಾತಂತ್ರ್ಯದ ಹೋರಾಟದಲ್ಲಿ ಡಾ.ಅಂಬೇಡ್ಕರ್ ಅವರೂ, ಅವರ ಅನುಯಾಯಿಗಳೂ ಸ್ವಾತಂತ್ರ್ಯದ ಗಳಿಕೆಗಿಂತ ಸಮಾಜದಲ್ಲಿ ಶೋಷಿತ ವರ್ಗಗಳಿಗೆ ಸಮಾನತೆಯನ್ನು ತರುವುದು ಅತ್ಯಗತ್ಯವಲ್ಲವೆ ಎಂಬ ಪ್ರಶ್ನೆಯನ್ನು ಎತ್ತಿಹಿಡಿದರು. ನವೋದಯದ ಕಾದಂಬರಿಗಳಲ್ಲಿಯೂ ಕತೆಗಳಲ್ಲಿಯೂ ಈ ಹೋರಾಟದ ಚಿತ್ರಗಳಿವೆ. ಇದೇನೂ ವಿರೋಧವಿಲ್ಲದ ಹೋರಾಟವಲ್ಲ. ಇಂಥ ಹೋರಟಕ್ಕೆ ಅಡ್ಡಿಯಾದ ಪ್ರಯತ್ನಗಳೂ ಮೂಡಿದವು. ಅಂಬೇಡ್ಕರ್ ಅವರ ವಾದವನ್ನು ವಿರೋಧಿಸಿ ಭಾರತದ ವೈಭವದ ಸಂಸ್ಕೃತಿಯ ಚರಿತ್ರೆಯನ್ನು ಎತ್ತಿ ಹಿಡಿದರು ಕೆಲವರು ಸಂಪ್ರದಾಯವಾದಿಗಳಾದ ವಿದ್ವಾಂಸರು.

ಮಹಮ್ಮದೀಯರ ರಾಜ್ಯದ ಆಡಳಿತವನ್ನೂ ಮೆಚ್ಚಿ ಗ್ರಂಥ ರಚನೆ ಮಾಡಿದವರಿದ್ದಾರೆ. ಟಿಪ್ಪುವನ್ನು ಮೆಚ್ಚಿಕೊಂಡ ಕಥೆಗಳಿವೆ.

ಸ್ವಾತಂತ್ರ್ಯಾನಂತರದ ಕಥೆಯೇ ಬೇರೆ. ಹಿಂದೆ ಯಾರು ಯಾರು ಶೋಷಿತರಾಗಿದ್ದರೋ ಅವರೆಲ್ಲ ತಲೆ ಎತ್ತಿ ನಿಲ್ಲುವ ಅವಕಾಶವುಂಟಾಯಿತು. ದಲಿತ, ಬಂಡಾಯ, ಮಹಿಳಾ ಉದ್ಧಾರ, ಮತಾಂತರ ವಿರೋಧ ಇತ್ಯಾದಿ ವಸ್ತುಗಳುಳ್ಳ ಅನೇಕ ಕಾದಂಬರಿಗಳೂ ಕತೆಗಳೂ ಇವೆ. ಕೆಲವರು ಲೇಖಕರು ಉಪಸಂಸ್ಕೃತಿಗಳ ಹೆಸರಿನಲ್ಲಿ ಕೆಳವರ್ಗದವರ ಸಾಮಾಜಿಕ ವ್ಯವಹಾರಗಳನ್ನು ಅಭ್ಯಾಸ ಮಾಡಿ ಅವುಗಳ ಹಿರಿಮೆಯನ್ನು ಚಿತ್ರಿಸಿದ್ದೂ ಉಂಟು.



ದಲಿತ ಸಾಹಿತ್ಯದ ಬಗ್ಗೆ ತುಂಬ ಚರ್ಚೆಯಾಯಿತು. ದಲಿತರೇ ಸ್ವಂತವಾಗಿ ಅವರ ಬಗ್ಗೆ ಬರೆದರೆ ಅದು ನಿಜವಾದ ದಲಿತ ಸಾಹಿತ್ಯ. ಬೇರೆಯವರು ಅಂಥ ಸಾಹಿತ್ಯವನ್ನು ಬರೆದರೆ ಅದು ದಲಿತಪರ ಸಾಹಿತ್ಯ ಎಂಬ ಭೇದವನ್ನು ಮಾಡಿದರು. ಇದನ್ನೂ ಕೆಲವರು ಒಪ್ಪಿದರು. ಈ ಬಗೆಯ ಎರಡು ವಿಭಾಗಗಳಲ್ಲಿಯೂ ಉತ್ತಮ ಕೃತಿಗಳು ರಚಿತವಾಗಿದೆ. ವಸಾಹತುಶಾಹಿ, ಪುರೋಹಿತಶಾಹಿ ಮುಂತಾದ ಶಬ್ದಗಳು ಆಯಾವರ್ಗದವರು ರಚಿಸಿದ ಸಾಹಿತ್ಯಕ್ಕೆ ಅನ್ವಯಿಸುತ್ತದೆ. ಇಂಥ ಸಾಹಿತ್ಯವೂ ಅಪಾರವಾಗಿದೆ. ಹೀಗೆ ಅಧಿಕಾಧಿಕವಾಗಿ ಸಾಹಿತ್ಯ ರಚನೆ ಹೆಚ್ಚಿದ ಮೇಲೆ ಅದನ್ನು ಓದುವವರೂ ಹೆಚ್ಚಿದರು. ವಿದ್ಯಾರ್ಥಿಗಳಲ್ಲಿ ಸಾಹಿತ್ಯದ ಪ್ರೀತಿ ಹೆಚ್ಚಾಗಿ ಪಠ್ಯಗಳ ಜೊತೆಗೆ ಪಠ್ಯೇತರ ಗ್ರಂಥಗಳನ್ನು ವಾಚನ ಮಾಡುವುದು ಹೆಚ್ಚಾಯಿತು. ಯುವಕರಲ್ಲಿ ಹೋರಾಟದ ಬುದ್ಧಿ ಬೆಳೆಯಿತು. ವಾರ್ತಾ ಪತ್ರಿಕೆಗಳು ಹೆಚ್ಚಾದವು. ಗ್ರಂಥ ಪ್ರಕಟಣೆ ಅಧಿಕವಾಯಿತು. 1947 ರ ತನಕ ಮುದ್ರಣಗೊಂಡ ಎಲ್ಲ ಹೊಸ ಪುಸ್ತಕಗಳನ್ನು ಓದುವುದು ಸಾಧ್ಯವಾಗಿತ್ತು. ಅದಾದ ಬಳಿಕ ಗ್ರಂಥ ಪ್ರಕಟಣೆ ಎಷ್ಟು ಹೆಚ್ಚಾಗಿದೆ ಎಂದರೆ ಮುದ್ರಣಗೊಂಡ ಎಲ್ಲ ಗ್ರಂಥಗಳನ್ನು ನೋಡುವುದು ಕೂಡ ಕಷ್ಟವಾಗಿದೆ. ಈಗ ವಾರ್ಷಿಕವಾಗಿ ಸುಮಾರು ಮೂರು ಸಾವಿರ ಪುಸ್ತಕಗಳು ಅಚ್ಚಾಗುತ್ತಿವೆಯಂತೆ. ಹೀಗಾಗಿ ಈ ಕಾಲದ ಸಾಹಿತ್ಯರಾಶಿ ಕನ್ನಡಕ್ಕೆ ಹೊಸತನವನ್ನು ನೀಡಿದೆ. ಅದು ವೈಭವಪೂರ್ಣವಾಗಿ ಬೆಳೆಯುತ್ತಿದೆ.

ಈ ಕಾಲದಲ್ಲಿ ಬೆಳೆದ ವಿಮರ್ಶೆಯಲ್ಲಿ ಇಂಗ್ಲೀಷ್ ಸಾಹಿತ್ಯದಲ್ಲಿರುವ ಪುಸ್ತಕ ವಿಮರ್ಶೆಯ ಮಾರ್ಗವೇ ಪ್ರಧಾನ ಮಾರ್ಗವಾಗಿದೆ. ರಾಜಕೀಯ ತತ್ವಗಳನ್ನು, ಮಾನವಿಕ ಶಾಸ್ತ್ರಗಳನ್ನು, ಮನಶ್ಶಾಸ್ತ್ರವನ್ನು ತಳಹದಿಯಾಗಿ ಇಟ್ಟುಕೊಂಡು ವಿಮರ್ಶೆ ಮಾಡಿ ಕೃತಿಗಳ ಆಲೋಚನೆಗಳಿಗೆ ಬೆಲೆ ಕಟ್ಟುತ್ತಾರೆ. ಕಳೆದ ಇಪ್ಪತ್ತು ವರ್ಷಗಳಲ್ಲಿ ಸಾಹಿತ್ಯವನ್ನು ರಚಿಸಿರುವ ಮಹಿಳಾ ವರ್ಗ ತುಂಬ ದೊಡ್ಡದಾಗಿದೆ. ಸುಮಾರು 75 ಜನ ಉತ್ತಮ ಲೇಖಕಿಯರಿದ್ದಾರೆ. ಅವರೆಲ್ಲರ ಬಗ್ಗೆ ಒಂದು ಪರಿಚಯಗ್ರಂಥವೇ ಇದೆ. ಇವರಲ್ಲಿ ಕೆಲವು ಹಿರಿಯ ಕವಿಗಳೂ ಕತೆಗಾರರೂ ಕಾದಂಬರಿಕಾರರೂ ವಿಮರ್ಶಕರೂ ಇದ್ದಾರೆ.

ವಿಶ್ವವಿದ್ಯಾನಿಲಯಗಳಲ್ಲಿ ತೌಲನಿಕ ವ್ಯಾಸಂಗಕ್ಕೆ ಹೆಚ್ಚು ಗಮನವನ್ನು ಕೊಡಲಾಗುತ್ತಿದೆ. ಜಾನಪದ ಸಾಹಿತ್ಯ ಅಥವಾ ಮೌಖಿಕ ಸಾಹಿತ್ಯದ ಸಂಗ್ರಹ ಪ್ರಕಟಣೆ, ವ್ಯಾಸಂಗ, ವಿಮರ್ಶೆ ಇವೂ ಅಧಿಕವಾಗಿವೆ.

ಅಪಾರ ವಿಷಯ ಸಂಗ್ರಹವಾಗಿದೆ. ಜಾನಪದ ಸಾಹಿತ್ಯದ ಬಗ್ಗೆ ಗಂಭೀರವಾದ ಅನೇಕ ಸಂಶೋಧನೆಗಳಾಗಿವೆ. ಇವೂ ನವೋದಯದ ಪರಿಣಾಮವೇ!

ಕನ್ನಡದ ಪುಸ್ತಕ ಪ್ರಕಟಣೆ ಅಪಾರ ಅಭಿವೃದ್ಧಿಯಾಗಿದೆ. ಪುಸ್ತಕ ಪ್ರಕಟಣೆಯ ಕಲೆ ಅಂತರರಾಷ್ಟ್ರೀಯ ಮಟ್ಟಕ್ಕೆ ತಲುಪಿದೆ. ಬೃಹತ್ತಾದ ಪ್ರಕಟಣೆಯೂ ಬೃಹತ್ತಾದ ಪುಸ್ತಕ ವ್ಯಾಪಾರವೂ ನಡೆಯುತ್ತಿವೆ. ಪುಸ್ತಕ ಪ್ರಕಾಶನ ಈಗ ಲಾಭದಾಯಕ ವೃತ್ತಿಯಾಗಿದೆ.

ಒಟ್ಟಿನಲ್ಲಿ ಈ ನೂರು ವರ್ಷಗಳಲ್ಲಿ ಆದ ಕನ್ನಡ ಸಾಹಿತ್ಯದ ಕೃಷಿ ಹಿಂದೆ ಯಾವ ಶತಮಾನದಲ್ಲಿಯೂ ಆಗಿರಲಿಲ್ಲ. ಕ್ರಿ.ಶ. ಹತ್ತನೆಯ ಶತಮಾನವು ಹೇಗೆ ಹಳಗನ್ನಡದ ಸುವರ್ಣಯುಗವಾಯಿತೋ ಹಾಗೆಯೇ ಈ ಇಪ್ಪತ್ತನೆಯ ಶತಮಾನವೂ ಕೂಡ ಹೊಸಗನ್ನಡದ ಸುವರ್ಣಯುಗವಾಗಿ ಪರಿಣಮಿಸಿದೆ. ಮುಂದೆ ಕನ್ನಡದ ಸಾಹಿತ್ಯ ಚರಿತ್ರೆಯನ್ನು ಬರೆಯುವಾಗ ವಿದ್ವಾಂಸರು ಈ ವಿವರವನ್ನು ಖಂಡಿತವಾಗಿ ದಾಖಲಿಸುತ್ತಾರೆ. ಈ ಶತಮಾನದ ಕನ್ನಡದ ಬೆಳಸನ್ನು ಕಂಡು ಇತರ ಭಾಷಾಪ್ರಾಂತದವರು ಕರ್ನಾಟಕವನ್ನು ಕುರಿತು ಕರುಬುವಷ್ಟು ಸಾಹಿತ್ಯ ವರ್ಣರಂಜಿತವಾಗಿದೆ. ನಾನು ಮಾತನಾಡುತ್ತಿರುವ ಈ ದಶಮಾನದಲ್ಲಿ ಕೂಡ ಕನ್ನಡದಲ್ಲಿ ಬರುತ್ತಿರುವ ಲೇಖನದ ಭಾಷೆಯಲ್ಲಿ ಬೇರೊಂದು ಬಗೆಯ ನವೀನತೆ ಕಾಣಬರುತ್ತಿದೆ. ವಾರ್ತಾ ಪತ್ರಿಕೆಗಳಲ್ಲಿ ಈಗ ಬರುವ ಯುವ ಲೇಖಕರು ಬಳಸುವ ಭಾಷೆಯಲ್ಲಿ ಹತ್ತು ವರ್ಷಗಳ ಹಿಂದಿನ ಭಾಷೆಗಿಂತ ಪೂರ್ಣವಾಗಿ ಬದಲಾದ ರೀತಿ ಎದ್ದು ಕಾಣುತ್ತಿದೆ. ಅದರಲ್ಲಿ ನಿಜವಾಗಿಯೂ ಒಂದು ಹೊಸ ಆಕರ್ಷಕ ಶೈಲಿ ರೂಪುಗೊಳ್ಳುತ್ತಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ವಿಶೇಷವಾಗಿ ಕಲಿಯದಿದ್ದರೂ ಕನ್ನಡದಲ್ಲಿ ಲೇಖನಗಳನ್ನು ರಚಿಸುವವರನ್ನೂ ಕವನ ಕಟ್ಟಿಕೊಡುವವರನ್ನೂ ನಾನು ಕಂಡಿದ್ದೇನೆ. ಅವರು ವೈದ್ಯರು, ತಂತ್ರಜ್ಞಾನಿಗಳು, ವಿಜ್ಞಾನಿಗಳು. . . ಹೀಗೆ. ಅವರಿಗೆ ಉತ್ಸಾಹವಿದೆ, ದಟ್ಟವಾದ ಅರಿವಿಲ್ಲ. ಅಂಥವರ ಬರಹದಲ್ಲಿ ಸಾಮರ್ಥ್ಯ ಹೆಚ್ಚಬೇಕಾದರೆ ಹಳಗನ್ನಡದ ಹಿನ್ನೆಲೆ ಸ್ವಲ್ಪ ಇರಬೇಕು. ಇಂಥವರು ಸ್ವಲ್ಪ ಶ್ರಮಪಟ್ಟರೆ ಅವರೇ ಸ್ವಂತವಾಗಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳುವ ಮಾರ್ಗವಿದೆ. ಅದು ಕುಮಾರವ್ಯಾಸನನ್ನೂ ವಚನಸಾಹಿತ್ಯವನ್ನೂ ಪ್ರತಿನಿತ್ಯ ಸ್ವಲ್ಪ ಸ್ವಲ್ಪ ಓದುವುದು, ಇಷ್ಟೆ! ಹೀಗೆ ಅವರೆಲ್ಲ ಬೆಳೆಯಲಿ ಎಂದು ಹಾರೈಸುತ್ತೇನೆ.

ಕೆಲವರು ಮಹಿಳೆಯರ ಬರಹಗಳಲ್ಲಿ, ಇದು ಪುರುಷರು ಬಳಸಲಾಗದ ಶೈಲಿ ಎಂಬಷ್ಟು ವ್ಯತ್ಯಾಸವನ್ನು ನಾನು ಪರಿಗಣಿಸಿದ್ದೇನೆ. ನನ್ನ ಕೆಲವು ಮುನ್ನುಡಿಗಳಲ್ಲಿ ಈ ಮಾತನ್ನು ಹೇಳಿದ್ದೇನೆ ಕೂಡ. ಪ್ರಸಿದ್ಧರಾದ ಕೆಲವರು ಮಹಿಳೆಯರು ಅವರದೇ ಆದ ಶಬ್ದ ಸಮುದಾಯಗಳನ್ನು ರೂಪಿಸಿಕೊಂಡಿದ್ದಾರೆ. ಇದರಲ್ಲಿಯೂ ಒಂದು ಹೊಸತನವಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಈ ಶತಮಾನದ ಕೃಷಿಯಿಂದ ಕನ್ನಡದ ನೆಲ ಎಷ್ಟು ಫಲವತ್ತಾಗಿದೆ ಎಂಬುದು ಸ್ಪಷ್ಟವಾಗಿ ತಿಳಿಯಬರುತ್ತಿದೆ. ಮುಂದೆ ಬರುವ ಸಾಹಿತ್ಯಕ್ಕೆ ಬೇಕಾದ ಎಲ್ಲ ಹಿನ್ನೆಲೆಯನ್ನೂ ಈ ಶತಮಾನ ಸೃಷ್ಟಿಸಿದೆ. ನಾವಿನ್ನು ಹೊಸದಕ್ಕೆ ದಾರಿ ಮಾಡೋಣ. ಬರುವುದನ್ನು ಪ್ರೀತಿಯಿಂದ ನಿರೀಕ್ಷಿಸೋಣ, ಎಂಬ ಆಲೋಚನೆ ನನಗೆ ಹೊಳೆದಿದೆ.

ನಾನು ಕನ್ನಡ ಭಾಷೆಯ ವ್ಯಾಸಂಗದಲ್ಲಿ ನಿರತನಾಗಿರುವವನು. ಕನ್ನಡವನ್ನು ಆಳವಾಗಿ ಅರ್ಥಮಾಡಿಕೊಳ್ಳಬೇಕೆಂಬ ಆಸಕ್ತಿಯುಳ್ಳ ವಿದ್ಯಾರ್ಥಿ. ಕನ್ನಡವನ್ನು ಪ್ರೀತಿಸುವ ಜನಸಮುದಾಯದಲ್ಲಿ ನಾನೂ ಒಬ್ಬ. ಆದುದರಿಂದ ಈ ಭಾಷೆಯಲ್ಲಿ ಈಗ ಏನಾಗುತ್ತಿದೆ ಎಂಬುದರ ಕಡೆಗೆ ಈ ಬೃಹತ್ಸಭೆಯ ದೃಷ್ಟಿಯನ್ನು ಸೆಳೆಯಲು ಬಯಸುತ್ತೇನೆ. ಈಗಾಗಲೇ ಹೇಳಿರುವಂತೆ ಕನ್ನಡದ ಶಬ್ದ ಸಂಪತ್ತು ವೃದ್ಧಿ ಹೊಂದಿದೆ ಎಂಬುದು ನಿಜ. ಆದರೆ ಬೆಂಗಳೂರು ಮತ್ತು ಇತರ ಬೃಹನ್ನಗರಗಳಲ್ಲಿ ಮಧ್ಯಮ ವರ್ಗದ ಜನರು ಕನ್ನಡ ಭಾಷೆಯನ್ನು ಈಗ ಉಪಯೋಗಿಸುತ್ತಿರುವ ರೀತಿಯಲ್ಲಿ ಕನ್ನಡಕ್ಕೆ ಒಂದು ಅಪಾಯ ಕಾದಿದೆ. ನಾಗರಿಕರ ಆಡುಮಾತಿನಲ್ಲಿ ಇಂಗೀಷ್ ಶಬ್ದಗಳ ಮಿಶ್ರಣದ ಪ್ರಮಾಣದಲ್ಲಿ ಏರುಪೇರಾಗಿದೆ. ಇದನ್ನು ಲೆಕ್ಕ ಮಾಡಿದರೆ ಶೇಕಡ 60ರಷ್ಟು ಇಂಗ್ಲೀಷ್ ಶಬ್ದಗಳು ಕಾಣಬರುತ್ತಿವೆ. ಅವರು ಒಂದೇ ಒಂದು ವಾಕ್ಯವನ್ನೂ ಸಂಪೂರ್ಣವಾಗಿ ಕನ್ನಡದಲ್ಲಿ ಮತನಾಡುವುದಿಲ್ಲ. ಹಾಗೆ ಮಾತನಾಡಲು ಅವರಿಗೆ ಕನ್ನಡದ ಸಾಮರ್ಥ್ಯವಿದ್ದರೂ ಆ ಸಾಮರ್ಥ್ಯವನ್ನು ಉಪಯೋಗಿಸುತ್ತಿಲ್ಲ. ಇದೇ ನಿಜವಾದ ಅಪಾಯ. ಅವರು ತಾವು ಆಡುತ್ತಿರುವ ಮಾತಿನ ರೀತಿಯಲ್ಲಿರುವ ಅಪಾಯವನ್ನೂ ತಿಳಿಯದೆ ಇದ್ದಾರೆ. ಸಂಪೂರ್ಣವಾಗಿ ಸಂವಾದವನ್ನೆಲ್ಲ ಇಂಗ್ಲೀಷಿನಲ್ಲಿಯೇ ಮಾಡುವ ಸಮರ್ಥರ ರೀತಿಯೇ ಬೇರೆ. ಅವರು ಇಂಗ್ಲೀಷ್ ಭಾಷೆಯಲ್ಲಿ ಪರಿಣತರು. ಅವರಲ್ಲಿ ಕೆಲವರು ಕನ್ನಡದಲ್ಲಿಯೂ ಅಷ್ಟೇ ಪರಿಣತರು. ಅಂಥವರು ಸಂಪೂರ್ಣವಾಗಿ ಕನ್ನಡವನ್ನೇ ಉಪಯೋಗಿಸುತ್ತಾರೆ. ಇಂಥ ಹಿರಿಯರನ್ನು ಕುರಿತು ನಾನು ಮಾತನಾಡುತ್ತಿಲ್ಲ. ನನ್ನ ದೃಷ್ಟಿ ಸಾಮಾನ್ಯ ವಿದ್ಯಾರ್ಥಿಗಳು, ಅವರಿಗೆ ಶಾಲಾ ಕಾಲೇಜುಗಳಲ್ಲಿ ಬೋಧಿಸುತ್ತಿರುವ ಅವರವರ ವಿದ್ಯಾಕ್ಷೇತ್ರಗಳಲ್ಲಿ ಸಮರ್ಥರಾದ



ಉಪಾಧ್ಯಾಯವರ್ಗ ಇವರ ಸಂವಾದವನ್ನು ಪರಿಶೀಲಿಸುವಾಗ ಮತ್ತು ಬೀದಿಯಲ್ಲಿ ಓಡಾಡುವ ಇತರ ಸಮಾಜನ್ದ ಮಧ್ಯಮ ವರ್ಗದ ಜನರು ಇವರ ಭಾಷೆಯನ್ನು ಕುರಿತದ್ದು.

ಬೆಂಗಳೂರಿಗೆ ಬಂದ ಗ್ರಾಮೀಣ ಪ್ರದೇಶದ ಜನರಿಗೆ ಇವರ ಮಾತನ್ನು ಕೇಳಿ ದಿಗ್ಭ್ರಮೆಯಾಗುತ್ತದೆ. ಬೆಂಗಳೂರಿನಲ್ಲಿ ಕನ್ನಡ ಸಾಯುತ್ತಿದೆ ಎಂದು ಹೇಳುತ್ತಾರೆ. ಹಾಗೆ ಹೇಳುವವರಿಗೆ ಗ್ರಾಮೀಣ ಪ್ರದೇಶದಲ್ಲಿ ಉಳಿಯುತ್ತದೆಯೇ?

ಇಂಥ ವಿಪರ್ಯಾಸವನ್ನು ಗಮನಿಸುತ್ತಿರುವ ನನಗೆ ಕೆಲವು ವಿವರಗಳನ್ನು ಇಂಥ ಸಭೆಯ ಮುಂದೆ ಹೇಳಲೇಬೇಕೆಂಬ ಅಪೇಕ್ಷೆಯುಂಟಾಗಿದೆ.


ಈಗಿನ ನಾವು ಬದುಕಿರುವ ಈ ಕಾಲದಲ್ಲಿ ಕನ್ನಡ ಭಾಷೆಯು ತನ್ನ ಮತ್ತೊಂದು ಹೊಸತನವನ್ನು ಪಡೆಯುತ್ತಾ ಇದೆ. ಹಿಂದೆ ಕನ್ನಡದ ಆಡುಮಾತಿಗೆ ಸಂಸ್ಕೃತ ಶಬ್ಧಗಳು ಹೇಗೆ ಸೇರಿಕೊಂಡಿತೋ ಹಾಗೆ ಈಗ ಇಂಗ್ಲೀಷಿನಿಂದ ಸಾವಿರಾರು ಶಬ್ದಗಳು ನಾಗರಿಕ ಜೀವನದಲ್ಲಿ ಸೇರಿಕೊಳ್ಳುತ್ತಾ ಇದೆ. ಇದನ್ನು ತಪ್ಪಿಸುವುದಕ್ಕೆ ಆಗುವುದಿಲ್ಲ. ಹೀಗೆ ನಗರದ ಸಂಕೀರ್ಣ ಜನಸಮುದಾಯದಲ್ಲಿ ಇಂಗ್ಲೀಷಿನ ಮತ್ತಿತರ ಭಾಷೆಗಳ ಅಧಿಕವಾಗಿ ಹಿಂದಿ ಮತ್ತು ಉರ್ದು ಭಾಷೆಗಳ ಶಬ್ದಗಳು ಒಗ್ಗಟ್ಟಿನಿಂದ ನುಗ್ಗುತ್ತಿವೆ. ಕಾಲಾನುಕ್ರಮದಲ್ಲಿ ಈ ಶಬ್ಧಗಳಲ್ಲಿ ಅನೇಕ ಶಬ್ಧಗಳು ಕನ್ನಡಕ್ಕೆ ಎರವಲುಗಳಾಗಿ ಬಂದು ಸೇರಿಕೊಂಡುಬಿಡುತ್ತವೆ. ಈ ಎಲ್ಲಾ ಕನ್ನಡ ಶಬ್ಧಗಳು ಹಾಗೆ ಬಳಕೆಗೆ ಬರಬೇಕಾದರೆ ಒಂದಿಪ್ಪತ್ತು ಮೂವತ್ತು ವರ್ಷಗಳು ಬೇಕಾಗುತ್ತವೆ. ಈಗಾಗಲೇ ಹಿಂದಿನ ಅನೇಕ ವರ್ಷಗಳಲ್ಲಿ ನಮ್ಮವೇ ಆದ ಎಷ್ಟೊಂದು ಇಂಗ್ಲೀಷ್ ಶಬ್ದಗಳಿವೆ ನೋಡಿ. ಕಾರು, ಬುಕ್ಕು, ಪೆನ್ನು, ಇಂಕು, ಪೇಪರ್ರು. ಆದರೆ ಈಗ ನುಗ್ಗಲು ಆತುರಪಡುತ್ತಿರುವ ಶಬ್ಧಗಳು ಇಂಥ ಶಬ್ದಗಳಲ್ಲ; ಕನ್ನಡದಲ್ಲಿ ಸೊಗಸಾದ ಶಬ್ಧಗಳಿರುವಾಗ ಅವುಗಳನ್ನೇ ತಳ್ಳೀ ಕನ್ನಡಕ್ಕೆ ಬರಲು ಪ್ರಯತ್ನಪಡುತ್ತಿರುವ ಅವುಗಳನ್ನೇ ತಳ್ಳಿ ಕನ್ನಡಕ್ಕೆ ಬರಲು ಪ್ರಯತ್ನಪಡುತ್ತಿರುವ ಶಬ್ದಗಳು. ಉದಾಹರಣೆ: ಚಿಲ್ಲೀಸ್, ರಾಡಿಶ್, ಬೀನ್ಸ್, ಕುಕುಂಬರ್ರು, ಕ್ಯಾಪ್ಸಿಕಮ್ಮು, ನೈಫು, ಆಯಿಲ್ಲು, ಬಟ್ಟರ್ರು, ಪೌಡರ್ರು, ಗ್ರೈಂಡು ಇತ್ಯಾದಿ. ಎಲ್ಲಾ ಅಡಿಗೆ ಮನೆಗೇ ನುಗ್ಗಿಬಿಟ್ಟಿವೆ. ಇದಕ್ಕೆ ಕಾರಣ ದೂರದರ್ಶನದಲ್ಲಿ 'ಹೊಸರುಚಿ'ಯ ಪ್ರದರ್ಶನ ಮಾಡುವ ಕನ್ನಡ ಮಹಿಳಾಮಣಿಗಳು ಸಂಭಾಷಣೆಯ ಪರಿಣಾಮ ಎಫ್.ಎಂ.ರೇಡಿಯೋ, ದೂರದರ್ಶನದ ಅನೇಕ ವಾಹಿನಿಗಳ ಪ್ರಭಾವ. ವರ್ತಮಾನ ಪತ್ರಿಕೆಗಳಲ್ಲಿಯೂ ದೂರದರ್ಶನದಲ್ಲಿಯೂ

ಆಕಾಶವಾಣಿಯಲ್ಲಿಯೂ ಪ್ರಚಾರವಾಗುವ ಇಂಥ ಪ್ರಯೋಗಗಳನ್ನು ನಿಲ್ಲಿಸಿ ನಮ್ಮಲ್ಲಿ ಪ್ರಚಾರದಲ್ಲಿರುವ ಕನ್ನಡ ಶಬ್ದಗಳನ್ನು ಉಪಯೋಗಿಸುವಂತೆ ಆಯಾ ಕೇಂದ್ರಗಳ ಅಧಿಕಾರಿಗಳು ನಿರ್ದೇಶಿಸಬೇಕು. ಯಾವ ಶಬ್ದ ಬೇಕಾದರೂ ನಿಧಾನವಾಗಿ ತಾನೇ ತಾನಾಗಿ ಬರಲಿ. ಆಅರೆ ನಾವೇ ಅವುಗಳನ್ನು ಅನವಶ್ಯಕವಾಗಿ ಆಮದು ಮಾಡಿಕೊಳ್ಳಬಾರದು. ಹಾಗೆ ಮಾಡಿದರೆ ನಮ್ಮ ಸ್ವಂತ ಶಬ್ದಸಂಪತ್ತು ಮಾಯವಾಗಿಬಿಡುತ್ತದೆ. ನಾವು ಅವುಗಳಿಲ್ಲದೆ ಕನ್ನಡ ಶಬ್ದದರಿದ್ರರಾಗಿಬಿಡುತ್ತೇವೆ. ಸಮಾಜದ ಹಿರಿಯರು, ವಿದ್ಯಾವಂತ ಮಹಿಳೆಯರು, ಸಾಮಾಜಿಕ ಸಂಸ್ಥೆಗಳ ಕಾರ್ಯಕರ್ತರು, ವಾರ್ತಾಪತ್ರಿಕೆಗಳ ಪತ್ರಕರ್ತರು, ಕನ್ನಡ ಚಳವಳಿಯ ನಾಯಕರು ಇವರೆಲ್ಲರಿಗೂ ಇ ಬಗ್ಗೆ ತಿಳಿವಳಿಕೆಯನ್ನು ನೀಡುವ ಒಂದು ಕನ್ನಡ ಆಂದೋಳನ ನಡೆಯಬೇಕು. ಕನ್ನಡ ಸಾಹಿತ್ಯ ಪರಿಷತ್ತು ಅದರ ಜಿಲ್ಲಾ ಮತ್ತು ತಾಲ್ಲೂಕು ಅಂಗಸಂಸ್ಥೆಗಳು, ಮಹಿಳೆಯರ ಕ್ಲಬ್ಬುಗಳು, ಬೆಳಗ್ಗೆ ವಾಯುವಿಹಾರಕ್ಕೆಂದು ಹೋಗುವ ಹಿರಿಯರ ತಂಡ ಇವರೆಲ್ಲ ಈ ಬಗ್ಗೆ ಎಚ್ಚರಿಕೆ ವಹಿಸಬೇಕು. ಕನ್ನಡಕ್ಕೆ ಬರುವ ಶಬ್ದಗಳು ಯಾವ ಭಾಷೆಯಿಂದ ಬೇಕಾದರೂ ಬರಲಿ, ನಿಧಾನವಾಗಿ ಬರಲಿ. ನಾವೇ ಬಲವಂತವಾಗಿ ತುರುಕುವುದು ಬೇಡ. ಅಷ್ಟೆ!

ಅನೇಕ ದೂರದರ್ಶನ ವಾಹಿನಿಗಳಲ್ಲಿ – ('ಅನ್ನದಾತ', 'ಕೃಷಿದರ್ಶನ' ಮುಂತಾದ ಕಾರ್ಯಕ್ರಮಗಳಲ್ಲಿ ಗ್ರಾಮೀಣ ರೈತರೇ ಮಾತನಾಡುವಾಗ ಎಂಥ ಒಳ್ಳೆಯ ಕನ್ನಡ ಭಾಷೆ ಪ್ರಯೋಗವಾಗುತ್ತದೆ. ನೋಡಿ, ಕನ್ನಡದ ಪ್ರಾದೇಶಿಕ ಸೊಗಡಿನಿಂದ ತುಂಬಿರುವ ಅವರ ಕನ್ನಡ ತುಂಬ ಸ್ವಾರಸ್ಯಕರ. ಅವರ ಮಾತಿನಲ್ಲಿ ಕಾಣುವ ಕನ್ನಡತನವನ್ನು ನಾವು ಮಾದರಿಯಾಗಿ ಉದಾಹರಿಸಬಹುದು.

ಕನ್ನಡವು ಸಾಯುತ್ತದೆ ಎಂಬ ಮಾತನ್ನು ಯಾರೂ ಆಡಬಾರದು. ಭಾಷಾಶಾಸ್ತ್ರಿಗಳು ತಯಾರು ಮಾಡಿರುವ ಅಂಕಿ ಅಂಶಗಳಲ್ಲಿ ಪ್ರಪಂಚದ ಪ್ರಾಚೀನ ಪ್ರಸಿದ್ಧ ಸಮೃದ್ಧ ಭಾಷೆಗಳ ಪಟ್ಟಿಯೊಂದು ಇದೆ. ಅಂಥ ಆರು ಸಾವಿರ ಭಾಷೆಗಳ ಪಟ್ಟಿಯಲ್ಲಿ ಕನ್ನಡವು ಮೊದಲ ಮೂವತ್ತು ಭಾಷೆಗಳಲ್ಲಿ ಒಂದಾಗಿದೆ. ಅದು ಸಾಯುವ ಭಾಷೆಯಲ್ಲ. ಚಂದ್ರ ಸೂರ್ಯರಿರುವ ತನಕ ಬಾಳುವ ಬೆಳೆಯುವ ಭಾಷೆ. ಕಾಲಮಾನದಲ್ಲಿ ಇದೂ ಬದಲಾವಣೆಯನ್ನು ಹೊಂದುತ್ತದೆ. ನಾವು ಈ ಬದಲಾವಣೆಯ ಕಾಲದಲ್ಲಿ ಬಾಳುತ್ತಿದ್ದೇವೆ. ನಮ್ಮ ಹೊಸ ಶಬ್ದಸಂಪತ್ತಿನ ಪ್ರಭಾವದಿಂದ ಈಗಿರುವ ಕನ್ನಡ ಶಬ್ದ ಸಂಪತ್ತನ್ನು ಕಳೆದುಕೊಳ್ಳಬಾರದು ಎಂಬುದನ್ನು ನಾವು ತಿಳಿದಿರಬೇಕು. ಸಾಯುವ ಭಾಷೆ ಎಂಬ ಮಾತು ಬಂದಾಗ ಒಂದು ವಿಶಿಷ್ಟವಾದ ವಿವರವನ್ನು ನಾನು ಈ ಸಭೆಯ ಗಮನಕ್ಕೆ ತರಬೇಕು. ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದಲ್ಲಿ ಅಪೂರ್ವವಾದ ಭಾರತದ ಮತ್ತು ಇತರ ದೇಶಗಳ ಮೌಖಿಕ ಭಾಷೆಗಳ ಬಗ್ಗೆ ಒಂದು ಪ್ರಮುಖ ಯೋಜನೆಯನ್ನು ಕೈಗೊಂಡಿದ್ದಾರೆ. ಈಗ ಪ್ರಪಂಚದಲ್ಲಿ ಪ್ರಚಾರದಲ್ಲಿರುವ ಭಾಷೆಗಳ ಸಂಖ್ಯೆ ಸುಮಾರು 6500. ಇವುಗಳಲ್ಲಿ 3524 ಭಾಷೆಗಳು ಈ ಶತಮಾನದ ಕೊನೆಯ ವೇಳೆಗೆ ಸಂಪೂರ್ಣವಾಗಿ ಮಾಯವಾಗಿಬಿಡುತ್ತವೆಂದು ನಿರೀಕ್ಷೆ. ಅವುಗಳಲ್ಲಿ 150 ಭಾಷೆಗಳು ಆಗಲೇ ಸಾಯುವ ಸ್ಥಿತಿಯಲ್ಲಿವೆ. ಹೀಗಿರುವ ಎಲ್ಲ ಭಾಷೆಗಳ ಬಗ್ಗೆ database ಅನ್ನು (ಅಂದರೆ ಕಂಪ್ಯೂಟರಿನಲ್ಲಿ ದೊರಕುವ ಅಂಕಿ ಅಂಶಗಳೂ) ಸಂಗ್ರಹಿಸಿ ಪ್ರಪಂಚದ ಎಲ್ಲರಿಗೂ ದೊರಕುವಂತೆ ಮಾಡುತ್ತಿದ್ದಾರೆ. ಇದಕ್ಕೆ ಹೆಸರು Worlds Oral Literature Project (www.oralliterarure.org). ಈ ಭಾಷಾಶಾಸ್ತ್ರಿಗಳಿಗೆ ಎಲ್ಲ ಭಾಷೆಗಳ ಬಗ್ಗೆ ಅವು ಪ್ರತಿನಿಧಿಸುವ ಸಂಸ್ಕೃತಿಯ ಬಗ್ಗೆ ಇರುವ ಕಾಳಜಿಗೆ ನಾವು ಕೃತಜ್ಞರಾಗಿರಬೇಕು.


ಬೆಂಗಳೂರಿನ ಪ್ರಶ್ನೆಯೇ ಬೇರೆ. ಬೆಂಗಳೂರಿನಲ್ಲಿ ಕನ್ನಡವನ್ನು ಉಳಿಸುವುದು ಸಾಧ್ಯವೇ? ಬೆಂಗಳೂರಿನಲ್ಲಿರುವ ಕನ್ನಡಿಗರ ಜನಸಂಖ್ಯೆ ಈಗ ಶೇಕಡ 30ಕ್ಕೆ ಇಳಿದಿದೆ. ಇನ್ನೂ ಕಡಮೆಯಾಗುತ್ತಾ ಇದೆ. ತೆಲುಗು, ತಮಿಳು, ಹಿಂದಿ, ಉರ್ದು, ಮರಾಠಿ, ಗುಜರಾತಿ, ಬಂಗಾಳಿ, ಸಿಂಧಿ ಭಾಷೆಗಳೂ ಸ್ಪರ್ಧೆಯನ್ನು ಹೂಡುತ್ತಿವೆ. ಈ ಎಲ್ಲ ಭಾಷೆಗಳ ನಡುವೆ ಇಂಗ್ಲೀಷಿಗೆ, ಹಿಂದಿಗೆ ಅಧಿಕವಾದ ಸ್ಥಾನ ಸಿಕ್ಕಿದೆ. ಹೀಗಿರುವಾಗ ಈ ಬೃಹನ್ನಗರದಲ್ಲಿ ಕನ್ನಡವನ್ನು ಉಳಿಸಲು ಕೆಲವು ಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ. ಉನ್ನತ ಕೈಗಾರಿಕೆಯ ಉದ್ಯಮಗಳಲ್ಲಿರುವ ಕನ್ನಡಿಗರಿಂದ ಕನ್ನಡಿಗರಲ್ಲದವರಿಗೆ ಕನ್ನಡವನ್ನು ಕಲಿಸುವ ಪ್ರಯತ್ನಗಳಾಗುತ್ತಿವೆ. ಇಂಥ ಪ್ರಯತ್ನಗಳಿಂದ ಆಗುವ ಪ್ರತಿಫಲ ಕಡಿಮೆ. ಇದಕ್ಕಿಂತ ಹೆಚ್ಚು ತೀವ್ರವಾದ ಸಾರ್ವಜನಿಕ ಪ್ರಯತ್ನಗಳಾಗಬೇಕು. ಕರ್ನಾಟಕದಲ್ಲಿರುವ ಐಟಿ, ಬಿಟಿ ಮೊದಲಾದ ಉದ್ಯಮಗಳು ಸಾವಿರಾರು ಜನರಿಗೆ ಉದ್ಯೋಗಗಳನ್ನು ನೀಡಿವೆ. ಇವರಲ್ಲಿ ಕನ್ನಡದ ಜನ ಕಡಿಮೆ, ಹೊರಗಿನವರು ಅಧಿಕ. ಹೀಗೆ ಹೊರಗಿನಿಂದ ಬಂದು ಕರ್ನಾಟಕದಲ್ಲಿ ನೆಲೆಸಿರುವ ಉದ್ಯೋಗಿಗಳು ಕನ್ನಡವನ್ನು ಉತ್ಸಾಹದಿಂದ ಕಲಿಯುವಂತೆ ಮಾಡುವ ಕಾರ್ಯವನ್ನು ಎಲ್ಲ ಉದ್ಯಮಪತಿಗಳು ಮಾಡಲೇಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಹೀಗೆ ಕನ್ನಡ ಕಲಿತರೆ ಅವರು ನಮ್ಮ ಕನ್ನಡಿಗರೇ ಆಗುತ್ತಾರೆ. ಇದರಿಂದ ಸೌಹಾರ್ದ ಉಂಟಾಗುತ್ತದೆ.



ಎಲ್ಲ ಕನ್ನಡಿಗರೂ ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯೂ ಕರ್ನಾಟಕ ಸರಕಾರವೂ ಈ ಬಗ್ಗೆ ತುಂಬ ಎಚ್ಚರವಹಿಸಬೇಕು. ತಮಿಳು ನಾಡಿನಲ್ಲಿ ಸರಕಾರವು ಮಾಡಿರುವ ಕೆಲವು ಪ್ರಯತ್ನಗಳೂ ಸಫಲವಾಗಿವೆ. ನಾವೂ ಆ ಮಾರ್ಗವನ್ನೇ ಉಪಯೋಗಿಸಬೇಕು.


ಇದು ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಷಯ. ಎಷ್ಟೇ ಭಾಷೆಗಳ ಜನ ಬೆಂಗಳೂರಿಗೆ ಬಂದು ಸೇರಿದರೂ ಆಆ ಭಾಷೆಯ ಜನರ ಮಕ್ಕಳಿಗೆ ವಿದ್ಯಾಭ್ಯಾಸ ಬೇಕು ತಾನೆ. ಅವರವರು ಸ್ವಂತ ಭಾಷೆಯ ಶಾಲೆಗಳನ್ನು ಮಾಡಿಕೊಂಡಿದ್ದಾರೆ. ಈ ಎಲ್ಲ ಶಾಲೆಗಳಲ್ಲಿ ಎಲ್ಲ ಮಕ್ಕಳು ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ ಕನ್ನಡವನ್ನು ಕಡ್ಡಾಯವಾಗಿ ಪ್ರಥಮ ಭಾಷೆಯಾಗಿ ಕಲಿಯಲೇಬೇಕೆಂಬ ಬಿಗಿಯಾದ ಕಾನೂನನ್ನು ಸರಕಾರ ಕೂಡಲೇ ಜಾರಿಗೆ ತರಬೇಕು. ಇದು ಸಾಧ್ಯವಾದರೆ ಹತ್ತೇ ವರ್ಷಗಳಲ್ಲಿ ಎಲ್ಲ ಪರಕೀಯರ ಮಕ್ಕಳೂ ಕನ್ನಡಿಗರಾಗಿಬಿಡುತ್ತಾರೆ. ಇಂಥ ಪದ್ಧತಿಗೆ ಭಾರತದ ಸರ್ವೋಚ್ಚ ನ್ಯಾಯಾಲಯವು ತಮಿಳುನಾಡಿಗೆ ಒಪ್ಪಿಗೆ ನೀಡಿದೆ. ಇಷ್ಟೆಲ್ಲ ಅವಕಾಶವಿದ್ದರೂ ನಾವು ಈ ದಿಕ್ಕಿನಲ್ಲಿ ಪ್ರಯತ್ನವನ್ನು ಮಾಡುತ್ತಿಲ್ಲ. ಬೆಂಗಳೂರಿನಲ್ಲಿ ಕನ್ನಡಾ ಉಳಿಯಬೇಕಾದರೆ ಮೊದಲು ಮಾಡಬೇಕಾದ ಕಾರ್ಯ ಇದು. ಇದನ್ನು ಬಿಟ್ಟರೆ ಬೇರೆ ಮಾರ್ಗವೇ ಇಲ್ಲ ಸಾಮಾಜಿಕವಾಗಿ. ನಮ್ಮ ಸರಕಾರವೇ 'ಅಲ್ಪಸಂಖ್ಯಾತರು' ಎಂಬ ಹೆಸರಿನ ಅಡಿಯಲ್ಲಿ ಅಂಥ ಅನೇಕ ಶಾಲೆಗಳಿಗೆ ಅವಕಾಶವನ್ನು ಕಲ್ಪಿಸಿದೆ. ಈ ಅವಕಾಶವನ್ನು ಪಡೆದವರು ವೀರಭದ್ರನಂತೆ ವರ್ತಿಸುತ್ತಿದ್ದಾರೆ. ಈ ಎಲ್ಲ ಶಾಲೆಗಳವರೂ ತಮ್ಮ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಿ, ಬಹುಸಂಖ್ಯಾತ ಕನ್ನಡಿಗರೊಡನೆ ಹಾಲು ಜೇನಿನಂತೆ ಬೆರೆತು ಬಾಳುವುದನ್ನೂ ಕಲಿಸಬೇಕು. ಅದು ಸಾಧ್ಯವಾಗದೆ ಹೋದರೆ ಸರಕಾರದ ಕಾನೂನಿನ ಅಂಕುಶವನ್ನು ಪ್ರಯೋಗಿಸಬೇಕಾದ ಪರಿಸ್ಥಿತಿ ಬರಲೇಬೇಕಾಗುತ್ತದೆ. ಅದರಿಂದ ಅಲ್ಪಸಂಖ್ಯಾತರಿಗೆ ಪ್ರಯೋಜನವೇ ಹೊರತು ಅಪಕಾರವೇನೂ ಇಲ್ಲ.

ಸ್ವಂತ ಭಾಷೆಯನ್ನು ರಕ್ಷಿಸಿ ಬೆಳೆಸುವ ರೀತಿಯಲ್ಲಿ ಚೀನಾದೇಶವು ಮಾಡುತ್ತಿರುವ ಪ್ರಯತ್ನವು ಎಲ್ಲ ಭಾಷೆಗಳವರಿಗೂ ಮಾದರಿಯಾಗಿದೆ. ಅಮೇರಿಕದಲ್ಲಿರುವ ಚೀನಾ ದೇಶೀಯರ ಮಕ್ಕಳಿಗೆ ಚೀನಾ ದೇಶದ ಆಡಳಿತ ಭಾಷೆಯಾಗಿರುವ ಮಂಡಾರಿನ್ ಭಾಷೆಯನ್ನು ಕಲಿಸುವ ಏರ್ಪಾಟನ್ನು ನಾವು ಪರಿಶೀಲಿಸಬೇಕು.



ಅಮೇರಿಕದ ಚೀನಿ ಭಾಷೆಯ ಶಾಲೆಗಳಲ್ಲಿ ಕಿಂಡರ್‌ಗಾರ್ಟನ್ ಮತ್ತು ಪ್ರಥಮ ತರಗತಿಗಳಲ್ಲಿ ಪಾಠದ ಮಾಧ್ಯಮವು ಚೀನೀ ಭಾಷೆಯಲ್ಲಿಯೇ ನಡೆಯುತ್ತದೆ. ಎರಡನೆಯ ತರಗತಿಯಿಂದ ಇಂಗ್ಲೀಷ್ ಭಾಷೆಯನ್ನು ಕಲಿಸುತ್ತಾರೆ. ಆರನೆಯ ತರಗತಿಯವರೆಗೆ ಅರ್ಧ ಚೀನಿ, ಅರ್ಧ ಇಂಗ್ಲೀಷ್ ಭಾಷೆಯಲ್ಲಿ ಪಾಠಗಳಾಗುತ್ತವೆ. ಅಲ್ಲಿಯೂ ಚೀನಿ .ಅವರಣದಲ್ಲಿಯೇ ಪಾಠಗಳಾಗುತ್ತವೆ. ಇಲ್ಲಿಗೆ ಬರುವ ಅಧ್ಯಾಪಕರೆಲ್ಲ ಟೈವಾನ್ ಅಥವಾ ಚೀನಾ ದೇಶದಿಂದಲೇ ಬರುತ್ತಾರೆ. ಪ್ರಾರಂಭದಲ್ಲಿ ಈ ವಿದ್ಯಾರ್ಥಿಗಳು ಇಂಗ್ಲೀಷ್ ಮಾತನಾಡುವುದರಲ್ಲಿ ಹಿಂದೆ ಬಿದ್ದರೂ ಬರಬರುತ್ತಾ ಎರಡು ಭಾಷೆಗಳಲ್ಲೂ ಸ್ಪಷ್ಟವಾಗಿ ಪರಿಣಾಮದಾಯಕವಾಗಿ ಮಾತನಾಡುತ್ತಾರೆ. ಅಲ್ಲದೆ, ಅವರ ಸೃಷ್ಟಿಶೀಲ ವ್ಯಕ್ತಿತ್ವ ಹೆಚ್ಚು ಪ್ರಭಾವಶಾಲಿಯಾಗಿ ಬೆಳಗುತ್ತದೆ. ಇಂಥ ಶಾಲೆಗೆ ಪ್ರಾರಂಭದಲ್ಲಿ ಏಷ್ಯಾ ಖಂಡದವರು ಹೆಚ್ಚಾಗಿ ಸೇರುತ್ತಿದ್ದರು. ಈಗ ಅಮೇರಿಕನರು, ಬಿಳಿ ಮತ್ತುಕರಿಯ ಜನ ಮತ್ತು ಸ್ಪೇನಿನವರು ಬಂದು ಸೇರುತ್ತಿದ್ದಾರೆ. ಹೀಗೆ ಚೀನಾ ಶಾಲೆಗಳು ಜನಪ್ರಿಯವಾಗಿವೆ. ಅಮೇರಿಕದ ಸರಕಾರವು ಇಂಥ ಶಾಲೆಗಳಿಗೆ ಒಳ್ಳೆಯ ಅನುದಾನವನ್ನು ನೀಡುತ್ತಾ ಇದೆ. ಕನ್ನಡ ಜನರಿಗೂ ಇಂಗ್ಲೀಷ್ ಕಲಿಸುವ ಬಗೆ ಇದು ಮಾದರಿಯಾಗಿದೆ. ಕನ್ನಡವು ಎಲ್ಲ ಶಾಲೆಗಳಲ್ಲಿ ಹತ್ತನೆಯ ತರಗತಿಯವರೆಗೆ ಕಡ್ಡಾಯವಾಗುವುದಾದರೆ ಇಂಗ್ಲೀಷನ್ನು ಎರಡು ಮೂರನೆಯ ತರಗತಿಯಿಂದಲೇ ಕಲಿಸುವುದು ತಪ್ಪಾಗುವುದಿಲ್ಲ. ಕನ್ನಡ ನಾಡಿನ ಸರಕಾರದ ಶಿಕ್ಷಣ ಇಲಾಖೆಯ ಬಗ್ಗೆ ನನ್ನದು ತೀವ್ರ ಆಕ್ಷೇಪಣೆ ಇದೆ. ಅದರಲ್ಲಿರುವ ಕೆಲವು ಅಧಿಕಾರಿಗಳು ಕನ್ನಡದ ಬಗ್ಗೆ ನಿರ್ಲಕ್ಷ್ಯದಿಂದ ಇದ್ದಾರೆ. ಒಂದೆರಡು ಉದಾಹರಣೆಗಳನ್ನು ನೀಡುತ್ತೇನೆ; ಗಮನಿಸಬೇಕು.

ಕಳೆದ ಡಿಸೆಂಬರ್ 18ರಂದು ಕನ್ನಡ ಪ್ರಭ ಪತ್ರಿಕೆಯಲ್ಲಿ ಒಂದು ಭಾರಿ ವರ್ತಮಾನ ಪ್ರಕಟವಾಗಿತ್ತು. ನಗರದ ಒಂದು ಆಂಗ್ಲ ಮಾಧ್ಯಮದ ಶಾಲೆಯಲ್ಲಿ ಶಿಕ್ಷಣ ಇಲಾಖೆಯ ಮೂಗಿನ ಕೆಳಗೇ ಕನ್ನಡದ ಮಕ್ಕಳಿಗೆ ಆಂಧ್ರದ ಪಠ್ಯಪುಸ್ತಕಗಳನ್ನು ಬೋಧಿಸಲಾಗುತ್ತಿತ್ತು. ನಮ್ಮ ನಾಡು ಯಾವುದು? ಪ್ರಶ್ನೆ. ಉತ್ತರ: ಆಂಧ್ರಪ್ರದೇಶ. ನಮ್ಮ ರಾಜಧಾನಿ ಯಾವುದು? ಪ್ರಶ್ನೆ. ಉತ್ತರ: ಹೈದರಾಬಾದ್. ಆ ಮಕ್ಕಳ ಪೋಷಕರು ಮುಖ್ಯಾಧ್ಯಾಪಕರನ್ನು ಕಂಡು ಪ್ರಶ್ನಿಸಿದರೆ ಅವರು 'ನಾವು ಬೋಧಿಸುವುದೇ ಹೀಗೆ. ನಿಮಗೆ ಬೇಡದಿದ್ದರೆ ಮಕ್ಕಳನ್ನು ಬೇರೆ ಶಾಲೆಗೆ ಸೇರಿಸಿ' ಎಂದು ಹೇಳಿ ಗದರಿಸಿದರಂತೆ. ಆಂಧ್ರದ ಪಠ್ಯಗಳನ್ನು ಕೊಳ್ಳಲು ಪ್ರತಿಯೊಬ್ಬ ಮಗುವಿನಿಂದ 1800 ರೂಪಾಯಿಗಳನ್ನು ವಸೂಲಿ ಮಾಡಿದ್ದರಂತೆ. ಅವೆಲ್ಲ ಅಹಮದಾಬಾದಿನಲ್ಲಿ ಪ್ರಕಟಿಸಿದ ಪುಸ್ತಕಗಳು. ಈ ವರ್ತಮಾನ ಬಂದಮೇಲೆ ಶಿಕ್ಷಣ ಇಲಾಖೆ ಏನು ಮಾಡಿತೆಂಬುದರ ಬಗ್ಗೆ ಸಾರ್ವಜನಿಕರಿಗೆ ವಿವರಗಳನ್ನು ಕೂಡಲೇ ತಿಳಿಸಬೇಕು. ಶಿಕ್ಷಣ ಇಲಾಖೆಯಲ್ಲಿ ವಿಷಯ ಪರೀಕ್ಷಕರುಗಳೆಂಬ ಅಧಿಕಾರಿಗಳು ಇರುತ್ತಾರೆ. ಅವರೇನು ಮಡಿದರು? ಇನ್ನು ಎಷ್ಟು ಇಂಥ ಶಾಲೆಗಳಿವೆಯೋ ಬೆಂಗಳೂರು ನಗರದಲ್ಲಿ? ಇದನ್ನು ಔದಾಸೀನ್ಯದಿಂದ ಕಾಣುವ ಇಲಾಖೆಗೆ ನಾಡಿನ ಭಾಷೆಯ ಮೆಲೆ ಪ್ರೀತಿ ಇದೆ ಎನ್ನಬಹುದೆ? ಅಂಥ ಅಧಿಕಾರಿಗಳ ಮೇಲೆ ಸರಕಾರ ಏಕೆ ಕ್ರಮ ಜರುಗಿಸಿಲ್ಲ? ಆ ಶಾಲೆಯ ಆಡಳಿತ ವರ್ಗ ಇದುವರೆಗೆ ಕನ್ನಡಿಗರ ಕ್ಷಮೆ ಯಾಕೆ ಯಾಚಿಸಿಲ್ಲ? ನಮ್ಮ ಶಿಕ್ಷಣ ಇಲಾಖೆಯ ಗಮನಕ್ಕೆ ಮತ್ತೊಂದು ವಿಷಯವನ್ನು ತರಬೇಕಾಗಿದೆ. ನಮ್ಮ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಶಾಲೆಗಳಲ್ಲಿ ಕನ್ನಡದ ಭೋದನೆಗೆ ಅರ್ಹರಾದ ಶಿಕ್ಷಕರು ದೊರಕುತ್ತಿಲ್ಲ. ಹಿಂದೆ ಕನ್ನಡ ಅಥವಾ ಸಂಸ್ಕೃತ ಭಾಷೆಗಳಲ್ಲಿ ಒಂದು ಭಾಷೆಯನ್ನು ಬೋಧಿಸುವುದಕ್ಕೆ ತರಬೇತಿ ಶಾಲೆಗಳಲ್ಲಿ ವಿಶಿಷ್ಟವಾದ ತರಬೇತಿ ಪಡೆದ ಶಿಕ್ಷಕರಿತುತ್ತಿದ್ದರು. ಅವರಿಂದ ಕನ್ನಡ ಅಥವಾ ಸಂಸ್ಕೃತವನ್ನು ಕಲಿತರೆ ಅಂಥ ವಿದ್ಯಾರ್ಥಿಗಳು, ಕಾಗುಣಿತದಲ್ಲಿ ಒಂದೂ ತಪ್ಪು ಮಾಡುತ್ತಿರಲಿಲ್ಲ. ವಾಚನವನ್ನು ಚೆನ್ನಾಗಿ ಕಲಿಯುತ್ತಿದ್ದರು. ಕಾವ್ಯಾಸ್ವಾದನೆಯ ಸುಖವನ್ನೂ ಅನುಭವಿಸುತ್ತಿದ್ದರು. ಈಗಲಾದರೂ ನಮ್ಮಲ್ಲಿರುವ ಕನ್ನಡ ಶಿಕ್ಷಕರಲ್ಲಿ ಅರ್ಹರಾದವರನ್ನು ಆರಿಸಿ ಕನ್ನಡ ಬೋಧನೆಯಲ್ಲಿ ಸರಿಯಾದ ಮಾರ್ಗವನ್ನು ಕಲಿಸುವ ಶಿಬಿರಗಳನ್ನು ನಡೆಸಿ ಪ್ರತಿವರ್ಷವೂ ಕೊನೆಯಪಕ್ಷ 1000 ಶಿಕ್ಷಕರನ್ನು ಸಿದ್ಧಗೊಳಿಸಬೇಕು. ಇದು ನಡೆಯದೆ ಇದ್ದರೆ ಕನ್ನಡದ ಬಗ್ಗೆ ಬಾಲಕರಲ್ಲಿ ಪ್ರೀತಿ ಉಂಟಾಗುವುದಿಲ್ಲ. ಪ್ರೀತಿಯನ್ನು ಉಂಟುಮಾಡುವ ಶಿಕ್ಷಕರ ಸಂಖ್ಯೆ ಬೆಳೆಯಬೇಕು.



ಕನ್ನಡವನ್ನು ಐಚ್ಛಿಕವಾಗಿ, ಆಳವಾಗಿ ಅಭ್ಯಾಸ ಮಾಡಿದವರೇ ಕನ್ನಡ ಶಿಕ್ಷಕರಾಗಬೇಕು. ನಮ್ಮ ನಾಡಿನ ಶಿಕ್ಷಣ ಇಲಾಖೆಗೆ ಈ ಬಗ್ಗೆ ಎಚ್ಚರಿಕೆಯನ್ನು ನಾಡಿನ ಶಾಸಕರು ನೀಡಬೇಕು.

ಎರಡನೆಯದಾಗಿ ಮತ್ತೊಂದು ಕೆಲಸ ಆಗಬೇಕು. ಕನ್ನಡ ನಾಡಿನ ಸರಕಾರದ ಎಲ್ಲ ಕಚೇರಿಗಳಲ್ಲಿಯೂ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು. ಕನ್ನಡದ ಅಭಿವೃದ್ಧಿ ಪ್ರಾಧಿಕಾರವು ಅನೇಕ ಆದೇಶಗಳನ್ನು ಕಳಿಸಿದ್ದರೂ ಅಧಿಕಾರಿಗಳು ಅದನ್ನು ನಿರ್ಲಕ್ಷಿಸಿದ್ದಾರೆ. ಇದಕ್ಕೆ ಶಿಕ್ಷೆ ಇಲ್ಲದಿದ್ದರೆ ಏನು ಪ್ರಯೋಜನ? ನಮ್ಮ ಸರಕಾರ ಈ ದಿಕ್ಕಿನಲ್ಲಿ ತೀವ್ರ ಎಚ್ಚರಿಕೆಯನ್ನು ವಹಿಸಬೇಕು.

ಕನ್ನಡ ಭಾಷೆಯನ್ನು ವೃದ್ಧಿಪಡಿಸುವ ದಿಕ್ಕಿನಲ್ಲಿ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ ಕನ್ನಡ ಕನ್ನಡ ಏಕಭಾಷಾ ನಿಘಂಟು ಒಂದು ಘನವಾದ ಕಾರ್ಯ. 1944 ರಲ್ಲಿ ಪ್ರಾರಂಭವಾಗಿ 1994 ರ ತನಕ ಆ ಕೆಲಸ ನೆರವೇರಿತು. ಅಂದರೆ ಸುಮಾರು ಐವತ್ತು ವರ್ಷಗಳು ನಿಘಂಟು ಕಚೇರಿಯಲ್ಲಿ ಆದ ಕೆಲಸ ಬಹುವ್ಯಾಪಕವಾದುದು. ಆ ಕಚೇರಿಯಲ್ಲಿ ಅನೇಕ ವಿಷಯ ಸಂಗ್ರಹಗಳಿವೆ. ಅದನ್ನು ಉಪಯೋಗಿಸುವ ಮುಂದಿನ ಕಾರ್ಯವನ್ನು ಮಾಡದೆ ಕಚೇರಿಗೆ ಬೀಗಮುದ್ರೆಯನ್ನು ಹಾಕಿ, ಶಾಶ್ವತವಾಗಿ ನೆರವೇರಬೇಕಾಗಿದ್ದ ಅತ್ಯಗತ್ಯವಾದ ಕಾರ್ಯವನ್ನು ನಿಲ್ಲಿಸಿಬಿಡುವ ಸಾಮರ್ಥ್ಯದ ಕನ್ನಡದ ಭಕ್ತರನ್ನೂ ಪಡೆಯಿತು ನಮ್ಮ ಪರಿಷತ್ತು. ಹಿಂದೆ ಮುದ್ರಣವಾಗಿದ್ದ ನಿಘಂಟು ಸಂಪುಟಗಳು ಮಾರಾಟವಾಗಿ ಕೇಳುವವರಿಗೆ ಅನುಪಲಬ್ಧವಾಗಿತ್ತು. ಈಗಿನ ಅಧ್ಯಕ್ಷರಾದ ಡಾ.ನಲ್ಲೂರು ಪ್ರಸಾದರು ಸರಕಾರದಿಂದ ಅನುದಾನವನ್ನು ಪಡೆದು ಆ ನಿಘಂಟಿನ 10000 ಪುಟಗಳುಳ್ಳ ಎಂಟು ಸಂಪುಟಗಳ 16 ಸಾವಿರ ಪ್ರತಿಗಳನ್ನು ಪುನರ್ಮುದ್ರಣ ಮಾಡಿದ್ದಾರೆ. ಈಗ ಆ ಪ್ರತಿಗಳು ದೊರಕುತ್ತಿವೆ. ಪುನರ್ಮುದ್ರಣವಾಗುವ ವೇಳೆಗೆ ಆಗಲೇಬೇಕಾಗಿದ್ದ ತಿದ್ದುಪಾಟುಗಳನ್ನು ಸೇರಿಸಿದ್ದರೆ ಉತ್ತಮ ಕಾರ್ಯವಾಗುತ್ತಿತ್ತು. ಈಗಲೂ ಈ ಕೆಲಸವನ್ನು ಮಾಡಬೇಕಾದರೆ ಆ ಕಚೇರಿಯನ್ನು ತೆರೆದು ನಿಘಂಟು ಕಾರ್ಯವನ್ನು ಮುಂದುವರಿಸಬೇಕು. ಆ ಕೆಲಸಕ್ಕೆ ಹೊಸ ಯೋಜನೆಯಾಗಬೇಕು, ಸರಕಾರದ ಒಪ್ಪಿಗೆ ಬೇಕು. ಕೆಲಸವನ್ನು ನಿಲ್ಲಿಸುವುದು ಸುಲಭ, ಮಡಕೆಯನ್ನು ಒಡೆದಂತೆ. ಪ್ರಾರಂಭಿಸುವುದು ಕಷ್ಟ. ಕುಂಬಾರನ ಕೆಲಸದಂತೆ. ಆದರೂ ಈ ಕಾರ್ಯವನ್ನು ಮಾಡಲೇಬೇಕಾಗಿದೆ.

ಎಲ್ಲ ಭಾಷೆಗಳಲ್ಲಿಯೂ ಕಾಲಕಳೆದಂತೆ ಹಳೇಯ ಶಬ್ಧಗಳು ಕೆಲವು ಮಾಯವಾಗುತ್ತದೆ.

*(ಪುಟ 14ಕ್ಕೆ)*

# ಶತಪದ

**– ಜೀವಿತದ ಗುಟ್ಟು ಹೇಳಬಲ್ಲಿರಾ?**

ಸಣ್ಣ ವಯಸ್ಸಿನಲ್ಲಿ ಜಿ.ವೆಂಕಟಸುಬ್ಬಯ್ಯ ಕ್ವಶ್ಚನ್ ಪತ್ರಿಕೆ ಕದ್ದರಂತೆ. ಮೇಷ್ಟ್ರಾಗಿದ್ದ ಅವರ ತಂದೆ ಮಗನ ಈ ತಪ್ಪಿಗಾಗಿ ಮೂರು ದಿನ ಉಪವಾಸ ಮಾಡಿದರು. ಅಲ್ಲಿಂದ ಜಿವೆಂ ಪ್ರಾಮಾಣಿಕತೆಯನ್ನೇ ಉಸಿರಾಟ ಮಾಡಿಕೊಂಡರು. ಇಂಡೋರ್ ಗೇಮ್ಸ್‌ನಲ್ಲಿ ಚೆನ್ನೈಗೆ ಚಾಂಪಿಯನ್ನಾಗಿ ಹೋದ ಜಿವೆಂ ಅವರನ್ನು ಎಸ್. ರಾಧಾಕೃಷ್ಣನ್ ಭುಜ ತಟ್ಟಿ ಪ್ರೋತ್ಸಾಹಿಸಿದರು. ಈ ಶತ ವರ್ಷದಲ್ಲಿ ಅವರು ಮಿಸ್ ಮಾಡಿಕೊಂಡಿದ್ದೇನೆಂದರೆ ಮೌಂಟ್ ಅಬು, ಖಜರಾಹೋಗೆ ಹೋಗಬೇಕಿತ್ತು ಎಂಬುದು. ಮೊನ್ನೆ ಚೆಕಪ್ ನಡೆಸಿದ ಡಾಕ್ಟರ್ ಅವರಿಗೆ ಹೇಳಿದ್ದು, 'ನಿಮ್ಮ ಕಿಡ್ನಿ 30 ವರ್ಷದವರಿಗೆ ಇದ್ದ ಹಾಗೆ. ಇದು ಅಪರೂಪ' ಅಂತ. ಕನ್ನಡ ಸಾಹಿತ್ಯ ಲೋಕದ ಈ 'ಮೂರನೇ ಶತಕ'ಕ್ಕೆ ಹೀಗೆ ಹೀಗೊಂದು ಅಭಿನಂದನೆ ಸಲ್ಲಿಸುತ್ತಾ. . . .

ಕೀಲಿ ಕೊಟ್ಟಿಲ್ಲ, ಸೆಲ್ಲೂ ಹಾಕಿಲ್ಲ. ಸೂರ್ಯ ಈ ಮನೆಯಲ್ಲಿ ಅಲಾರ್ಮ್ ಇಟ್ಟಿದ್ದಾನೆ. ಯುಟಿಲಿಟಿ ಬಿಲ್ಡಿಂಗಿನ ಶಿರದ ಎಷ್ಟೋ ಜ್ಯೋತಿರ್ವರ್ಷಗಳಾಚೆ ನಭದ ಹಾಸಿಗೆ ಹಿಡಿದು ಅವ ಬೋರಲು ಬಿದ್ದು ನಿದ್ದೆಗೆ ಹೋಗಿದ್ದಾನೆ. ಮುಂಜಾನೆ 4.30. ಠಕ್ಕನೆ ಸದ್ದಾಗುತ್ತದೆ ಸ್ವಿಚ್ಚು. ಪಕ್ಕನೆ ಹೊತ್ತಿದ ಸಿಎಫ್‌ಎಲ್‌ಬಲ್ಬೂ ಆ ಬೆಳಕಿನೊಡೆಯೇ ರೆಪ್ಪೆ ಬಡಿಯುತ್ತದೆ. ಆದರೂ, ಎದ್ದೇಳದ ಸೂರ್ಯ ಮೈ ಕದಲಿಸಿ ಮಗ್ಗಲು ಹೊರಳಿಸಿದ. ಸರಿಯಾದ ಟೈಮಿಗೆ ಎದ್ದ ಆ ಹಿರಿಯ ಜೀವ ಮಾತ್ರ ಸೂಪರ್ ಆಕ್ಟಿವ್, ಮುಖ ತೊಳೆದು, ಶೇವಿಂಗ್ ಮಾಡಿ ಶುಚಿಯಾದ ಮೇಲೆ ಮುಂದಿನ ನಡಿಗೆ ಅಡುಗೆಮನೆಗೆ. ಕಾಫಿಗಾಗಿ ಗ್ಯಾಸು ಹೊತ್ತಿಸುತ್ತಾರೆ. ಈ ಎರಡನೇ ಸದ್ದಿಗೂ ಆ ಅಗ್ನಿಗೆ ಸ್ಪರ್ಧೆಯೊಡ್ಡಲು ಸೂರ್ಯ ಎದ್ದೇಳುವುದಿಲ್ಲ. ಮನೆಯವರಿಗೆಲ್ಲ ಡಿಕಾಕ್ಷನ್ ರೆಡಿಮಾಡಿ, ತಾವೂ ಅರ್ಧ ಕಪ್ ಹೀರಿ ಅವರು ಬರುವುದು ಓದಿನ ಕೋಣೆಗೆ. ಇವತ್ತಿನ ಕಾರ್ಯಕ್ರಮ ಏನಿದೆ, ನಾಳೆ ಮತ್ತೇನು? ಸಮಯ ಐದು ಮುಕ್ಕಾಲು, ಆರು. ಕಾಲಿಗೆ ಚಪ್ಪಲಿ ತೂರಿಸಿ ಅವರು ಬಾಗಿಲು ತೆರೆಯುತ್ತಾರೆ. 'ಕೀಂಯ್' ಅಂತ ಆ ಮೂರನೇ ಸದ್ದಿಗೆ ಮಾತ್ರ ಸೂರ್ಯ ಕಣ್ಣುಜ್ಜಿದ. ಜಿ.ವಿ.ವಾಕಿಂಗ್‌ಗೆ ಹೊರಟಿದ್ದಾರೆ, ನಾ ಅವರಿಗೆ ದಾರಿ ತೋರಿಸಬೇಕು! ಬೆಂಗಳೂರಿನ ಬಹುಮಹಡಿ ಕಟ್ಟಡಗಳ ನೆತ್ತಿ ಗುದ್ದಿ ಬಂದು, ಅವರೆದುರು ಹಾಜರಾತಿ ಸೂಚಿಸಿ ಅವ ಹೇಳಿದ್ದು ಅದೇ... 'ಬಂದಿದ್ದೀನಿ ಗುರುಗಳೇ'! ಇತ್ತೀಚೆಗೆ ನೋಡಿ. ಅನೇಕ ಪುರೋಹಿತರು 'ದೀರ್ಘಾಯುಷ್ಯಾನ್ ಭವ' ಎಂಬ ಸುಳ್ಳನ್ನು ಹೇಳುತ್ತಿಲ್ಲ! ಹೊಂಡಾ ಬೈಕುಗಳಂತೆ ಮನುಷ್ಯನ ಮೈಲೇಜೂ 60–20 ರ ಅಂದಾಜಾಗಿಬಿಟ್ಟಿದೆ. ನಂತರ ಈ ಕಾಯ ಅದೇ ಹೊಂಡಕ್ಕೇ! ಅಲ್ಲಿಯ ತನಕ ಏನೇನು ಸರ್ಕಸ್ಸುಗಳು? ಜಿಮ್ಮು, ಡಯೆಟ್ಟು, ಚೆಕಪ್ಪು... ಏನೆಲ್ಲ. ಈ ಮಧ್ಯೆ ಯಾವನೋ '100 ವರ್ಷ ಬದುಕೋದು ಹೇಗೆ' ಎಂದು ಬುಕ್ಕು ಬರೆದರೆ ಅದರ ಬೆಲೆ ಸಾವಿರವೇ ಆದರೂ ಬಂದುಬಿದ್ದಿರುತ್ತದೆ ಮನೆಯ ಯಾರ್ಡಿನಲ್ಲಿ. ಮೊದಲೆಲ್ಲ ಕೊಪ್ಲಿಯಷ್ಟು ಸಲೀಸಾಗಿ ಹೊಡೆಯುತ್ತಿದ್ದ ಬದುಕಿನ ಶತಕ, ಈಗ ತೆಂಡೂಲ್ಕರ್‌ನ ತಿಣುಕಾಟದ ರೀತಿ ಆಗಿಬಿಟ್ಟಿದೆ! ಈ ಮಧ್ಯೆಯೂ ಅವರಿದ್ದಾರೆ, ಖುಷಿಪಡೋಣ... ಪ್ರೊ. ಜಿ. ವೆಂಕಟಸುಬ್ಬಯ್ಯ.

'ನಿಘಂಟು ಬ್ರಹ್ಮ'ನಿಗೆ ಈಗ ನೂರು. ನಮ್ಮಂತೆ ಅವರ ಬದುಕಲ್ಲೂ ಗಂಟುಗಳುಂಟು ನೂರೆಂಟು. ಆದರೂ ವಿಶೇಷವಾಗಿ ಬದುಕಿದ್ದಾರೆ ಯಾಕೆಂದರೆ ಅವರ ಸ್ವಚ್ಛ ಸ್ವಭಾವದ ಕಾರಣ. ಇವತ್ತಿಗೂ ಅವರಿಗೆ ಬಿಪಿ, ಶುಗರ್ ಎಂಬುದಿಲ್ಲ. ಒಂದೂ ಮಾತ್ರೆಯನ್ನೂ ಗುಳಕ್ಕನೆ ನುಂಗುವುದಿಲ್ಲ. ದಿನಗಟ್ಟಲೆ ಪುಸ್ತಕ ಓದುವುದಕ್ಕೆ ಕನ್ನಡಕ ಬೇಕಿಲ್ಲ. ಪತ್ರಿಕೆ ಮೇಲೆಕಣ್ಣಾಡಿಸಲಷ್ಟೇ 2.5 ಲೆನ್ಸು ಬಳಸುತ್ತಾರೆ ಬಿಟ್ಟರೆ, ಅವರ ಕಣ್ಣು ಇಂದಿಗೂ ಫಸ್ಟ್‌ಕ್ಲಾಸ್. ಯಾರಿಗೂ ಕಾಡಬಹುದು, ಅವರ ಶತಕದ ಗುಟ್ಟು ಏನಿರಬಹುದು?

**ಈಗ್ಲೂ ಚೆಸ್ ಆಡೋದು!**

ವಿಶ್ವನಾಥನ್ ಆನಂದ್ ಮಟ್ಟಿಗಲ್ಲ, ಕೊನೇಪಕ್ಷ ಕೊನೆರು ಹಂಪಿಯಷ್ಟೂ ಅಲ್ಲ. ತಮ್ಮ ಲೆವೆಲ್ಲಿಗೆ ಜಿವೆಂ ಗ್ರ್ಯಾಂಡ್ ಮಾಸ್ಟರ್. ಇವತ್ತಿನವರೆಗೂ ಅವರ ವಲಯದಲ್ಲಿ ಸಮಾನ ಎದುರಾಳಿ ಸಿಕ್ಕಿಲ್ಲ. ಎದುರುಮನೆಯಲ್ಲಿದ್ದ ಜಗನ್ನಾಥ ಕೆಲವು ಬಾರಿ ಚೆಕ್ ಕೊಟ್ಟು ಇವರನ್ನು ಕಟ್ಟುಹಾಕಿದ್ದಾರಂತೆ. ಈಗ ಆ ಜಗನ್ನಾಥನೂ ಅಲ್ಲಿಲ್ಲ. ಎಂಥ ಸಮಸ್ಯೆಗೂ ಚೆಸ್ ಎನ್ನುವುದು ಕೌನ್ಸೆಲಿಂಗ್. ಈ ಕಾರಣಕ್ಕಾಗಿಯೇ ಅವರು ಹೀರೋ. ವಿದ್ಯಾರ್ಥಿಯಾಗಿದ್ದಾಗ 4 ವರ್ಷ ಮೈಸೂರು ಮಹಾರಾಜ ಕಾಲೇಜಿನ ಚಾಂಪಿಯನ್. ರೆಡ್‌ಪಾನ್‌ಗೆ ಗುರಿಯಿಟ್ಟರು, 'ಡೇಂಜರ್' ವಿಚಾರಗಳನ್ನೆಲ್ಲ ಪೌಚಿಗೆ ತಳ್ಳಿದರು. ಅವರಿಗೆ ಚೆನ್ನಾಗಿ ಗೊತ್ತು, ಲೈಫೊಂದು 'ಗೇಮ್'.

**ಲವ್ವು ಮಾಡ್ದೋರಲ್ಲ**

ಜಿವೆಂ ಅವರ ದೀರ್ಘ ಬದುಕಿನ ಯಶಸ್ಸಲ್ಲಿ ಇದು ಮುಖ್ಯವಾಗಿ ದಾಖಲಾಗುವ ವಿಚಾರ. ಅವರು ಓದಿದ ಮಹಾರಾಜ ಕಾಲೇಜು ಪುರುಷರದ್ದು. ಲವ್ವಿಗೆ ಅವಕಾಶವೆಲ್ಲಿ? ಎಂ.ಎ.ಗೆ ಬಂದಾಗ ಕಮಲಾ ಎಂಬ ಏಕೈಕ ಸುಂದರಿ ಸೇರಿಕೊಂಡಳಂತೆ. ಮಿಕ್ಕ ಐವತ್ತು ಹುಡುಗರೆದುರು ಆಕೆ ನಾಚಿ, ಮುದುಡುತ್ತಿದ್ದುದ್ದನ್ನು ನೋಡಿ ಲವ್ವಿರಲಿ, 'ಅಯ್ಯೋ ಪಾಪ' ಅನ್ನಿಸಿಬಿಡುತ್ತಿತ್ತು ಜಿವೆಂಗೆ. ವೃತ್ತಿ ಜೀವನಕ್ಕೆ ಅಡಿಯಿಟ್ಟ ಮೇಲೆ ಲವ್ವು ಮುಖ್ಯ ಅಂತ ಅನ್ನಿಸಲೇ ಇಲ್ಲ. ಯಾವ ಹುಡುಗಿಯ ಬೆನ್ನು ಹತ್ತಿ ಹೋದ ನಿದರ್ಶನವೂ ಅವರ ಡೈರಿಯಲ್ಲಿ ಸೇರಿಕೊಂಡಿಲ್ಲ.



ಹೆಂಡ್ತಿ ಹತ್ರ ಬೈಸಿಕೊಂಡ್ರು!

ಅರ್ಧಾಂಗಿ ಹತ್ತಿರ ಮತ್ತೆ ಮತ್ತೆ ಬೈಸಿಕೊಂಡರೂ, ನಿಮ್ಮ ಆಯುಸ್ಸು ಗಟ್ಟಿಯಾಗುತ್ತೆ. ಆಗಿಂದಾಗ್ಗೆ ಜಿವೆಂ, ಹೆಂಡ್ತಿ ಹತ್ತಿರ ಲೈಟಾಗಿ ಬೈಸಿಕೊಳ್ತಿದ್ರು. 'ಮನೆಯೊಳಗೆ ನೀನೇ ರಾಣಿ' ಎಂಬ ಫ್ರೀಡಂ ಕೊಟ್ಟು, ಹೊರಗಿನ ಕೆಲಸಗಳಲ್ಲಿ ಇವರು ತಲ್ಲೀನರಾಗಿರುತ್ತಿದ್ದರು. ಗ್ಯಾಸ್ ಖರ್ಚಾದಾಗ, ಲೈಟು ಬಿಲ್ಲು ಕಟ್ಟದೇ ಇದ್ದಾಗಲೂ ಇವರದ್ದು ಸಾಹಿತ್ಯದ ಜಪ. ಯಾರ ಹೆಂಡ್ತಿಗೆ ತಾನೆ ಸಿಟ್ಟು ನೆತ್ತಿಗೇರಲ್ಲ? ಎಷ್ಟೋ ಬಾರಿ ಪತ್ನಿ ಸರಸ್ವತಿಯವರೇ ಜಿವೆಂರ ಅಳತೆ ತೆಗೆದ್ಕೊಂಡು, ಟೈಲರ್‌ಗೆ ಬಟ್ಟೆ ಕೊಟ್ಟುಬಂದಿದ್ದೆ. ದುಡಿಮೆಯ ಹಣ ಸಾಲದೇ ಇದ್ದಾಗ ಜಿ.ವೆಂ, ಸತತ ಹತ್ತು

✍ ಕೀರ್ತಿ ಕೋಲಾರ

ವರ್ಷ ಬೆಳಗ್ಗೆ – ರಾತ್ರಿ ಟ್ಯೂಶನ್ ಹೇಳಬೇಕಾಯಿತು. ಕಷ್ಟ –ಸುಖದಲ್ಲಿ ಭಾಗಿಯಾಗಿ, ಸಂಸಾರದ ತೇರೆಳೆದ ಪತ್ನಿ ಈಗಿರುವುದು ಹಾಸಿಗೆ ಮೇಲೆ. ಜಿವೆಂಗೆ ಅದೆಲ್ಲ ಈಗ ಕಣ್ಣೀರ ನೆನಪು.

**ಸಿನಿಮಾ ನೋಡೋರಲ್ಲ**

ರಾಜ್‌ಕುಮಾರ್ ಗೊತ್ತು, ರಜನೀಕಾಂತನ ಹೆಸರೂ ಕೇಳಿದ್ದಾರೆ. ಆದರೆ, ಸಿನಿಮಾ ಅವರಿಗೆ ಗೊತ್ತಿಲ್ಲ! ವಿದ್ಯಾರ್ಥಿಯಾಗಿದ್ದಾಗ ಮೈಸೂರಿನ ಅಪೇರಾ ಟಾಕೀಸಿನಲ್ಲಿ ಜರಾಸಂಧನ ಬಗ್ಗೆಯ ಚಿತ್ರ ನೋಡಿದ ನೆನಪುಂಟು ಅಂತಾರೆ. ಯಾರಾದರೂ ನೋಡಿ ಬಂದರೆ,ಅದರ ಸ್ಟೋರಿ ಕೇಳಿ ಸಿನಿಮಾ ನೋಡಿದ ಖುಷಿ ತಂದುಕೊಳ್ಳುತ್ತಾರೆ. ಇವತ್ತಿನ ಪುನೀತು, ಸುದೀಪು, ರಣಬೀರರನ್ನು ಪೇಪರ್‌ನ ಫೋಟೋಗಳಲ್ಲಿ ನೋಡುತ್ತಾರಷ್ಟೇ. ಈಗಿನ ಯಾವ ಸೀರಿಯಲ್ಲುಗಳ ಹೆಸರೂ ಅವರಿಗೆ ಗೊತ್ತಿಲ್ಲ.

ಸಿನಿಮಾ, ಸೀರಿಯಲ್ಲು ವೀಕ್ಷಣೆಯೂ ನಮ್ಮ ವಯಸ್ಸನ್ನು ನಿರ್ಧರಿಸಬಹುದು.

**ಕೋಪ ಬರೋದೇ ಇಲ್ಲ**

ಕೋಪ ಮಾಡಿಕೊಳ್ಳಬೇಕಾದ ಸನ್ನಿವೇಶಗಳು ಹಲವು ಎದುರಾಗಿವೆ. ಒಮ್ಮೆ ಉಸಿರನ್ನು ಬಿಗಿಹಿಡಿದು, ಆ ಕೋಪವನ್ನು ಒಳಗೇ ಮುಳುಗಿಸಿ ಬಿಟ್ಟು ತಣ್ಣಗಾಗುತ್ತಾರೆ. ಜಿವೆಂ. 'ಕೋಪವೆಂಬುದು ಅನರ್ಥ ಸಾಧನ' ಅಂತ ಈಗಲೂ ಅವರ ನಾಲಗೆ ನುಡಿಯುತ್ತದೆ. ಕೋಪ ನೆಮ್ಮದಿಗೆ 'ಯಮ'. ನೆಮ್ಮದಿಯಿದ್ದರಷ್ಟೇ ಆತ ಮನುಷ್ಯ.

**ಭಾವುಕ 'ಜೀವಿ'**

ಕಣ್ಣೀರು ನಮಗೆಲ್ಲ ಅಳುವುದಕ್ಕೆ, ಜಿವೆಂಗದು ಭಾವುಕರಾಗ್ವುವುದಕ್ಕೆ! ಕ್ಲಾಸಿನಲ್ಲಿ 'ಕುಮಾರವ್ಯಾಸ ಭಾರತ' ಬೋಧಿಸುವಾಗ, ಇನ್ನವುದೋ ಕಾವ್ಯ ವಾಚಿಸುವಾಗ ಭಾವುಕರಾಗುತ್ತಿದ್ದರು. ಹಾಗೆಯೇ ಖುಷಿ ಸಂದರ್ಭದಲ್ಲಿ ಅವರ ಮೊಗದಲ್ಲಿ ತೇಲುವ ಉಲ್ಲಾಸ ಇಪ್ಪತ್ತರ ಯುವಕನಿಗೆ ನಟಿಸಿ ತೋರಿಸಲೂ ಸಾಧ್ಯವಾಗುವುದಿಲ್ಲ. ನವರಸಗಳನ್ನು ಆ ಧಾಟಿಯಲ್ಲಿ ನಿರೂಪಿಸುವ ಮೇಷ್ಟ್ರುಗಳು ಈಗೆಲ್ಲಿ? ಎಷ್ಟೋ ಸಲ ಕಾವ್ಯದ ಸ್ವಾರಸ್ಯ ತಲುಪಿದ ವಿದ್ಯಾರ್ಥಿಗಳೇ ಕಣ್ಣೀರಾಗುತ್ತಿದ್ದರು.

**ಮೊಬೈಲು ಬಳಸಲ್ಲ**

'ಸಮಯಹರಣಕ್ಕಾಗಿ ಕಂಡುಹಿಡಿದ ಸಾಧನ ಮೊಬೈಲು' ಎಂಬುದು ಅವರ ನೇರಕಿಡಿ. ಮನೆಯಲ್ಲೊಂದು ಲ್ಯಾಂಡ್‌ಲೈನ್ ಇದೆ. ಹಗಲು ವೇಳೆ ನೀವೆಷ್ಟೇ ಫೋನು ಮಾಡಿದರೂ, 'ವೆಂಕಟಸುಬ್ಬಯ್ಯನವರು ಆಚೆ ಹೋಗಿದ್ದಾರೆ' ಎಂಬ ಮಗ ಜಿ.ವಿ.ಅರುಣ್ ರ ಸ್ವರ ಅತ್ತೆಡೆಯಿಂದ ಬಂದರೆ ಅದು ನಿರೀಕ್ಷಿತ. ಮೊಬೈಲಿನ ಎದೆಯನ್ನು ಸ್ವೈಪ್ ಮಾಡುವ ಹುಚ್ಚಿಗೆ ಬೀಳದೆ, ಪುಸ್ತಕದ ಅಕ್ಷರಗಳನ್ನು ಮುದ್ದಾಡಿ ಅವುಗಳಲ್ಲಿ ಮುಳುಗೇಳುತ್ತಾರವರು. ನೀವು ದೀರ್ಘಾಯುಸ್ಸು ಕನಸಿನಲ್ಲಿ ಮೊಬೈಲ್ ಬ್ಯಾನ್ ಅನ್ನೂ ಸೇರಿಬಿಡಿ!

**ರಾಜಕಾರಣ ಮಾತಾಡಲ್ಲ!**

ರಾಜಕೀಯವೂ ನಮ್ಮ ಬದುಕನ್ನು ಮೊಟಕುಗೊಳಿಸುವಂಥದ್ದು. ಆ ಹಗರಣ, ಆ ಮಾತಿನೆರಚಾಟಗಳ ಬಗ್ಗೆ ತಲೆ ಕೆಡಿಸಿಕೊಳ್ಳದಿರುವುದೇ ಲೇಸು. ಜಿವೆಂ ರಾಜಕಾರಣದ ಬಗ್ಗೆ ಏನನ್ನೂ ಮಾತನಾಡುವುದಿಲ್ಲ. ಮಾತನಾಡಿದರೆ ಅದು ಬೇರೆ ಸ್ವರೂಪ ಪಡೆದುಕೊಳ್ಳುತ್ತದೆ ಎನ್ನುವುದು ಬೇರೆ ಪ್ರಶ್ನೆ. ಕಾರ್ಯಕ್ರಮಗಳಲ್ಲಿ ರಾಜಕಾರಣಿಗಳು ಸಿಕ್ಕರೆ ಪ್ರೀತಿಯಿಂದ ಮಾತನಾಡಿಸುತ್ತಾರೆ ಬಿಟ್ಟರೆ, ರಾಜಕೀಯದ ಬಗ್ಗೆ ಮಾತನಾಡರು.

**ಯಾವುದೇ ಚಟವಿಲ್ಲ**

ಚಟವಿಲ್ಲದವ ಸಾಹಿತಿಯಲ್ಲ ಎಂಬ ಸ್ಲೋಗನ್ ಇದೆ. ಜಿವೆಂ ಅದನ್ನು ಸುಳ್ಳಾಗಿಸಿದ್ದಾರೆ. ಅವರ ಹಲ್ಲುಗಳು ಈಗಲೂ ಚಕ್ಕುಲಿ ಕಡಿಯುತ್ತವೆ, ಕೋಡುಬಳೆಯನ್ನು ಮೆಲ್ಲಗೆ ಕರಗಿಸಿಕೊಳ್ಳುತ್ತಾರೆ. ಆದರೆ, ಎಲೆ ಅಡಿಕೆ ಎಂದೂ ಹಾಕಿಲ್ಲ. ಸಿಗರೇಟು, ಮದ್ಯ . . . . ಅವೆಲ್ಲ ಜಿವೆಂಗೆ 'ಹಾಗೆಂದರೇನು?' ಇಂದಿಗೂ ಹತ್ತಾರು ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾ, ಉಪನ್ಯಾಸ ನೀಡುತ್ತಾ, ಪುಸ್ತಕ ಓದುತ್ತಾ – ಬರೆಯುತ್ತಾ ಜ್ಞಾನತುಂಗೆಯಂತೆ ನಿಟ್ಟೂರು ಶ್ರೀನಿವಾಸರಾವ್ (101) ನಂತರ ಕನ್ನಡ ಸಾರಸ್ವತ ಬಾರಿಸುತ್ತಿರುವ ಮೂರನೇ ಶತಕವಿದು. ಜಿವೆಂರ 'ಅಜೇಯ' ಗಾಥೆ ಹೀಗೆ ಸಾಗಲಿ ಎಂದು ಆಶಿಸುವ . . .


**ಬೈಕು ಓಡಿಸ್ಥೋರಲ್ಲ!**

ಬೈಕ್ ಇರಲಿ, ಬಜಾಜ್ ಸ್ಕೂಟರ್ ಅನ್ನೂ ಏರಿದವರಲ್ಲ ಜಿವೆಂ. ಕೆಲಸ ಸಿಕ್ಕಾಗ, 1945ರಲ್ಲಿ ಟೌನ್ ಹಾಲ್ ಎದುರುಗಡೆಯಿದ್ದ ರಾಜಾ ಸೈಕಲ್ ಶಾಪ್‌ನಲ್ಲಿ ಒಂದು ಬೈಸಿಕಲ್ ಕೊಂಡಿದ್ದರು. ಮನೆಯ ಬಳಿ ಹೀಗೆಯೇ ಹೋಗುತ್ತಿದ್ದಾಗ ಅವರದ್ದೇ ಶಿಷ್ಯನೊಬ್ಬ ಕಾರಿನಲ್ಲಿ ಬಂದು ಆಕಸ್ಮಿಕವಾಗಿ ಡಿಕ್ಕಿ ಹೊಡೆದ. ಬಿದ್ದ ಪೆಟ್ಟಿಗೆ ಜಿವೆಂರ ಬೆನ್ನಿನ ಮೂರು ಮೂಳೆಯಲ್ಲಿ ಬಿರುಕು ಕಾಣಿಸಿತು. ಆತನೇ ಇವರನ್ನು ಆಸ್ಪತ್ರೆಗೆ ಸೇರಿಸಿದ. ಮೂರು ತಿಂಗಳು ಬೆಡ್‌ರೆಸ್ಟ್. ಈಗ ಆ ನೋವಿಲ್ಲ. ಬೈಕು ಓಡಿಸಿ ಮನಸ್ಸನ್ನು ಆತಂಕದಲ್ಲಿ ಸವಾರಿ ಮಾಡಿಸಲು ಜಿವೆಂ ಹೋಗಲೇ ಇಲ್ಲ. ಹೀಗಾಗಿ ಬೈಕನ್ನೂ ನೀವು ದೂರವಿಡಬಹುದು.


ಕೃಪೆ: ಸಾಪ್ತಾಹಿಕ ಪ್ರಭ

## ಮುಂಬಯಿ ಕನ್ನಡ ಸಂಘದ ಅಧ್ಯಕ್ಷರಾಗಿ ಗುರುರಾಜ ಎಸ್ ನಾಯಕ್ ಪುನರಾಯ್ಕೆ

ಮುಂಬಯಿ ಕನ್ನಡ ಸಂಘ ವಾರ್ಷಿಕ ಮಹಾಸಭೆಯು ಇತ್ತೀಚೆಗೆ ಜರಗಿತು. ಅಂದು 2012-2014 ಸಾಲಿನ ನೂತನ ಕಾರ್ಯಕಾರಿ ಸಮಿತಿ ರಚಿಸಲಾಯಿತು. ಕಳೆದ ಹಲವಾರು ವರ್ಷಗಳಿಂದ ವಿವಿಧ ಪದಾಧಿಕಾರಿಯಾಗಿ ದುಡಿದಿರುವ ಗುರುರಾಜ ಎಸ್. ನಾಯಕ್ ಅವರು ಅಧ್ಯಕ್ಷರಾಗಿ ಪುನರಾಯ್ಕೆಯಾಗಿದ್ದಾರೆ. ಗೌ. ಪ್ರ. ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ ಬಿ. ನಾಗಭೂಷಣ ಪುನಃ ಅದೇ ಪದವಿಗೆ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಎನ್. ಆರ್. ರಾವ್, ಗೌ. ಜೊತೆ ಕಾರ್ಯದರ್ಶಿಯಾಗಿ ಎಸ್. ಕೆ. ಪದ್ಮನಾಭ, ಗೌ. ಕೋಶಾಧಿಕಾರಿಯಾಗಿ ರಾಜೇಂದ್ರ ಆರ್. ಗಡಿಯಾರ್, ಪುಸ್ತಕ ಭಂಡಾರದ ಅಧಿಕಾರಿಯಾಗಿ ಸಂಧ್ಯಾ ಎ. ಪ್ರಭು ಹಾಗೂ ಸಮಿತಿಯ ಸದಸ್ಯರಾಗಿ ಕಮಲಾಕ್ಷ ಜಿ. ಸರಾಫ್, ಎನ್. ಸತೀಶ್ ನಾಯಕ್, ಲಯನ್ ಶಂಕರ್ ಕೆ.ಟಿ., ಬಿ.ಎಸ್. ಕುರ್ಕಾಲ್, ಪಿ. ಸುಬ್ರಾಯ ಶ್ಯಾನ್‌ಭಾಗ್, ಡಾ. ಸುನೀತಾ ಎಂ. ಶೆಟ್ಟಿ, ಸುಗುಣ ವಿ. ಶೆಟ್ಟಿ, ಲಕ್ಷ್ಮೀ ಸುಧೀಂದ್ರ ಇವರುಗಳು ಆಯ್ಕೆಯಾಗಿದ್ದಾರೆ.



## ...ಸಮ್ಮೇಳನಾಧ್ಯಕ್ಷ ಭಾಷಣ



ಹೊಸ ಶಬ್ದಗಳು ಸೇರಿಬಿಡುತ್ತವೆ. ಶಬ್ದಗಳ ಅರ್ಥವೂ ಬೇರೆಯಾಗಿಬಿಡುತ್ತವೆ. ಕೆಲವು ಅರ್ಥ ವಿಸ್ತಾರವನ್ನು ಪಡೆಯುತ್ತವೆ. ಕೆಲವಕ್ಕೆ ಅರ್ಥ ಸಂಕುಚಿತವಾಗುತ್ತವೆ. ಇದನ್ನು ನಿಘಂಟುಕಾರ ಕನ್ನಿನಲ್ಲಿ ಕಣ್ಣಿಟ್ಟು ದಾಖಲಿಸುತ್ತ ಹೋಗಬೇಕು. ಅಲ್ಲದೆ ಕನ್ನಡದಲ್ಲಿಯೂ ಭಾರತದ ಇತರ ಭಾಷೆಗಳಲ್ಲಿಯೂ ಆದಾನ ಪ್ರಧಾನಕಾರ್ಯಗಳು ಈಗ ನೆರವೇರುತ್ತಿವೆ. ಈ ಕೆಲಸ ಮುಂದುವರಿಯಬೇಕಾದರೆ ದ್ವಿಭಾಷಾ ನಿಘಂಟುಗಳು, ತ್ರಿಭಾಷಾ ನಿಘಂಟುಗಳು ನಿರ್ಮಾಣವಾಗಬೇಕು. ಇದಕ್ಕೆ ಇತರ ಭಾಷಾ ಸಾಹಿತ್ಯ ಸಂಸ್ಥೆಗಳೊಡನೆ ಸಂಬಂಧವನ್ನು ಬೆಳೆಸಬೇಕು. ಇದು ಕನ್ನಡ ನಿಘಂಟು ಕಚೇರಿಗೆ ಸುಲಭವಾದ ಕಾರ್ಯ. ಇತರ ಭಾಷೆಗಳಲ್ಲಿ ಇಂಥ ಸೌಲಭ್ಯವಿಲ್ಲ. ನಮ್ಮ ಕಚೇರಿಯಲ್ಲಿ ಸಮರ್ಥರಾದ ಕೆಲವರು ಉಪಸಂಪಾದಕರಿದ್ದರು. ಈಗ ಅವರನ್ನೆಲ್ಲ ನಿವೃತ್ತರನ್ನಾಗಿಸಲಾಗಿದೆ. ಮತ್ತೆ ಹೊಸ ಕಾರ್ಯಕರ್ತರ ಪಡೆಯನ್ನು ತಯಾರು ಮಾಡಬೇಕು. ಏನೇ ಆದರೂ ನಿಘಂಟು ಕಚೇರಿಯನ್ನು ಮತ್ತೆ ಪ್ರಾರಂಭಿಸಬೇಕು. ಈ ಕೆಲಸವನ್ನು ಸಾಹಿತ್ಯ ಪರಿಷತ್ತು ಕೂಡಲೇ ಮಾಡಬೇಕು ಎಂದು ಈ ಕಚೇರಿಯನ್ನು ಮುಚ್ಚಬಾರದು.

ಭಾರತದ ಇತರ ಸಾಹಿತ್ಯಗಳಲ್ಲಿರುವ ಮಹಾಕೃತಿಗಳನ್ನು ಕನ್ನಡಕ್ಕೆ ತರುವ ಮತ್ತು ಕನ್ನಡದ ಮಹಾಕೃತಿಗಳನ್ನು ಇತರೆ ಭಾಷೆಗೆ ಪ್ರಧಾನ ಮಡುವ ಕಾರ್ಯವು ಮುಂದುವರಿಯಬೇಕಾದರೆ ಎಲ್ಲ ಭಾಷಾ ಪ್ರದೇಶಗಳಲ್ಲಿಯೂ ಕೊನೆಯ ಪಕ್ಷ ಎರಡು ಭಾಷೆಗಳಲ್ಲಾದರೂ ನಿಷ್ಣಾತರಾದ ವಿದ್ವಾಂಸರು ಇರಬೇಕು. ಅವರು ಅನುವಾದ ಚತುರರಾಗಿರಬೇಕು. ಈ ದೃಷ್ಟಿಯಿಂದ ಹಿಂದೆ ಕನ್ನಡದ ಸಾಹಿತ್ಯ ಅಕಾಡೆಮಿಯು ಇಬ್ಬರು ಯುವ ವಿದ್ವಾಂಸರನ್ನು ಆಯ್ಕೆ ಮಾಡಿ ಬೇರೆ ಭಾಷೆಯ ವಿಶ್ವವಿದ್ಯಾನಿಲಯಗಳಿಗೆ ಕಳಿಸಿ ಅಲ್ಲಿಯ ಭಾಷೆಯನ್ನು ಕಲಿತು ಅದರಲ್ಲಿ ಪ್ರವೀಣರಾಗಿ ಹಿಂದಕ್ಕೆ ಕರೆತರುವ ಒಂದು ಏರ್ಪಾಟನ್ನು ಮಾಡಿತ್ತು. ಒಬ್ಬರನ್ನು ಪಶ್ಚಿಮ ಬಂಗಾಳಕ್ಕೂ ಮತ್ತೊಬ್ಬರನ್ನು ಇನ್ನೊಂದೆಡೆಗೂ ಕಳಿಸಿದ್ದ ನೆನಪು. ಅವರಲ್ಲೊಬ್ಬರು ಹಿಂದಿರುಗಿ ಒಳ್ಳೆಯ ಗ್ರಂಥವನ್ನು ಬರೆದುಕೊಟ್ಟರು. ಈಗಲೂ ಪರಿಷತ್ತು ಇಂಥ ಕಾರ್ಯವನ್ನು ಪ್ರತಿವರ್ಷವೂ ಮಾಡಿದರೆ ಒಂದು ದಶಕದಲ್ಲಿ ನಮ್ಮಲ್ಲಿಯೇ ಹತ್ತು ಭಾಷೆಗಳ ಪ್ರವೀಣರು ತಯಾರಾಗುತ್ತಾರೆ. ಈಗ ಪರಿಷತ್ತು ಸರಕಾರದ ಸಹಾಯದ ದೆಸೆಯಿಂದ ಆರ್ಥಿಕವಾಗಿ ಗಟ್ಟಿಯಾಗಿ ಬೆಳೆದಿದೆ. ಆದ್ದರಿಂದ ಗಟ್ಟಿಯಾದ ಕಾರ್ಯವನ್ನು ಮಾಡಬೇಕು.

ಕೃಪೆ : ಅಂತರ್ಜಾಲ


## ನಡೆದಾಡುವ ನಿಘಂಟು ಶಬ್ದರ್ಷಿ

# ಪ್ರೊ. ಜಿ. ವೆಂಕಟಸುಬ್ಬಯ್ಯ



ಸಾವಿರದ ಒಂಬೈನೂರ ಅರವತ್ತರ ದಶಕದ ಸಮಯ. ಸಾಹಿತಿಗಳ ಮಾತೃಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ ಬಹಳ ಕಷ್ಟದ ಪರಿಸ್ಥಿತಿಯಲ್ಲಿದ್ದ ಕಾಲವದು. ಪರಿಷತ್‌ನ ಆರ್ಥಿಕ ಪರಿಸ್ಥಿತಿ ಬಹಳ ಹೀನಾಯ ಸ್ಥಿತಿಯಲ್ಲಿತ್ತು. ಪರಿಷತ್‌ನಲ್ಲಿದ್ದ ನೌಕರರಿಗೆ ಕನಿಷ್ಟ ಸಂಬಳ ನೀಡುವುದಕ್ಕೂ ಆಗದಂತಹ ದುರ್ಗತಿ. ಆಗ ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಪೀಠದಲ್ಲಿ ಕುಳಿತು ಅದರ ಚುಕ್ಕಾಣಿ ಹಿಡಿದಿದ್ದ ವ್ಯಕ್ತಿಗೆ ಪರಿಷತ್‌ನ ಇಂತಹ ಪರಿಸ್ಥಿತಿ ಕಂಡು ಸಹಿಸಲಾಗಲಿಲ್ಲ. ಆಳುವ ಸರ್ಕಾರದತ್ತ ಇವರ ಕೋಪ ಬಿಡುಬೀಸಾಗಿ ನುಗ್ಗಿತು. ಅದೊಂದು ರೀತಿ ಸಾತ್ವಿಕಸಿಟ್ಟು ಆ ಕ್ಷಣವೇ ಮನವಿಯೊಂದನ್ನು ಗೀಚಿ ಕೈಲಿಡಿದುಕೊಂಡು ವಿಧಾನಸೌಧದತ್ತ ದಾಪುಗಾಲಿಟ್ಟು ನಡೆದೇ ಬಿಟ್ಟರು. ಹೀಗೆ ಹೋದವರು ಬರಿಗೈಲಿ ಬರಲಿಲ್ಲ. ಆಗಿನ ಅರ್ಥ ಸಚಿವರ ಮುಂದೆ ಆರ್ಭಟಿಸಿ ಯಾರ ಸ್ವಂತಕ್ಕೂ ನಾವು ಸರ್ಕಾರದಿಂದ ಹಣ ಕೇಳುತ್ತಿಲ್ಲ, ಕನ್ನಡದ ಕೆಲಸಕ್ಕೆ ಸರಸ್ವತಿ ಸೇವೆಗೆ ಹಣ ಕೇಳುತ್ತಿದ್ದೇವೆ ಎಂದು ಪಟ್ಟುಹಿಡಿದು ಆ ಗಳಿಗೆಯಲ್ಲೇ ಸಾಹಿತ್ಯಪರಿಷತ್‌ಗೆ ಬೇಕಿದ್ದ ಹಣವನ್ನು ಮಂಜೂರು ಮಾಡಿಸಿಕೊಂಡು ಬಂದಿದ್ದರು. ಆಗ ಇಡೀ ಕನ್ನಡ ಸಾರಸ್ವತ ಲೋಕವೇ ಸಾಹಿತ್ಯಪರಿಷತ್‌ನ ಅಧ್ಯಕ್ಷರ ಕಾರ್ಯ ವೈಖರಿಗೆ ಶಹಭಾಶ್ ಎಂದಿತ್ತು.

ಅಂದು ಸಾಹಿತ್ಯ ಪರಿಷತ್‌ನ ಅಧ್ಯಕ್ಷ ಸ್ಥಾನದಲ್ಲಿದ್ದುಕೊಂಡು ಇಂಥ ಶಹಭಾಶ್‌ಗಿರಿ ಪಡೆದಿದ್ದವರು ಬೇರಾರೂ ಅಲ್ಲ. ಇಂದಿಗೂ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮ ಪ್ರಕಾಂಡ ಪಾಂಡಿತ್ಯದಿಂದ ಮಿರಮಿರನೆ ಮಿಂಚುತ್ತಿರುವ ವಿದ್ವತ್ತಿನ ಗುಪ್ತನಿಧಿ, ಶಬ್ದಗಾರುಡಿಗ ಪ್ರೊ॥ ಜಿ. ವೆಂಕಟಸುಬ್ಬಯ್ಯ. ಕನ್ನಡಕ್ಕಾಗಿ ಮೊದಲಿನಿಂದಲೂ ಮುನ್ನುಗ್ಗುವ ಜಾಯಮಾನ ಇವರದು. ನೋಡಲಿಕ್ಕೆ ಇವರು ಟಿ.ಪಿ.ಕೈಲಾಸಂ, ಗೋಪಾಲಕೃಷ್ಣ ಅಡಿಗ, ಎಲ್.ಎಸ್.ಶೇಷಗಿರಿರಾಯರಂತೆ ಅಷ್ಟೇನೂ ಎತ್ತರವಿಲ್ಲದ ಕುಳ್ಳನೆಯ ವ್ಯಕ್ತಿಯಾದರೂ ಸಹ ಸಾಧನೆಯಲ್ಲಿ ವಾಮನನನ್ನೂ ಮೀರಿಸಿದ ಎತ್ತರ, ಸಾಹಿತ್ಯದಲ್ಲಿ ತ್ರಿವಿಕ್ರಮ ಸಾಹಸಿ.




ಚಿಕ್ಕದಾಗಿ ಜಿ.ವಿ. ಎಂದೇ ಆಪ್ತರಾಗಿರುವ ಇವರು ಶಿಕ್ಷಣ, ಸಂಶೋಧನೆ, ಅನುವಾದ, ವಿಮರ್ಶೆಯ ವಿಷಯಗಳಲ್ಲಿ ಅದ್ಭುತ ಸಾಧನೆ ಮಾಡಿದ್ದರೂ ಸಹ, ನಿಘಂಟು ನಿರ್ಮಾಣದಲ್ಲಿ ಇವರ ಸಾಧನೆಯೊಂದು ಹಿಮಾಲಯವೇ ಸರಿ. ಅಷ್ಟರಮಟ್ಟಿಗೆ ಇವರು ನಿಘಂಟಿನ ದೊಡ್ಡಗಂಟನ್ನೇ ಕನ್ನಡಕ್ಕೆ ನೀಡಿ ಕನ್ನಡದ ಸಿರಿವಂತಿಕೆಯನ್ನು ಹೆಚ್ಚಿಸಿದ್ದಾರೆ. ಇವರ ಇಂಗ್ಲೀಷ್–ಕನ್ನಡ ನಿಘಂಟು ಮತ್ತು ಕನ್ನಡ–ಕನ್ನಡ ಕ್ಲಿಷ್ಟ ಪದಕೋಶ ಇವೆರಡೂ ಅಮೂಲ್ಯ ಗ್ರಂಥಗಳಾಗಿದ್ದು ಇವನ್ನು ದೂರದ ಅಮೇರಿಕದಲ್ಲಿರುವ ಬೆಂಗಳೂರಿನ ಕೆ.ಟಿ.ಚಂದ್ರಶೇಖರ್ ಅವರ ಪುತ್ರ ಶೇಷಾದ್ರಿ ವಾಸು ಅವರ ಬರಹ ಅಂತರ್ಜಾಲದಲ್ಲಿ ಸೇರಿಸಲಾಗಿದ್ದು ಬರಹ ತಂತ್ರಾಂಶದಲ್ಲಿ ಭಾರತೀಯ ಭಾಷೆಗಳಲ್ಲೆಲ್ಲಾ ಇದರ ಪ್ರಯೋಜನವನ್ನು ಪಡೆಯಬಹುದಾಗಿದೆ. ಜೊತೆಗೆ ಕಣ್ಣು ಕಾಣದ ಅಂಧರಿಗೆ ಅನುಕೂಲವಾಗಲೆಂದು ಬ್ರೈಲ್ ಲಿಪಿಯನ್ನೂ ಕೂಡ ಈ ಬರೆಹ ತಂತ್ರಾಂಶದಲ್ಲಿ ಸೇರಿಸಿರುವುದರಿಂದ ಲಕ್ಷಾಂತರ ಮಂದಿಗೆ ಇದರ ಉಪಯೋಗವಾಗುತ್ತಿದೆ. ಇಂಗ್ಲೀಷ್–ಕನ್ನಡ ನಿಘಂಟು ಹಾಗೂ ಕನ್ನಡ–ಕನ್ನಡ ಕ್ಲಿಷ್ಟಪದಕೋಶ ಇವೆರಡು ಗ್ರಂಥಗಳೇ ಸಾಕು ವೆಂಕಟಸುಬ್ಬಯ್ಯನವರ ಅಕ್ಷರ ಪಾಂಡಿತ್ಯವನ್ನು ಜಗತ್ತಿಗೆ ಸಾರಲು.

ಕನ್ನಡ ಭಾಷೆಯನ್ನೇ ಬದುಕಾಗಿಸಿಕೊಂಡು, ಕನ್ನಡ ಪದಗಳನ್ನೇ ಉಸಿರಾಗಿಸಿಕೊಂಡು ಕನ್ನಡ ಕಟ್ಟುವ ಕೈಂಕರ್ಯದಲ್ಲಿ ಅಕ್ಷರಶಃ ಪದಕಲ್ಪವೃಕ್ಷವೇ ಆಗಿರುವ ಇಂಥ ಅಕ್ಷರಬ್ರಹ್ಮ ಜಿ.ವೆಂಕಟಸುಬ್ಬಯ್ಯ ಅವರನ್ನು ನಾಡಿಗೆ ನೀಡಿದ್ದು ಪು.ತಿ.ನ, ಕೆ.ಎಸ್.ನ, ಬಿಎಂಶ್ರೀ, ಎಂ.ಆರ್‌ಶ್ರೀ, ತ್ರಿವೇಣಿ, ವಾಣಿ, ಎ.

✍ ಬನ್ನೂರು ಕೆ. ರಾಜು

ಎನ್. ಮೂರ್ತಿರಾಯರು, ಎಚ್. ಎಲ್. ನಾಗೇಗೌಡರಂಥ ಸಾಹಿತ್ಯದಿಗ್ಗಜರು ಜನ್ಮವೆತ್ತಿದ ಮಂಡ್ಯದ ಮಣ್ಣೆಂಬುದೇ ಒಂದು ವಿಶೇಷ. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಗಂಜಾಂ ಗ್ರಾಮ ಇವರ ಮೂಲ ಸ್ಥಳ. ಕನ್ನಡ ಮತ್ತು ಸಂಸ್ಕೃತ ಪಂಡಿತರಾದ ಶಿಕ್ಷಕ ಗಂಜಾಂ ತಿಮ್ಮಣ್ಣಯ್ಯ ಇವರ ತಂದೆ. ತಾಯಿ ಸುಬ್ಬಮ್ಮ ಈ ದಂಪತಿಗಳ ಜೇಷ್ಠಪುತ್ರರಾಗಿ ಇವರು ಸಾವಿರದ ಒಂಬೈನೂರ ಹದಿಮೂರರ ಅಗಸ್ಟ್ ಇಪ್ಪತ್ಮೂರರಂದು ತಾಯಿಯ ಊರಾದ ಇದೇ ಮಂಡ್ಯ ಜಿಲ್ಲೆಯ ಕೃಷ್ಣರಾಜಪೇಟೆ ತಾಲ್ಲೂಕಿನ ಕೈಗೋನಹಳ್ಳಿಯಲ್ಲಿ ಜನಿಸಿದರು. ಆರು ಮಂದಿ ಸಹೋದರರು, ಓರ್ವ ಸಹೋದರಿ ಇವರ ಒಡಹುಟ್ಟಿದವರು. ಅರಮನೆಯ ವಿದ್ವಾಂಸರೂ ಆಗಿದ್ದ ಇವರ ತಂದೆ ಗಂಜಾಂ ತಿಮ್ಮಣ್ಣಯ್ಯ ಆ ಕಾಲದಲ್ಲೇ ಪತ್ರಕರ್ತರೂ ಆಗಿ ಪುರಾಣ ಕಥಾವಳಿ ಎಂಬ ಮಾಸಪತ್ರಿಕೆಯನ್ನು ನಡೆಸುತ್ತಿದ್ದರು. ಸ್ವತಃ ಸಾಹಿತಿಯೂ ಆಗಿದ್ದ ಅವರು ಶಿವಮಹಾಪುರಾಣ ಮತ್ತು ವಿಷ್ಣುಪುರಾಣ ಮುಂತಾದ ಪುರಾಣಗಳನ್ನು ಅಚ್ಚುಕಟ್ಟಾಗಿ ಅನುವಾದ ಮಾಡಿ ಪ್ರಕಟಿಸಿದ್ದರು. ವೆಂಕಟಸುಬ್ಬಯ್ಯನವರು ಇಂಥವರ ಮಗನೆಂದರೆ ಕೇಳಬೇಕೇ? ಜೊತೆಗೆ ಮೂಲತಃ ಇವರು ಸಂಸ್ಕೃತ ಮತ್ತು ಕನ್ನಡದಲ್ಲಿ ವಿದ್ವಾಂಸರಾಗಿದ್ದ ವೇದೋಪನಿಷತ್ತುಗಳ ಪಾರಂಗತ ಮನೆತನದಿಂದ


ಬಂದವರು. ಹಾಗಾಗಿ ಬಾಲ್ಯದಿಂದಲೂ ಬಹುಬುದ್ಧಿವಂತರೇ ಆಗಿದ್ದ ಇವರು ದಿನಕಳೆದು ಬೆಳೆದಂತೆ ಜ್ಞಾನಭಂಡಾರವನ್ನು ಅಗಾಧವಾಗಿ ಬೆಳೆಸಿಕೊಂಡು 1937 ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಕನ್ನಡ ಎಂ.ಎ. ಪದವಿಯನ್ನು ಸುವರ್ಣ ಪದಕ ಸಹಿತ ಹೊನ್ನಶೆಟ್ಟಿ ಬಹುಮಾನದೊಡನೆ ಪಡೆದಿದ್ದರು. ಆ ನಂತರ 1938 ರಲ್ಲಿ ಬಿ.ಟಿ. ಮಾಡಿ ಶಿಕ್ಷಣ, ಸಂಶೋಧನೆ, ಅನುವಾದ, ವಿಮರ್ಶೆ ಮತ್ತು ನಿಘಂಟು ನಿರ್ಮಾಣ ನಿರ್ಮಾಣ ಕಾರ್ಯಗಳತ್ತ ತಮ್ಮ ಲೇಖನಿಯನ್ನು ಹರಿಯಬಿಟ್ಟರು. 1939 ರಲ್ಲಿ ಮೈಸೂರಿನ ಮಹಾರಾಜ ಕಾಲೇಲಿನಲ್ಲಿ ಉಪನ್ಯಾಸಕರಾಗಿ ನೇಮಕಗೊಂಡ ಇವರು ನಂತರ ಬೆಂಗಳೂರಿನ ವಿಜಯ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿ ನಾಲ್ಕು ದಶಕಗಳ ಸುದೀರ್ಘ ಕಾಲದವರೆಗೆ ವಿದ್ಯಾರ್ಥಿಗಳ ಜ್ಞಾನಪರಿಧಿ ಹೆಚ್ಚಿಸಲು ಶ್ರಮಿಸಿ 1973 ರಲ್ಲಿ ನಿವೃತ್ತರಾದರು. ಈ ಅವಧಿಯಲ್ಲಿ ಶಿಕ್ಷಣ ಸೇವೆಯ ಜೊತೆ ಜೊತೆಗೆ ಇವರ ಸಾಹಿತ್ಯಸೇವೆಯೂ ನಿರಂತರವಾಗಿ ಹರಿದು ಬಂದು ಇವರಿಂದ ಹಲವಾರು ಮಹತ್ವದ ಕೃತಿಗಳು ಸೃಷ್ಟಿಯಾದವು.

ವೆಂಕಟಸುಬ್ಬಯ್ಯನವರು , ಸೃಜನಶೀಲ ಸಾಹಿತ್ಯಕ್ಕಿಂತ ಸೃಜನೇತರ ಸಾಹಿತ್ಯದಲ್ಲಿ ಹೆಚ್ಚು ಒಲವು ಹೊಂದಿದ್ದು ಇದನ್ನು ಅವರ ಬರೆಹಗಳಲ್ಲಿ ಕಾಣಬಹುದಾಗಿದೆ. ಹಾಗಾಗಿ ಇವರ ಲೇಖನಿಯಿಂದ ಅರಳಿದ ಸಾಹಿತ್ಯ ಕುಸುಮಗಳಲ್ಲಿ ಹೆಚ್ಚಿನವು ಸೃಜನೇತರ ಕೃತಿಗಳೇ ಆಗಿವೆ. ನಯನಸೇನ, ಅನುಕಲ್ಪನೆ, ನಳಚಂಪು, ಅಕ್ರೂರ ಚರಿತ್ರೆ, ಲಿಂಡನ್ ಜಾನ್ಸನ್ ಕಥೆ, ಸಂಯುಕ್ತ ಸಂಸ್ಥಾನ ಪರಿಚಯ, ಶಂಕರಾಚಾರ್ಯ, ಕಬೀರ್, ಇದು ನಮ್ಮ ಭಾರತ, ಸರಳಾದಾಸ್, ರತ್ನಾಕರವರ್ಣಿ, ದಾಸಸಾಹಿತ್ಯ ವಚನಸಾಹಿತ್ಯ ಶಾಸನ ಸಾಹಿತ್ಯ ಷಡಕ್ಷರ ದೇವ, ಸರ್ವಜ್ಞ, ಕನ್ನಡ –ಕನ್ನಡ ಇಂಗ್ಲೀಷ್ ನಿಘಂಟು, ಹೊಯ್ಸಳ ಕರ್ನಾಟಕ ರಜತೋತ್ಸವ ಸಂಪುಟ, ಮುದ್ದಣ ಭಂಡಾರ ಭಾಗ–1, ಮುದ್ದಣ ಭಂಡಾರ ಭಾಗ–2, ಕಾವ್ಯಲಹರಿ, ಕನ್ನಡ ಸಾಹಿತ್ಯ ಬೆಳೆದು ಬಂದ ದಾರಿ, ಕನ್ನಡವನ್ನು ಉಳಿಸಿ, ಬೆಳೆಸಿದವರು, ಪ್ರೊ॥ ಟಿ.ಎಸ್.ವೆಂಕಣ್ಣಯ್ಯನವರು, ಕವಿ ಜನ್ನ ಡಿ.ವಿ.ಗುಂಡಪ್ಪನವರು, ಕನ್ನಡಾದ ನಾಯಕಮಣಿಗಳು, ಕರ್ಣಕರ್ಣಾಮೃತ, ನಾಗರಸನ ಭಗವದ್ಗೀತೆ, ತಮಿಳು ಕತೆಗಳು, ಇಗೋ ಕನ್ನಡ–1, ಇಗೋ ಕನ್ನಡ–2, ಮುದ್ದಣ ಪದಪ್ರಯೋಗ ಕೋಶ, ಎರವಲು ಪದಕೋಶ, ಎರವಲು ಪದಕೋಶ, ಕುಮಾರವ್ಯಾಸನ ಅಂತರಂಗ ಮುಂತಾದವು ಇವರ ಪ್ರಮುಖ ಕೃತಿಗಳು. ಇವರ ಇಗೋ ಕನ್ನಡ ಅಂಕಣವಂತೂ ನಾಡಿನ ಮನೆಮಾತು.

ಕೇವಲ ಸಾಹಿತ್ಯ ರಚನೆಗಷ್ಟೇ ಇವರು ತಮ್ಮನ್ನು ಸೀಮಿತಗೊಳಿಸಿಕೊಂಡವರಲ್ಲ. ಇವರದು ಸಮಾಜಮುಖಿ ವ್ಯಕ್ತಿತ್ವ ಮತ್ತು ಬಹುಮುಖಿ ಸಾಧನೆ. ಹಾಗಾಗಿ ವೆಂಕಟಸುಬ್ಬಯ್ಯನವರ ಹೆಸರು ಹಲವಾರು ಕ್ಷೇತ್ರಗಳಲ್ಲಿ ತನ್ನದೇ ಆದ ಛಾಪು ಮೂಡಿಸಿದೆ. ಮೈಸೂರು ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳ ಅಕಾಡೆಮಿಕ್ ಕೌನ್ಸಿಲ್ ಸದಸ್ಯರಾಗಿ, ಕನ್ನಡ ಪರೀಕ್ಷಾ ಮಂಡಳಿಯ ಅಧ್ಯಕ್ಷರಾಗಿ ಕೆಲಸ ಮಾಡಿರುವ ಇವರ ಶೈಕ್ಷಣಿಕ ಸಾಧನೆ ಏನೂ ಕಮ್ಮಿಯಲ್ಲ. 1973 ರಿಂದ 1992 ರವರೆಗೆ ಕನ್ನಡ ಕನ್ನಡ ಬೃಹತ್ ಕೋಶದ ಪ್ರಧಾನ ಸಂಪಾದಕರಾಗಿ ಈ ದಿಶೆಯಲ್ಲಿ ಏಳು ಬೃಹತ್ ಸಂಪುಟಗಳನ್ನು ಹೊರತಂದ ಹೆಗ್ಗಳಿಕೆ ಇವರದು. 1964–1969 ರ ಅವಧಿಯಲ್ಲಿ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಇವರು ಇದಕ್ಕೂ ಮುನ್ನ ಸಾಹಿತ್ಯಪರಿಷತ್‌ನ ಕಾರ್ಯದರ್ಶಿಯಾಗಿಯೂ ಹಲವಾರು ವರ್ಷಗಳು ಪರಿಷತ್‌ನ ಅಭಿವೃದ್ಧಿಗಾಗಿ ಅಹರ್ನಿಶಿ ದುಡಿದಿದ್ದರು. ಕನ್ನಡ ನುಡಿ ಪತ್ರಿಕೆಯ ಸಂಪಾದಕರಾಗಿ, ಕನ್ನಡ–ಕನ್ನಡ ಕೋಶದ ಸಮಿತಿಯ ಅಧ್ಯಕ್ಷರು ಮತ್ತು ಪ್ರಧಾನ ಸಂಪಾದಕರಾಗಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಅಖಿಲ ಭಾರತ ನಿಘಂಟುಕಾರರ ಸಂಘದ ಉಪಾಧ್ಯಕ್ಷರಾಗಿ, ಕೇಂದ್ರ ಸರ್ಕಾರದ ಭಾರತಿಯ ಭಾಷಾ ಸಮಿತಿಯ ಕನ್ನಡ ಪ್ರತಿನಿಧಿಗಳಾಗಿ, ಕನ್ನಡ ಭಾಷೆ , ನಿಘಂಟು ರಚನೆಯ ಹಲವಾರು ಸಮಿತಿಗಳ ವಿವಿಧ ಪ್ರಮುಖ ಸ್ಥಾನಗಳಲ್ಲಿ ಕುಳಿತು ಕನ್ನಡಕ್ಕಾಗಿ ದುಡಿದಿರುವ ಇವರ ಪ್ರಾಮಾಣಿಕ ಕನ್ನಡ ಕಾಯಕ ನಿಜಕ್ಕೂ ನಾಡು ಮೆಚ್ಚುವಂತಾದ್ದು.

ನಿಘಂಟು ಸಾರ್ವಭೌಮ, ಸಂಚಾರಿ ಜೀವಂತಪದಕೋಶ, ಭಾಷಾವಿಜ್ಞಾನ ಪ್ರವೀಣ, ಪದಗಳ ಕಣಜ, ನಿಘಂಟು ನಿಸ್ಸೀಮ, ಶಬ್ದರ್ಷಿ, ಪದಜೀವಿ, ಪದಗುರು, ನಡೆದಾಡುವ ನಿಘಂಟು, ಶಬ್ದಸಂಜೀವಿನಿ, ಶಬ್ದಬ್ರಹ್ಮ, ಶಬ್ದಸಾಗರ, ಶಬ್ದಸಹಾಯವಾಣಿ, ಶಬ್ದಗಾರುಡಿಗ, ಶಬ್ದಶಿಲ್ಪಿ ಚಲಿಸುವ ಜ್ಞಾನಭಂಡಾರ, ಕನ್ನಡದ ಕಿಟ್ಟೆಲ್. . . ಹೀಗೆ ಹಲವಾರು ಬಿರುದುಗಳ ಮಳೆಯಲ್ಲಿ ಮಿಂದಿರುವ ಶತಕದ ಅಂಚಿನಲ್ಲಿರುವ ಸಾಹಿತ್ಯ ಭೀಷ್ಮ ಪ್ರೊ॥ ಜಿ.ವೆಂಕಟಸುಬ್ಬಯ್ಯನವರ ಸಾಧನೆಯ ತೂಕಕ್ಕೆ ಯಾವ ಬಿರುದುಗಳೂ ಭಾರವೆನಿಸದು.

ಇವರ ಮುದ್ದಣ ಭಂಡಾರ ಗ್ರಂಥಕ್ಕೆ 1987 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಇವರ ಸಾಹಿತ್ಯ ಸಾಧನೆಗಾಗಿ 1991 ರಲ್ಲಿ



ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ. 1992 ರಲ್ಲಿ ಮಾಂಟ್ರಿಯಲ್ ಕೆನಡಾದಲ್ಲಿ ನಡೆದ ಕನ್ನಡ ಸಮ್ಮೇಳನದ ಗೌರವ ಆತಿಥ್ಯ 1997 ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ. 1998 ರಲ್ಲಿ ಶಂಬಾ ಪ್ರಶಸ್ತಿ. 1999 ರಲ್ಲಿ ಸೇಡಿಯಾಪು ಪ್ರಶಸ್ತಿ, ಅದೇ ವರ್ಷ ಶಿವರಾಮ ಕಾರಂತ ಪ್ರಶಸ್ತಿ. 2000 ದಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿಯ ವಿಶೇಷ ಪ್ರಶಸ್ತಿ. 2001 ರಲ್ಲಿ ವನಮಾಲಿ ಪ್ರಶಸ್ತಿ. 2003 ರಲ್ಲಿ ಮುದ್ದಣ ಪುರಸ್ಕಾರ, 2005 ರಲ್ಲಿ ಮಾಸ್ತಿ ಪ್ರಶಸ್ತಿ. ನಾಡೋಜ ಪ್ರಶಸ್ತಿ. 2007 ರಲ್ಲಿ ಮೂಡುಬಿದರೆಯ ಪ್ರತಿಷ್ಠಿತ ಆಳ್ವಾಸ್ ನುಡಿಸಿರಿಯ ಅಧ್ಯಕ್ಷತೆಯ ಗೌರವ, 2005 ರಲ್ಲಿ ಪ್ರತಿಷ್ಠಿತ ಅನಕೃ ನಿರ್ಮಾಣ ಸ್ವರ್ಣ ಪ್ರಶಸ್ತಿ, 2009 ರಲ್ಲಿ ಕರ್ನಾಟಕ ವಿಜ್ಞಾನ ಪರಿಷತ್ತಿನ ರಜತೋತ್ಸವ ಪ್ರಶಸ್ತಿ, 2010 ಅಲ್ಲಿ ಗೋಕಾಕ್ ವಾಙ್ಮಯ ಟ್ರಸ್ಟ್‌ನ ವಿ.ಕೃ.ಗೋಕಾಕ್ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿ–ಪುರಸ್ಕಾರ, ಗೌರವ–ಸನ್ಮಾನಗಳಿಗೆ ಇವರು ಭಾಜನರಾಗಿದ್ದಾರೆ. ಅಂತೆಯೇ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ॥ ವಿರೇಂದ್ರ ಹೆಗ್ಗಡೆಯವರ ಪ್ರಾಯೋಜಕತ್ವದಲ್ಲಿ ಜಿ.ವಿ.ಯವರನ್ನು ಕುರಿತು ನಿರ್ದೇಶಕ ಸುಚೇಂದ್ರ ಪ್ರಸಾದ್, ಸಾಕ್ಷ್ಯಚಿತ್ರ (2010) ತೆಗೆದಿರುವುದು ಇವರಿಗೆ ಸಂದ ದೊಡ್ಡ ಗೌರವವೇ ಆಗಿದೆ. ಈಗ ಇವೆಲ್ಲಕ್ಕೂ ಕಳಶಪ್ರಾಯವಾಗಿ ಕನ್ನಡ ಸಾಹಿತ್ಯ ಪರಿಷತ್ತು 77ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠವನ್ನು ಪ್ರೊ॥ ಜಿ. ವೆಂಕಟಸುಬ್ಬಯ್ಯ ಅವರಿಗೆ ನೀಡಿ ಗೌರವಿಸಿದೆ.

ಕೃಪೆ : ಅಂತರ್ಜಾಲ



***ಮೈಸೂರು ಅಸೋಸಿಯೇಷನ್***

***ಸದಸ್ಯರಿಗೆ,***

***ನೇಸರು ಓದುಗರಿಗೆ***

***ಗೌರಿ ಗಣೇಶ***

***ಹಬ್ಬದ ಶುಭಾಶಯಗಳು.***

# ಸ್ನೇಹಕ್ಕೊಂದು ಪ್ರತೀಕ

ವ್ಯಾಸರಾಯ ಬಲ್ಲಾಳರು ಬೆಂಗಳೂರಿನಲ್ಲಿ ಮನ ಕಟ್ಟುತ್ತಿರುವ ಮತ್ತು ಇಲ್ಲಿ ಬಂದು ನೆಲೆಸುವ್ ವರ್ತಮಾನ ಗತಾನುಗತಿಕವಾಗಿ ನನ್ನ ಕಿವಿಯನ್ನು ಮುಟ್ಟಿತು. ನನಗೆ ತುಂಬ ಸಂತೋಷವಾಯಿತು. ಅವರ ಕಾದಂಬರಿಗಳನ್ನು ಕಥೆಗಳನ್ನು ಓದಿ ಅವುಗಳಿಂದ ಬಲ್ಲಾಳರ ವ್ಯಕ್ತಿತ್ವವನ್ನು ಕಲ್ಪನೆ ಮಾಡಿಕೊಂಡಿದ್ದ ನನಗೆ, ಅವರನ್ನು ವ್ಯಕ್ತಿಶಃ ಕಾಣುವ ಅವರ ಮನೆಯಲ್ಲಿ ಬೊಂಬಾಯಿಯಲ್ಲಿಯೇ ಆತಿಥ್ಯವನ್ನು ಪಡೆಯುವ ಒಂದು ಸದವಕಾಶವೂ ಒಂದು ಪ್ರಯಾಣದಲ್ಲಿ ಲಭ್ಯವಾಗಿತ್ತು. ಸುಸಂಸ್ಕೃತ ಸಂಸಾರದ ಒಡನಾಟದಿಂದ ನನ್ನ ಮನಸ್ಸು ತುಂಬ ಪ್ರಸನ್ನವಾಗಿ ಅವರ ಕೃತಿಗಳನ್ನೆಲ್ಲ ಮತ್ತೆ ಓದುವ ಮನಸ್ಸಾಯಿತು. ಬೊಂಬಾಯಿಯಿಂದ ಹಿಂದಿರುಗಿದ ಬಳಿಕ ಆ ವೇಳೆಗೆ ರಚಿತವಾಗಿದ್ದ ಎಲ್ಲ ಕಾದಂಬರಿಗಳನ್ನೂ ಕಥೆಗಳನ್ನೂ ಓದುವ ಮನಸ್ಸಾಯಿತು. ಬೊಂಬಾಯಿಯಿಂದ ಹಿಂದಿರುಗಿದ ಬಳಿಕ ಆ ವೇಳೆಗೆ ರಚಿತವಾಗಿದ್ದ ಎಲ್ಲ ಕಾದಂಬರಿಗಳನ್ನೂ ಕಥೆಗಳನ್ನೂ ಓದುವ ಕಾರ್ಯವನ್ನು ಅನುಕ್ರಮವಾಗಿ ನಾನು ಪೂರೈಸಿದೆ. ಸ್ವಾರಸ್ಯದ ವಿಷಯವೆಂದರೆ ಅವರ ಗ್ರಂಥಗಳೆಲ್ಲವೂ ಬೆಂಗಳೂರಿನಲ್ಲಿ ಸುಲಭವಾಗಿ ದೊರೆಯುತ್ತಿದ್ದವು. ಬೆಂಗಳೂರಿನ ಕನ್ನಡ ಓದುಗರಿಗೆ ಬಲ್ಲಾಳರ ಕಾದಂಬರಿಗಳೂ ತುಂಬ ಪ್ರಿಯವಾಗಿದ್ದುವೆಂಬ ವಿಷಯವನ್ನು ದೃಷ್ಟಾಂತಪಡಿಸುವ ಸ್ಥಿತಿ ಇದು. ಸಾಹಿತಿ ಮಿತ್ರರ ಮನೆಗಳಲ್ಲಿ ನನ್ನ ಬಳಿ ಇಲ್ಲದ ಕಾದಂಬರಿಗಳು ದೊರಕುತ್ತಿದ್ದವು. ಸ್ನೇಹಿತರು ಸೇರಿದಾಗ ಅವರ ಕಾದಂಬರಿಗಳನ್ನು ಹೊಸದಾಗಿ ಓದಿದ ಮಿತ್ರರು ಆಯಾ ಕಾದಂಬರಿಗಳ ವಿಮರ್ಶೆಗೆ ತೊಡಗುತ್ತಿದ್ದರು. ಹೀಗಾಗಿ ದೂರದ ಬೊಂಬಾಯಿಯ ಬಲ್ಲಾಳರು ಬೆಂಗಳೂರಿನಲ್ಲಿ ಬಹು ಹತ್ತಿರದ ಕತೆಗಾರರಾಗಿದ್ದರು. ಇಂಥವರು ಬೆಂಗಳೂರಿಗೆ ಬಂದು ನೆಲೆ ನಿಲ್ಲುವ ವಿಷಯ ನನಗೂ ನನ್ನ ಮಿತ್ರರಿಗೂ ಬಹಳ ಸಂತೋಷ ತರುವ ವರ್ತಮಾನವಾಗಿತ್ತು.

ಬೆಂಗಳೂರಿಗೆ ಬಲ್ಲಾಳರು ಆಗಮಿಸಿದಾಗ ನವಕರ್ನಾಟಕದ ಶ್ರೀರಾಜರಾಮ್ ಮತ್ತು ಮಿತ್ರರು ಅವರಿಗೆ ಒಂದು ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ನಡೆದ ಆ ಸಭೆಗೆ ಅನೇಕ ಕನ್ನಡ ಓದುಗರೂ ಪ್ರಸಿದ್ಧ ಸಾಹಿತಿಗಳೂ ಆಗಮಿಸಿ ಅದನ್ನು ನೆನಪಿಡುವ ಒಂದು ಕಾರ್ಯಕ್ರಮವನ್ನಾಗಿ ಮಾಡಿದರು. ತಮ್ಮ ಸ್ವಾಗತಕ್ಕೆ ಆಗಮಿಸಿದ್ದ ಜನರನ್ನು ಕಂಡು ಬಲ್ಲಾಳರಿಗೂ ತುಂಬ ಸಂತೋಷವಾಯಿತು.


ಬೊಂಬಾಯಿಯ ಜೀವನವನ್ನು ಸಾಂದ್ರವಾಗಿ ಅನುಭವಿಸಿರುವ ಮತ್ತು ಆ ಜೇನುಗೂಡಿನ ಬಗ್ಗೆ ಆಳವಾದ ಪ್ರೀತಿಯನ್ನು ಬೆಳೆಸಿಕೊಂಡಿರುವ ಬಲ್ಲಾಳರು ತಮ್ಮ ಕಾದಂಬರಿಗಳಿಗೆಲ್ಲ ಆ ನಗರವನ್ನೇ ಪರಿಸರವನ್ನಾಗಿ ಆರಿಸಿರುವುದರಲ್ಲಿ ಒಂದು ಅರ್ಥ ಅಡಗಿದೆ. ಆಳವಾದ ಪರಿಚಯವಿದ್ದದ್ದನ್ನು ಗಾಢ ಪರಿಣಾಮ ಬರುವಂತೆ ಚಿತ್ರಿಸಬಹುದು. ಮಾತು ಮಾತಿನಲ್ಲಿ ಆ ಅನುಭವದ ಕಂಪು ಪ್ರಸಾರವಾಗುತ್ತದೆ. ತೀವ್ರಾನುಭವದ ಪರಿಣಾಮ ಓದುಗನಿಗೆ ಅಷ್ಟೇ ಸಮೀಪದ ಅನುಭವವನ್ನು ನೀಡಬಲ್ಲದು.

ಬಲ್ಲಾಳರ ಕೃತಿಗಳ ಬಗ್ಗೆ ಎಲ್ಲ ಓದುಗರೂ ವಿಮರ್ಶಕರೂ ಗಟ್ಟಿಯಾಗಿ ಹೇಳುವ ಮಾತೊಂದಿದೆ. 'ಅವರ ಕಾದಂಬರಿಗಳು ಸ್ತ್ರೀ ಪ್ರಧಾನವಾದ ಕಥೆಗಳಿಂದ ಕೂಡಿರುತ್ತವೆ.' ಈ ಮಾತು ಎಷ್ಟು ಸತ್ಯವಾಗಿದೆ ಎಂದರೆ ಇದನ್ನು ಪುಷ್ಟೀಕರಿಸುವ ವಿಮರ್ಶೆಯಲ್ಲದೆ ಬೇರೊಂದು ಬಗೆಯ ಅಭಿವ್ಯಕ್ತಿಯೇ ಕಂಡುಬಂದಿಲ್ಲ. ಬಲ್ಲಾಳರು ಚಿತ್ರಿಸುವ ಪ್ರಮುಖ ಸ್ತ್ರೀ ಪಾತ್ರಗಳು ಎಲ್ಲ ಸರ್ವಸಂಪೂರ್ಣವಾದ ವರ್ಣಚಿತ್ರಗಳಂತೆ ಮನಸ್ಸಿನಲ್ಲಿ ನೆಲೆ ನಿಲ್ಲುತ್ತವೆ. ಆಯಾ ಪಾತ್ರಗಳು ಬೆಳೆಯುವ ಬಗೆಯಲ್ಲಿ ಕಾಣಬರುವ ಕಲೆಗಾರಿಕೆ ಅನನ್ಯವಾದುದು. ವಾತ್ಸಲ್ಯಪಥದ ಯಶೋದಾ ಆಗಲಿ, ಕಕ್ಕಿ ಮಾಲತಿಯಾಗಲಿ, ಉತ್ತರಾಯಣದ

✍ ಜಿ.ವೆಂಕಟಸುಬ್ಬಯ್ಯ

ರುಕ್ಮಿಣಿಯಾಗಲಿ, ಅನುರಕ್ತೆಯ ಪದ್ಮಾವತಿ, ಸುಮಿತ್ರೆಯರಾಗಲಿ ಜೀವಂತ ಪಾತ್ರಗಳು. ಬೊಂಬಾಯಿನ ಕಾಲದ ನಿಯಮಕ್ಕೆ ಬದ್ಧವಾದ ಪರಿಸರದಲ್ಲಿ ಸ್ವಪ್ರಯತ್ನದಿಂದ ಶುಭ್ರ ಜೀವನದ ಮಾರ್ಗವನ್ನು ಆರಿಸಿಕೊಂಡು ಗೆಲ್ಲುವ ಈ ಸ್ತ್ರೀ ಪಾತ್ರಗಳು ಸಮಾಜ ಸುಧಾರಣೆಯನ್ನು ಬಯಸುವ ಮತ್ತು ಸಾಧಿಸುವ ಸ್ತ್ರೀ ಸತ್ವಗಳಾಗಿ ಚಿತ್ರಿತವಾಗಿವೆ. ಇಂಥ ಪಾತ್ರಗಳಿಗೆ ಸಂಬಂಧಿಸಿದಂತೆ ಚಿತ್ರಗೊಳ್ಳುವ ಪುರುಷ ಪಾತ್ರಗಳು ಪೇಲವ ವ್ಯಕ್ತಿಗಳಾಗಿ ಪರಿವರ್ತನೆ ಹೊಂದುವುದಕ್ಕೆ ಕಾರಣ ಈ ಸ್ತ್ರೀ ಪಾತ್ರಗಳಿಗೆ ಬಲ್ಲಾಳರು ನೀಡುವ ಪ್ರಾಧ್ಯಾನ್ಯವೇ ಎಂದೂ ನಿರ್ಧಾರ ಮಾಡಬಹುದು. ಆದರೆ ಆ ಪುರುಷ ಪಾತ್ರಗಳಿಗೆ ಬಲ್ಲಾಳರೇನೂ ಅನ್ಯಾಯ ಮಾಡಿಲ್ಲ. ಅವುಗಳ ಮಿತಿಯಲ್ಲಿ ಆ ಪಾತ್ರಗಳೂ ಜೀವ ತಳೆಯುತ್ತವೆ.

ಬಲ್ಲಾಳರ ಪ್ರಮುಖ ಕಾದಂಬರಿಗಳಲ್ಲಿ ಕೌಟುಂಬಿಕ ಚಿತ್ರಗಳಿಗೇ ಮೊದಲ ಸ್ಥಾನ. ಆದರೆ ಬಂಡಾಯದಂಥ ಕಾದಂಬರಿಯಲ್ಲಿ ಸಾಮಾಜಿಕ



ಸಮಸ್ಯೆಯ ಚಿತ್ರಣ ಮಾಡುವುದರಲ್ಲಿ ಅವರು ಬೇರೆಯ ದೃಷ್ಟಿಯನ್ನು ಹೊಂದಿರುವುದು ಸ್ಪಷ್ಟ. ಇಲ್ಲಿರುವ ವೈಚಾರಿಕ ಪ್ರಾಧಾನ್ಯವನ್ನು ಯಾರೂ ಗುರಿತಿಸಬಹುದು. 'ಆಕಾಶಕ್ಕೊಂದು ಕಂದೀಲು' ಕಾದಂಬರಿ ಸಂಪೂರ್ಣವಾಗಿ ಹೊಸ ತಂತ್ರವನ್ನು ಆಧರಿಸಿರುವ ಕಾದಂಬರಿ. ಅವರ ಇತರ ಎಲ್ಲ ಕಾದಂಬರಿಗಳಿಗಿಂತ ಬೇರೆಯಾದ ಸತ್ವವುಳ್ಳದ್ದು. ಅಲ್ಲಿ ಬರುವ ಎಷ್ಟೊಂದು ಪಾತ್ರಗಳು ಬೇರೆ ಬೇರೆಯಾಗಿಯೇ ಪ್ರಾಧಾನ್ಯವನ್ನು ಪಡೆಯುತ್ತಿವೆ ಎಂಬುದು ಆಶ್ಚರ್ಯಕರವಾಗಿದೆ.

ನಿರಾಶೆಯಲ್ಲಿಯೂ ಮಾನವ ಆಶಾವಾದವನ್ನು ಹಿಂಬಾಲಿಸಬೇಕೆಂಬ ತತ್ವವನ್ನು ಗಾಢಚಿತ್ರಗಳ ಸಹಾಯದಿಂದ ಬಿಂಬಿಸುವ ಉತ್ತರಾಯಣ ನನಗೆ ಮೆಚ್ಚಿನ ಕಾದಂಬರಿ. ಬೆಂಗಳೂರಿನ ತಮ್ಮ ಮನೆಗೆ ಬಲ್ಲಾಳರು 'ಉತ್ತರಾಯಣ' ಎಂಬ ಉಚಿತವಾದ ಹೆಸರನ್ನೇ ನೀಡಿದ್ದಾರೆ. ಅದೂ ಕೂಡ ಆಶಾವಾದದ ತತ್ವವನ್ನು ತುಂಬಿಕೊಂಡಿರುವ ಆವಾಸವಾಗಿ ನಮಗೆಲ್ಲ ಸಂತೋಷವನ್ನು ನೀಡುತ್ತದೆ.

ಬಲ್ಲಾಳರ ಕಾದಂಬರಿಗಳ ಮತ್ತು ಕತೆಗಳ ಭಾಷೆಯ ಬಗ್ಗೆ ಒಂದು ವಿಶೇಷವಾದ ಮಾತನ್ನು ಹೇಳಬೇಕು. ಕತೆಯ ನಿರೂಪಣೆಗೆ, ಪಾತ್ರಗಳ ವರ್ಣನೆಗೆ, ಸನ್ನಿವೇಶಗಳ ಚಿತ್ರಣಕ್ಕೆ ಬೇರೆ ಬೇರೆ ಮಾರ್ಗಗಳನ್ನೇ ಬಲ್ಲಾಳರು ಅನುಸರಿಸಿದರೂ ಎಲ್ಲ ಬಗೆಯ ಬರಹವೂ ಸರಳ, ಸುಂದರ, ಸುಲಭಗ್ರಾಹ್ಯ. ಆದುದರಿಂದಲೇ ಅವರ ಭಾಷಾ ಶೈಲಿಗೆ ಮೆರುಗು ಬಂದಿದೆ. ಅದು ಅನನುಕರಣಸಾಧ್ಯವಾದ ಬರಹ. ಆದರೆ ಸತ್ವ ತುಂಬಿರುವ, ಓದುಗರ ಗಮನವನ್ನಾಕರ್ಷಿಸುವ ಸತ್ವವುಳ್ಳದ್ದು.

ವ್ಯಾಸರಾಯ ಬಲ್ಲಾಳರ ಬರಹದ ಬಗ್ಗೆ ಆಳವಾಗಿ ಏನನ್ನೂ ಹೇಳದೆ ಹೋದರೂ ಮೇಲಿನ ನನ್ನ ಮಾತುಗಳಲ್ಲಿ ಅವರ ಕೃತಿಗಳನ್ನು ಕುರಿತ ನನ್ನ ಪ್ರೀತಿಯನ್ನು ವಿವರಿಸುವುದು ಮಾತ್ರ ನನ್ನ ಉದ್ದೇಶವಾಗಿದೆ. ನನಗೆ ಮಾತ್ರ ಅವರ ಬರಹಕ್ಕಿಂತ ಅವರ ವ್ಯಕ್ತಿತ್ವ ತುಂಬ ಘನವಾದುದು. ಅವರೊಡನೆ ಮಾತನಾಡುತ್ತ ಕುಳಿತರೆ ಕಾಲ ಕಳೆದದ್ದು ಗೋಚರಿಸುವುದಿಲ್ಲ. ಬೊಂಬಾಯಿಯಲ್ಲಿ ಅವರೂ ಅವರ ಮಿತ್ರರೂ ರಾಜಕೀಯವಾಗಿ ಸಾಹಿತ್ಯಕವಾಗಿ, ಸಾಮಾಜಿಕವಾಗಿ ನೆರವೇರಿಸಿರುವ ಸಾಧನೆ ಯಾರಿಗಾದರೂ ಮಾದರಿಯಾಗಿರಬಲ್ಲದು. ಪತ್ರಿಕೋದ್ಯೋಗಿಯಾಗಿ ಎಲೆಮರೆಯ ಕಾಯಿಯಂತೆ ಅವರು ಬಹು ದೀರ್ಘ ಕಾಲ ಮಾಡಿದ ಪ್ರಚಾರ ಕಾರ್ಯ ಬಹು ಫಲವನ್ನೂ ನೀಡಿದೆ. ಕನ್ನಡ ಸಾಹಿತ್ಯದ ಅನೇಕ ಹಿರಿಯ ಚೇತನಗಳು

(ಪುಟ 23ಕ್ಕೆ)

# ವ.ಅ. ದಿವಾಣಜಿಯುವರ
# ಮೂರು ಕಾದಂಬರಿಗಳು

ಕನ್ನಡದ ಹೊರನಾಡಿನಲ್ಲಿ ನಿಂತು ಎಲೆಮರೆಯ ಕಾಯಿಯಂತೆ ಕನ್ನಡದ ಕೆಲಸವನ್ನು ಮಾಡುತ್ತ ಉಪಧ್ಯಾಯ ವೃತ್ತಿಯಿಂದ ಸೊಲ್ಲಾಪುರದಲ್ಲಿ ವಾಸಮಾಡುತ್ತಿರುವ ದಿವಾಣಜಿಯವರ ಪರಿಚಯ ನನಗೆ ಆದುದು ಅವರ 'ಪ್ರಸಾದಯೋಗ'ವನ್ನು ಓದಿದಾಗ. ಅದು ಸುಮಾರು ಮೂವತ್ತು ವರ್ಷಗಳ ಹಿಂದೆ. ಆ ಪುಸ್ತಕವನ್ನು ಓದಿದಾಗ ಅದು ಪುರಂದರದಾಸರ ಕೃತಿಗಳನ್ನು ಸಾದ್ಯಂತವಾಗಿ ಓದಿ ಅರಗಿಸಿಕೊಂಡು ಶುದ್ಧ ವಿಮರ್ಶಾದೃಷ್ಟಿಯಿಂದ ರಚಿಸಿದ ಕೃತಿಯೆಂಡು ನನಗೆ ಮನದಟ್ಟಾಯಿತು. ಅದರ ಒಂದು ಪ್ರತಿಯನ್ನು ಕೊಂಡು ನನ್ನ ಪುಸ್ತಕ ಭಂಡಾರದಲ್ಲಿ ಸ್ವಂತ ಉಪಯೋಗಕ್ಕೆಂದು ಇಟ್ಟುಕೊಂಡೆ. ಬೇಕಾದಾಗ ಅದರ ಪ್ರಯೋಜನವನ್ನು ಪಡೆಯುತ್ತಿದ್ದೆ. ಆದರೆ ದಿವಾಣಜಿಯವರನ್ನು ನಾನು ಕಂಡಿರಲಿಲ್ಲ, ಅವರೊಡನೆ ಮಾತನಾಡಿರಲಿಲ್ಲ. ಅವರು ಕಾದಂಬರಿಗಳನ್ನು ರಚಿಸಿದ್ದಾರೆಂಬುದು ಕೂಡ ನನ್ನ ಗಮನಕ್ಕೆ ಬಂದಿರಲಿಲ್ಲ. ಈಚೆಗೆ ಅವರು ಬೆಂಗಳೂರಿಗೆ ಬಂದಾಗ ಅವರಿಗೆ ಒಂದು ಸನ್ಮಾನವನ್ನು ಸಲ್ಲಿಸಿದ ಸಂದರ್ಭದಲ್ಲಿ ನಾನು ಅವರನ್ನು ಕಂಡು ಅವರ 'ಪ್ರಸಾದಯೋಗ'ದ ಬಗ್ಗೆ ನನ್ನ ಮೆಚ್ಚಿಕೆಯನ್ನು ತಿಳಿಸಿದೆ. ಅವರಿಗೆ ಆಶ್ಚರ್ಯವಾಯಿತು. ಅವರ ಇತ್ತೀಚಿನ ಪುಸ್ತಕಗಳ ಬಗ್ಗೆ ಮಾತನಾಡದೆ ಹಳೆಯ ಪುಸ್ತಕದ ಬಗ್ಗೆ ಮಾತನಾಡಿದುದರಿಂದ ಅವರಿಗೆ ನನ್ನ ಕನ್ನಡದ ತಿಳಿವಳಿಕೆ ಈಚಿನದಲ್ಲ, ಅರ್ಧ ಶತಮಾನದ ಹಿಂದಿನದು ಎಂಬುದು ಹೊಳೆದು ಅವರು ನಕ್ಕರು ಅಷ್ಟೆ.

ಬಳಿಕ ಅಲ್ಲಿದ್ದ ಅವರ ತಮ್ಮಂದಿರು ನನಗೆ ದಿವಾಣಜಿಯರ್ವರ ಮೂರು ಕಾದಂಬರಿಗಳನ್ನು ಕೊಟ್ಟು, – 'ಇವು ಈಚಿನ ಕೃತಿಗಳು' ಎಂದರು. ನಾನು ನನ್ನ upto date ತಿಳಿವಳಿಕೆ ಸಂಕೋಚಪಟ್ಟು – ಆ ಕಾದಂಬರಿಗಳನ್ನು ಸ್ವೀಕರಿಸಿ, ಬಳಿಕ ಸಮಯ ಸಿಕ್ಕಿದಾಗ ಓದಿ ಪೂರೈಸಿ, ಅವರ ಭಾಷಾ ಸಾಮರ್ಥ್ಯವನ್ನೂ ಸೃಷ್ಟಿಶೀಲ ಕಾರ್ಯ ವ್ಯಾಪ್ತಿಯನ್ನೂ ಅರ್ಥಮಾಡಿಕೊಂಡೆ. ಹಾಗೆ ನಾನು ಓದಿ ಅವರ ಮೂರು ಕಾದಂಬರಿಗಳನ್ನು ಕುರಿತ ಒಂದು ಪರಿಚಯವನ್ನು ನನ್ನ ಮನಸ್ಸಂತೋಷಕ್ಕಾಗಿ ದಾಖಲಿಸಿದ್ದೇನೆ.

'ನಾಲ್ಕನೆಯ ಆಯಾಮ' ದಿವಾಣಜಿ ಅವರ ಮೊದಲ ಕಾದಂಬರಿ. ಆದರಲ್ಲಿ ಒಂದು ಬಡ ಕುಟುಂಬದ ದೀನ ವಿದ್ಯಾರ್ಥಿಯ ಅತಿ ಶೋಚನೀಯ ಚಿತ್ರ ಮೂಡುತ್ತದೆ. ತಂದೆ ಕೂಪಮಂಡೂಕ. ವೃತ್ತಿಯಲ್ಲಿ ಸಾಕಷ್ಟು ಸಂಪಾದಿಸಿ ಲೋಕದ ಬಗ್ಗೆ ಮತ್ತೇನು ಮಾಡಾಲಾರದ, ಇತರ ತಿಳಿವಳಿಕೆಯೂ ಇರದ ಕೂಪ ಮಂಡೂಕ. ತಾಯಿಗೆ ತನ್ನ ಗಂಡನ ತಿಳಿವಳಿಕೆಯ ಬಗ್ಗೆ ಸಂಪೂರ್ಣ ನಂಬಿಕೆ, ಅವನ ಮಾತಿಗೆ ಎಂದೂ ಎದುರಾಡದೆ ತಾನೂ ತನ್ನ ಮಕ್ಕಳೂ ಬದುಕಬೇಕು ಎಂಬ ಆಸೆಯವಳು. ಇಂಥ ಮನೆಯಲ್ಲಿ ಗಂಡ ಹೆಂಡತಿ, ತಾನು ತನ್ನ ತಂಗಿ, ತಮ್ಮ ಇಷ್ಟು ಜನ – ಸಂಸಾರವಾಗಿ ಮುಂದುವರಿದಿದೆ.

ಈ ವಿದ್ಯಾರ್ಥಿಗೆ ಮನೆಯ ಆವರಣದಿಂದ ಯಾವ ಸ್ವಾಭಿಮಾನವೂ ದೊರೆತಿಲ್ಲ. ಶಾಲೆಯಲ್ಲಿ ಇಂಗ್ಲೀಷ್ ಅಧ್ಯಾಪಕರಿಂದ ತನ್ನ ಯಾವ ತಪ್ಪೂ ಇಲ್ಲದೆ ಕೆನ್ನೆಗೆ ಏಟು ತಿಂದಿದ್ದ. ಇಂಥ ವಿದ್ಯಾರ್ಥಿಯ

✍ ಜಿ.ವೆಂಕಟಸುಬ್ಬಯ್ಯ

ಅಂತರಂಗದ ಸ್ವಾತಂತ್ರ್ಯ ದೃಷ್ಟಿಗೂ ಬಹಿರಂಗದ ಅಸ್ವಾತಂತ್ರ್ಯದ ಬಾಳಿಗೂ ಇರುವ ಸ್ಥಿತಿಯ ಚಿತ್ರ ಸೊಗಸಾಗಿದೆ. ವಿದ್ಯಾರ್ಥಿಯ ಮನಸ್ಸಿಗೂ, ಬಹಿರಂಗದ ಬಾಳಿಗೂ ಆಗುವ ವಾದ – ವಿವಾದದಲ್ಲಿ ಆ ಸಮ್ಸಾರದ ಚಿತ್ರ ಬಿಚ್ಚಿಕೊಳ್ಳುತ್ತ ಹೋಗುತ್ತದೆ. ಸ್ವಾರಸ್ಯವೆಂದರೆ ಲೇಖಕರು ಈ ಯಾರಿಗೂ ಹೆಸರೇನೆಂಬುದನ್ನೇ ನೀಡಿಲ್ಲ. ಅದು ಅಂಥ ಸಂಸಾರದ ಯಾವ ಊರಿನ ಯಾವ ಮತದ, ಯಾವ ಜಾತಿಯ ಕಥೆ ಬೇಕಾದರೂ ಆಗಬಹುದು. ಹೀಗೆ ಹೆಸರಿಲ್ಲದ ವ್ಯಕ್ತಿಯ ಅಂತರಂಗದ ಸಂಭಾಷಣೆಯಲ್ಲಿ ಸೂಕ್ಷ್ಮತರವಾದ ಅನುಭವವನ್ನು ದಿವಾಣಜಿ ತುಂಬಿದ್ದಾರೆ.

ಶಾಲೆಯಿಂದ ಪಾಸಾಗಿ ವಿದ್ಯಾರ್ಥಿ ಕಾಲೇಜಿಗೆ ಸೇರುತ್ತಾನೆ. ಅಲ್ಲಿ ದೊರಕುವ ಸ್ವಾಗತಿಂದ ಅವನಿಗೆ ಹೊಸ ಲೋಕವನ್ನು ಸೇರಿದಂತಾಗುತ್ತದೆ. ಒಬ್ಬ ಸ್ನೇಹಿತ ದೊರಕುತ್ತಾನೆ. ಅವನೂ ಬಡವನೇ! ಆದರೆ ಅವನ ನಿಷ್ಠೆ, ವ್ಯಾಸಂಗದ ಕ್ರಮ, ನಿರ್ಧಾರದ ನಡವಳಿಕೆ, ಆಶಾವಾದ ಇವುಗಳು ಈ ವಿದ್ಯಾರ್ಥಿಗೂ ಮಾದರಿಯಾಗುತ್ತವೆ. ಅವನಿಂದ ತನ್ನ ಎಷ್ಟೋ ಸಮಸ್ಯೆಗಳು ತಾನಾಗಿಯೇ ಪರಿಹಾರವಾಗುತ್ತವೆ. ಆದರೆ ಅವನಿಗೆ ದೊರಕಿರುವ ಆಶ್ರಯ ಅವನ ತಾಯಿಯ ಗೆಳತಿಯ ದೆಸೆಯಿಂದ. ಅವಳು ಸಿರಿವಂತನನ್ನು ಮದುವೆಯಾಗಿ ಸುಖಸಂಸಾರವನ್ನು ನಡೆಸುತ್ತಿದ್ದಾಳೆ. ಒಳ್ಳೆಯ ಗಂಡ, ಒಳ್ಳೆಯ ಮಗ, ಮಗಳು. ಆದರೆ ಅವರ ಲೋಕವೇ ಬೇರೆ. ತಾನು ಅವರ ಮನೆಯ ಹೊರಗಿನ ಕೋಣೆಯಲ್ಲಿ ವಾಸವಾಗಿರುವ ಬಡಜೀವಿ. ಅವರಾರೂ ತನ್ನೊಡನೆ ಸರಳವಾಗಿ ಮತನಾಡುವುದಿಲ್ಲ.



ಆ ಹುಡುಗಿ ಕೂಡ ತನ್ನ ಕಡೆ ನೋಡುವುದಿಲ್ಲ. ವಿದ್ಯಾರ್ಥಿಗೆ ಅವಳೊಡನೆ ಮಾತನಾಡಬೇಕೆಂಬಾಸೆ. ಅವಳಿಗೆ ಒಂದು ಪ್ರೇಮಪತ್ರವನ್ನು ಬರೆದ, ಅದನ್ನು ಹರಿದು ಹಾಕಿ ಸುಟ್ಟದ್ದೂ ಆಯಿತು. ಸ್ವತಂತ್ರವಾಗಿ ಸಿಗರೇಟು ಸೇದಲು ಪ್ರಯತ್ನಪಟ್ಟ. ಅದೂ ಆಗಲಿಲ್ಲ.

ಎರಡನೆಯ ಅಧ್ಯಾಯದಲ್ಲಿ ಕಾಲೇಜು ಅವನಿಗೆ ತುಂಬ ಬೇರೆಯ ಲೋಕವಾಗಿಯೇ ಕಾಣಬರುತ್ತದೆ. ಅಧ್ಯಾಪಕರೇ ಸಿಗರೇಟು ಸೇದುತ್ತ ಹರಟೆ ಕೊಚ್ಚುವುದು, ವಿದ್ಯಾರ್ಥಿನಿಯರ ಗುಂಪು ಅವರ ಸಂತೋಷದಲ್ಲಿ ಲೀನರಾಗಿರುವುದು, ಸಿನಿಮಾ ಥಿಯೇಟರಿನ ಮಾಲೀಕನ ಮಗನೊಡನೆ ಹರಟೆ ಕೊಚ್ಚುವ ಅವನ ಸ್ನೇಹಿತರು, ಅವರ ವೇಷ ಭೂಷಣಗಳು– ಇವುಗಳಿಂದ ಈ ಕಾಲೇಜು ತನ್ನ ಆಳವನ್ನು ಮೀರಿದ್ದು, ಅಭ್ಯಾಸ ತನಗೆ ಸಾಧ್ಯವಿಲ್ಲ ಎನ್ನಿಸಿತು. ತನ್ನ ಬಡತನದಲ್ಲಿ ಈ ತರಹದ ಜೀವನ ಸಾಧ್ಯವಿಲ್ಲ. ಆದರೆ ತಂದೆ ಎಲ್ಲಿಂದ ತಂದಾರು. ತರಬೇಡವೇ ನನ್ನಂಥವರಿಗೆ – ಎಂಬಂಥ ದ್ವಂದ್ವಗಳಲ್ಲಿ ಮುಳುಗಿದ್ದಾಗ ತನ್ನಂಥವನೇ ಆದ ಒಬ್ಬ ಸ್ನೇಹಿತ ದೊರಕಿದ. ಅವನೊಡನೆ ಮಾತುಕತೆಯಿಂದ ಈ ವಿದ್ಯಾರ್ಥಿಯ ಆಲೋಚನೆಯೇ ಬೇರೆಯಾಯಿತು.

ಈ ಎರಡನೆಯ ಅಧ್ಯಾಯದಲ್ಲಿ ನಿಜವಾದ ವಿದ್ಯಾರ್ಥಿಯರು ಅಲ್ಲದವರು ಯಾರು ಎಂಬುದರ ಅರ್ಥವತ್ತಾದ ನಿರೂಪಣೆ ಈ ಗೆಳೆಯರಿಬ್ಬರ ಮಾತುಕತೆಯಲ್ಲಿ ಮೂಡುತ್ತದೆ. ವಿದ್ಯಾರ್ಥಿ ಜೀವನದ ವಿದ್ಯಾರ್ಥಿಯ ಆಲೋಚನೆಗಳ ಬಗ್ಗೆ ಕಾದಂಬರಿಯ ಕಥಾನಾಯಕನಾಗುವ ವಿದ್ಯಾರ್ಥಿಗೆ ಸ್ಪಷ್ಟವಾದ ಸೂಚನೆ ದೊರೆತಂತಾಯಿತು – ಒಳ್ಳೆಯ ಮಾರ್ಗದರ್ಶನ ಸಿಕ್ಕಿತು.

ಮೂರನೆಯ ಅಧ್ಯಾಯ ಈ ವಿದ್ಯಾರ್ಥಿ ತನ್ನ ತಂದೆಯಿಂದ ಹಣವನ್ನು ತಂದು ಅದನ್ನು ದುರುಪಯೋಗ ಮಾಡಿ, ವೇಷಭೂಷಣಗಳಲ್ಲಿ ಕಳೆದು ಅನೇಕ ತಪ್ಪುಗಳನ್ನು ಮಾಡಿದ. ಸಿನಿಮಾ ಮಾಲೀಕನ ಮಗನ ಗುಂಪಿಗೆ ಸೇರಿದ. ಅವನಿಗೆ ಸಲ್ಲುವ ಎಲ್ಲ ಗೌರವಗಳೂ ತನಗೂ ಸಲ್ಲಬೇಕೆಂದು ಬಯಸಿದ. ಅವನಿಗೆ ಎರಡು ಬಗೆಯ ಒದೆ ಇಂದು ಒದ್ದಾಡಿದ. ತನಗೆ ಸ್ಥಳ ಕೊಟ್ಟ ತನ್ನ ತಾಯಿಯ ಗೆಳತಿಯ ಮಗಳಿಗೆ ಪ್ರೇಮಪತ್ರಗಳನ್ನು ಬರೆದ.

ಕಾಲೇಜಿನ ಪ್ರಮುಖ ವಿದ್ಯಾರ್ಥಿಯ ಗೆಳತಿಯ ಹೆಸರನ್ನು ತನ್ನ ಹೆಸರಿನೊಂದಿಗೆ ಸೇರಿಸಿ ಎಲ್ಲಿಲ್ಲದ ಹೊಡೆತ ಒದೆತಗಳನ್ನು ತಿಂದು, ಮನೆಗೆ ಬಂದು

ಹಾಸಿಗೆಯಲ್ಲಿ ಒರಗಿದ.

ಬೆಳಗ್ಗೆ ಎದ್ದಾಗ ಮನೆಯ ಒಡತಿ ಇವನ ಕೊಠಡಿಗೆ ತಾನೆ ಬಂದು ಇವನು ತನ್ನ ಮಗಳಿಗೆ ಬರೆದಿದ್ದ ಪ್ರೇಮಪತ್ರಗಳ ಕಟ್ಟನ್ನು ಇವನಿಗೆ ಕೊಟ್ಟು ಹೇಳಿದಳು 'ನಿನ್ನನ್ನು ಮನೆ ಬಿಟ್ಟು ತೊಲಗು ಎಂದು ಹೇಳಬೇಕು. ಆದರೆ ನಿನ್ನ ತಾಯಿ – ನನ್ನ ಗೆಳತಿ ಎಷ್ಟು ಸಂಕಟಪಡುತ್ತಾಳೆ ಪಾಪ! ಅದ್ದರಿಂದ ಇನ್ನೊಂದು ವರ್ಷ, ನಿನ್ನ ಶಿಕ್ಷಣ ಮುಗಿಯುವತನಕ ಇದ್ದುಹೋಗು' ಎಂದಳು. ಜೊತೆಗೆ ಮತ್ತೊಂದು ಮಾತನ್ನು ಸೇರಿಸಿದಳು; 'ನಿನ್ನ ತಾಯಿಯ ಅಪೇಕ್ಷೆಗಳ ಕತ್ತನ್ನು ಹಿಸುಕಬೇಡಾ'.

ಈ ವಿದ್ಯಾರ್ಥಿಗೆ 'ಇದ್ದೆನೋ ಸತ್ತೆನೋ' ಎನ್ನಿಸಿತು. ಒಂದು ಕನಸಿನಲ್ಲಿ ಎಳಸೆಳಸಾಗಿ ಬೆಳೆದ ಸವತೆಯ ಕಾಯಿ ಕೊಳೆತು ದುರ್ಗಂಧ ಬೀರುವಂತೆ ಕಂಡುಬಂತು.

ಹೀಗೆ ವಿದ್ಯಾರ್ಥಿಯ ಮೂರನೆಯ ಮಜಲು ಕೊನೆಗಾಣುತ್ತದೆ.

ನಾಲ್ಕನೆಯದೇ ಕೊನೆಯ ಅಧ್ಯಾಯ. ಇದರಲ್ಲಿ ಈ ಕಥೆಯ ನಾಯಕನು ಕಂಡ ಅನೇಕ ಕನಸುಗಳ ಭ್ರಮಾಚಿತ್ರಗಳ, ತಲೆಕಟ್ಟು ಕಾಣಬಹುದಾದ ಅನೇಕ ಬಗೆಯ ದುರಾಸೆಯ ಪುನರ್ನಿರ್ಮಾಣಗಳ ಕನಸುಗಳ ಸರಮಾಲೆ. ಅವನು ಸತ್ತಾಗ ಅವನ ಬಾಳಿನಿಂದ ತಂದೆ ತಾಯಿಗಳ ಕಣ್ಣೀರು ಅಷ್ಟೆ! ಡಾಕ್ಟರು ಹೇಳಿದರು: 'ಚಿಂತೆಗೆ ಯಾವುದೂ ಕಾರಣವಿಲ್ಲ. ಬೇಗ ಗುಣವಾಗುತ್ತದೆ.' ಅಂತೂ ಅವನ ಕತೆ ಹೀಗೆ ಮುಗಿಯುತ್ತದೆ.

ವಿಚಿತ್ರವೆಂದರೆ ನೂರ ಅರವತ್ತು ಪುಟಗಳ ಈ ಕಾದಂಬರಿಯಲ್ಲಿ ಎಷ್ಟೊಂದು ಜನ ಸುಳಿದಾಡುತ್ತಾರೆ. ಆದರೆ ಒಬ್ಬರಿಗೂ ಹೆಸರಿಲ್ಲ. ಸ್ಥಳ, ಕಾಲ, ಅಧಿಕಾರ, ಕಾನೂನು, ಮಾತ್ಸರ್ಯ, ಪ್ರತೀಕಾರ, ಉದ್ರೇಕ, ಭ್ರಮೆ, ಸಾವು ಯಾವುದಕ್ಕೂ ಹೆಸರಿಲ್ಲ. ಎಲ್ಲ ಸಾಂಕೇತಿಕ. ಚಿತ್ರ ಮಾತ್ರ ಕೊನೆಗೆ ಅಚ್ಚುಕಟ್ಟಾಗಿ ಚೌಕಟ್ಟಿನಲ್ಲಿ ನಿಂತುಬಿಡುತ್ತದೆ.

ಬಡತನ, ಮೌಢ್ಯ, ಅತ್ಯಾಸೆ, ಅಜ್ಞಾನ, – ಇವೆಲ್ಲ ಮೂಡಿಸುವ ವಾಸ್ತವದ ಚಿತ್ರ. ಇದು ನಾಲ್ಕನೆಯ ಆಯಾಮ! ಯಾರಿಗೆ ತಾನೇ ಸಿಕ್ಕೀತು.

ಎರಡನೆಯ ಕಾದಂಬರಿ 'ನಿರಿಂದ್ರಿಯ'. ಇದು ಮೊದಲನೆಯ ಕಾದಂಬರಿಗಿಂತ ತುಂಬ ಭಿನ್ನವಾದುದು. ಮನೋವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಣೆ ಮಾಡಬೇಕಾದ ಹೊಸ ಬಗೆಯ ಕೃತಿ. ಮನೋವಿಜ್ಞಾನದ ತಳಹದಿಯನ್ನು ಹೊಂದಿದ ಅನೇಕ ಕೃತಿಗಳು ಕನ್ನಡದಲ್ಲಿ ಇವೆ. ಆದರೂ ಇದು ಅವುಗಳ ಹಾಗಿಲ್ಲ.

'ರೊಳ್ಳೀ' ಎಂಬ ಒಬ್ಬ ವ್ಯಕ್ತಿ ತನ್ನ 75ನೆಯ ವಯಸ್ಸಿನಲ್ಲಿ ಯಾವುದೋ ವೃತ್ತಿಯಿಂದ ನಿವೃತ್ತನಾದ ಮೇಲೆ ತನ್ನ ಬಾಳಿನ ಆವರೆಗಿನ ಆದ್ಯಂತಗಳನ್ನು ಮನಸ್ಸಿನಲ್ಲಿ ಮರುಕಳಿಸಿಕೊಂಡು ತನ್ನ ಆತ್ಮಾವಲೋಕನ ಮಾಡುವ ಕಥೆ ಇಲ್ಲಿದೆ. ಈ 'ನಿರಿಂದ್ರಿಯ' ಎಂಬ ಕಾದಂಬರಿಯಲ್ಲಿ ಇದು ಕೇವಲ ಅವಲೋಕನ ಮಾತ್ರವಲ್ಲ; ಒಂದು ವಿಧವಾದ ಆತ್ಮವಿಶ್ಲೇಷಣೆ ಕೂಡ. ಒಂದು ಘಟ್ಟದವರೆಗೆ ತಾನು ಮಾಡಿದ್ದೆಲ್ಲ ಸರಿಯಲ್ಲವೆ? ಎಂದು ತಿಳಿದಿರುವ ದೃಷ್ಟಿ. ಬಾಲ್ಯದ ಬಡತನ, ಆದರೆ ಹಳ್ಳಿಯಲ್ಲಿ ಎರಡು ಪ್ರಭಾವಿ ಸಂಸಾರಗಳಲ್ಲಿ ಒಂದಕ್ಕೆ ಸೇರಿದವನು. ಅವನಿಗೆ ಶಾಲೆಯಲ್ಲಿ ಆದ ಅವಮಾನ, ಬೇರೆಯ ಊರಿಗೆ ವಿದ್ಯಾಭ್ಯಾಸಕ್ಕೆ ಹೋದುದು. ಮುಂದೆ ಪ್ರೌಢಶಾಲೆಯ ಮಟ್ಟಕ್ಕೆ ಸರಿಯಾದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬೊಂಬಾಯಿಯಲ್ಲಿ ಕೆಲಸ ಹಿಡಿದುದು. ಅಲ್ಲಿ ಕಲಿತು ಕೆಲಸ ಮಾಡುತ್ತಿದ್ದ ಅಧಿಕಾರಗಳ ಮೇಲೇರಿ ಸಾಕಷ್ಟು ಹಣ ಸಂಪಾದಿಸಿದುದು, ಮಕ್ಕಳಿಗೆ ವಿದ್ಯಾಭ್ಯಾಸ ಮಾಡಿಸಿ, ಮದುವೆ ಮಾಡಿ ನೆಲೆ ನಿಲ್ಲಿಸಿದುದು, ಮನೆ ಕಟ್ಟಿದುದು, ಬ್ಯಾಂಕಿನಲ್ಲಿ ಸಾಕಷ್ಟು ಹಣ ಇಟ್ಟಿದ್ದು ಇತ್ಯಾದಿ. ಆದರೆ ಇದನ್ನೆಲ್ಲ ಮಾಡುವಾಗ ಹೆಂಡತಿಯ ಬಗ್ಗೆ, ಅವಳ ಮನಸ್ಸಿನ ಹರಿವಿನ ಬಗ್ಗೆ ಏನಾದರೂ ಒಮ್ಮೆ, ಒಂದು ಸೆಕೆಂಡಿನಷ್ಟು ಕಾಲ ಆಲೋಚನೆ ಮಾಡಿದ್ದನೆ? ಎಂಬುದಕ್ಕೆ ಉತ್ತರವಿಲ್ಲ. ಅವಳಿಗೇನು ಕಡಿಮೆ, ಒಡವೆ ವಸ್ತ್ರ ಬೇಡ, ಊಟ ಉಪಚಾರದ ಬಗ್ಗೆ ಆಲೋಚನೆ ಮಾಡಿದ್ದನೆ? ಹಣವನ್ನು ಜಮಾಯಿಸಿ ಬ್ಯಾಂಕಿನಲ್ಲಿ ಬಡ್ಡಿಗೆ ಹಾಕುವುದನ್ನು ಬಿಟ್ಟು ತಾನಾದರೂ ಸಂಸಾರದಲ್ಲಿ ಸುಖಪಟ್ಟನೆ? ಹೆಂಡತಿಗೆ ಏನಾದರೂ ಸಂತೋಷಪಡಿಸಿದನೆ? ಉತ್ತರವೇ ಇಲ್ಲ ಈ ಪ್ರಶ್ನೆಗಳಿಗೆ. ನಿವೃತ್ತನಾದ ಮೇಲೆಯೇ ಯಾವುದಾದರೂ ಬೇರೆಯ ಕೆಲಸವನ್ನು ಹುಡುಕಿ ಮತ್ತಷ್ಟು ಸಂಪಾದಿಸುವ ದೃಷ್ಟಿಯೇ ಹೊರತು ಬಾಳಿನ ಸುಖದ ಕಡೆಗೆ ಗಮನವೇ ಹರಿಸದ ಧನಪಿಶಾಚಿ ಆತ. ಇಂಥವನ ನಾದಿನಿ ಮತ್ತು ತನ್ನ ಷಡ್ಡಕನ ಮನೆಗೆ ಹೋಗಿ ಅವನಿಂದ ಮತ್ತೊಂದು ಉದ್ಯೋಗವನ್ನು ಗಳಿಸುವ ಯೋಚನೆ ಅವನಿಗೆ. ಅಲ್ಲಿಗೆ ಹೋದರೆ ಆ ಮನೆ ಸಂತೋಷದ ಸಂಸಾರದ ಮನೆ. ಹೆಂಡತಿ ಅನಕ್ಷರಸ್ಥೆಯಾದರೆ ನಾದಿನಿ ತುಂಬ ಓದಿಕೊಂಡು ವ್ಯವಹಾರದಲ್ಲಿ ದಕ್ಷತೆ ಪಡೆದ ಗೃಹಿಣಿ. ಆ ದಂಪತಿಗಳು ಈ ಗಂಡ ಹೆಂಡಿರನ್ನು ಕಂಡು ಪ್ರೀತಿಯಿಂದಲೇ ನಡೆದುಕೊಂಡರು. ತನ್ನ ಷಡ್ಡಕನಿಗೆ ದರ್ಪ, ಅಹಂಕಾರ ತನ್ನನ್ನು ಯಾವುದಕ್ಕೂ ಲೆಕ್ಕಿಸದವ ಎಂಬ ಯೋಚನೆ ಇವನಿಗೆ. ಉದ್ಯೋಗಿಗಳ ಬದಲು ಇತರ ಉಚಿತ ಗೌರವಯುತವಾದ ಕ್ರಮಗಳನ್ನು ಆತ ತಿಳಿಸಿದರೂ ಅದನ್ನೊಪ್ಪದ, ತಿಂಗಳಿಗೆ ಸರಕಾರಿ ಸಂಬಳದಂತೆ ಹಣಬರುವ ಕೆಲಸವೇ ಆಗಬೇಕು. ಅಧಿಕಾರಿಯ ದರ್ಪ ಇರಬೇಕೆಂಬ ಸುಳ್ಳು ಗೌರವದ ಬಯಕೆ.



ಇದು ಸಿಗದಾಗ ಗಂಡ ಹೆಂಡತಿ ಊರಿಗೆ ಹಿಂದಿರುಗುತ್ತಾರೆ. ನಾದಿನಿ ತನ್ನ ಅಕ್ಕನನ್ನೂ ಭಾವನನ್ನೂ ತುಂಬ ಪ್ರೀತಿ ಗೌರವಗಳಿಂದ ಕಂಡು ಅವರಿಗೂ ಅವರ ಮಕ್ಕಳು ಸೊಸೆಯರಿಗೂ ಉಡುಗೊರೆ ಕೊಟ್ಟು ಕಳುಹಿಸಿದರೂ ಅವನಿಗೆ ತೃಪ್ತಿ ಇಲ್ಲ. ಈ ಸಂಸಾರದ ಸುಖ, ಶಾಂತಿ, ಸಮಾಧಾನ, ಮರ್ಯಾದೆ, ಘನತೆ ಇವನ್ನು ಕಂಡು ರೊಳ್ಳಿಯ ಮನಸ್ಸು ಛಿದ್ರವಾಗುತ್ತದೆ. ಅವನು ಹೇಳಿಕೊಳ್ಳುತ್ತಾನೆ; 'ನೀನು ಮಾಡಿದ್ದೇನು? ನೋಡಿಕೋ – ಹೌದು, ನಾನು ಪಾಪಿ, ನಾನು ನೀಚ, ಮಾನವತೆಯನ್ನು ಮಣ್ಣು ಪಾಲಾಗಿಸಿದ್ದೆ. ನಾನು ತಲೆ ಎತ್ತಿ ನಿಲ್ಲಬೇಕಿತ್ತು. ತಂದೆಯಾದರೇನು? ಯಾರಾದರೇನು? ಸೋದರ ಮಾವನನ್ನು ಪ್ರತಿಭಟಿಸಬೇಕಿತ್ತು. ಈ ದೌರ್ಬಲ್ಯ, ಈ ಕ್ಲೈಬ್ಯ– ಇದನ್ನೇ ನಾನು ಪೌರುಷ ಎಂದು ಭಾವಿಸಿದೆ. ನಾನು ಅನ್ಯಾಯ ಮಾಡಲಿಲ್ಲ ಎಂದು ನನ್ನ ಪೌರುಷವನ್ನು ಕೊಚ್ಚಿಕೊಂಡೆ. ನಿನ್ನ ನೈತಿಕತೆಯಲ್ಲಿ ಆನಂದವಿದೆಯೆ? ನಿನ್ನ ನೈತಿಕತೆ ಮುಕ್ತವಾಗಿದೆಯೆ? ನಿನ್ನ ನೈತಿಕತೆ ಮುಕ್ತವಾಗಿದೆಯೆ? ನಿನ್ನ ನೈತಿಕತೆ ನಿನ್ನ ಭಯದ ಸಂತಾನ, ನಪುಂಸಕನ ಸಂಯಮ. ಅದಕ್ಕೇನು ಬೆಲೆ? ಏನು ಅರ್ಥ? ಸುಳ್ಳನ್ನು ಆಡಲಿಲ್ಲ. ಆದರೆ ನೀನು ಸತ್ಯವನ್ನು ಪ್ರೀತಿಸಿದೆಯಾ? ಬಾಲ್ಯದಲ್ಲಿ ತಾರುಣ್ಯಕ್ಕಾಗಿ ಸಿದ್ಧತೆಯನ್ನು ನಡೆಸಿದೆ. ನೀನು ಬಾಲ್ಯವನ್ನು ಬದುಕಲಿಲ್ಲ. ನೀನು ಬಾಲಕನಾಗಿರಲಿಲ್ಲ. ಬದುಕು ನಿನ್ನಿಂದ ದೂರವಾಯಿತು. ನೀನು ಬದುಕನ್ನು ಒಂದು ವಸ್ತು ಎಂದು ಭಾವಿಸಿದೆ.

ನಿನ್ನ ಬದುಕು ಸಮಗ್ರವಾಗಿ ಬೆಳೆಯಲಿಲ್ಲ. ನೀನು ನಿರಿಂದ್ರಿಯ. ನಿರಿಂದ್ರಿಯ, ನಿರಿಂದ್ರಿಯ. ನನ್ನ ಬದುಕಿನಲ್ಲಿ ನಾನು ಕಣ್ಣು ತೆರೆದು ನಡೆಯಲಿಲ್ಲ. ಸುಮ್ಮನೆ ಹೆದರಿದೆ.'

ಆದರೆ ಮತ್ತೆ ಅವನಿಗೆ ಅನಿಸುತ್ತದೆ – 'ನಾನು ಕಣ್ಣು ತೆರೆದು ನಡೆದೆ. ಆದುದರಿಂದ ಸತ್ಯವನ್ನೇ ಕಂಡೆ. ಹಾಗಾದರೆ ತನ್ನ ಷಡ್ಡ, ವಿಜಯರಾಯ– ಅವನ ಬದುಕು ಹೀಗೇಕೆ? ನನ್ನ ಬದುಕು ಹೀಗೇಕೆ?' ಇಂಥ ಆಲೋಚನೆ ಮುಂದುವರಿದು ಅವನು ಏಕಾಂಗಿಯಾಗಿಬಿಡುತ್ತಾನೆ. ಮನೋರೋಗಿಯಾಗುತ್ತಾನೆ. ಹೆಂಡತಿಯೇ ಕೊನೆಗೆ ಮಾನಸಿಕ ಚಿಕಿತ್ಸೆಗೆ ಒಳಗುಮಾಡುತ್ತಾಳೆ. ರೊಳ್ಳಿ ನಿಧಾನವಾಗಿ ಚೇತರಿಸಿಕೊಳ್ಳುತ್ತಾನೆ. ಎಳೆಯ ಮಗುವಿನಂತೆ ಆಗುತ್ತಾನೆ. ಆಗ ಅವನ ಹೆಂಡತಿಯೇ ತಾಯಿಯಾಗುತ್ತಾಳೆ. ಹಾಸಿಗೆಯಲ್ಲಿ ತನ್ನೊಡನೆ ಮಲಗಿರುವವನು ಗಂಡನಲ್ಲ. ತನ್ನ ಮಗು ಎಂದು ಭಾಸವಾಗುತ್ತದೆ. ಅವಳು ಮಾತೃವಾತ್ಸಲ್ಯದಿಂದ

*(ಪುಟ 21ಕ್ಕೆ)*

# ಊರುಗೋಲಿಲ್ಲದ ನೂರು

'ನನ್ನ ಜೀವನದಲ್ಲಿ ಟರ್ನ್ಸ್ ಇಲ್ಲ, ಟ್ವಿಸ್ಟೂ ಇಲ್ಲ, ಅದೊಂದು ನೇರ ರೇಖೆ. ಅಂದುಕೊಂಡಿದ್ದು ಮತ್ತು ಆಗಿದ್ದರ ನಡುವೆ ಹೊಂದಾಣಿಕೆ ಇದೆ. ಗುರಿ ಮತ್ತು ಮಾರ್ಗದ ಗೊಂದಲ ಇಲ್ಲವೇ ಇಲ್ಲ' – ಹೀಗೆಂದು ಹೇಳಿದವರು ಪದಗಳ ಪತ್ತೇದಾರ, ನಾಡೋಜ ಜಿ ವೆಂಕಟಸುಬ್ಬಯ್ಯ. ಇದೇ ತಿಂಗಳು 23ಕ್ಕೆ ಅವರು ನೂರನೆಯ ವರ್ಷದಲ್ಲಿ ಕಾಲಿಡುತ್ತಾರೆ. ಈ ಸೆಂಚುರಿಯು ಸಂಭ್ರಮ ಅವರಲ್ಲಿ ವಿಶೇಷವಾಗಿಯೇನೂ ಇಲ್ಲ. ಏಕೆಂದರೆ ಅವರು ಸರಳ, ಸಂತೃಪ್ತ ಜೀವಿ, ಸದಾ ಒಳಿತು ಬಯಸುವ, ಕೃತಜ್ಞತೆಯನ್ನು ಒಂದು ಮೌಲ್ಯವೆಂದು ಭಾವಿಸಿರುವ ಅವರಲ್ಲಿ ಖುಷಿ ಎನ್ನುವುದು ಬಹುಕಾಲದಿಂದ ಲಂಗರು ಹಾಕಿದೆ. ಜೀವನವನ್ನು ನೋಡುವ ಬಗೆಯಲ್ಲೇ ಅವರಲ್ಲಿ ಒಂದು ಆರೋಗ್ಯಕಾರಿ ಮನೋಸ್ಥಿತಿ ಇದೆ. ದೀರ್ಘಾಯು ಎಂಬುದು ನಮ್ಮ ವಂಶದಿಂದ ಬಂದಿರುವ ವಂಶವಾಹಿ. ನಮ್ಮ ತಂದೆ 95, ತಾಯಿ ಸುಬ್ಬಮ್ಮ 107 ವರ್ಷ ಬದುಕಿದ್ರು. ನಾನು ನೂರು ವರ್ಷ ಬದುಕಬೇಕು ಎಂದು ತಪಸ್ಸು ಮಾಡಲಿಲ್ಲ. ಪಥ್ಯ ಮಾಡಲಿಲ್ಲ. ಆಯುರ್ವೇದ ಮದ್ದು ನುಂಗಲಿಲ್ಲ. ಯಾವ ಪ್ರಯತ್ನವನ್ನೂ ಮಾಡಲಿಲ್ಲ. ಇಷ್ಟು ದಿನ ಇರ್ತೀನಿ ಎಂದುಕೊಂಡಿರಲೂ ಇಲ್ಲ. ಎಲ್ಲರೂ ಲೆಕ್ಕ ಹಾಕೋದಕ್ಕೆ ಶುರು ಮಾಡಿದಾಗ ಮಾತ್ರ ನೆಪವಾಗುವ ವಿಷಯವಿದು ಎನ್ನುವ ನಿರುಮ್ಮಳ ಸೊಲ್ಲು ಅವರದು.

**ಬಿಳಿ ಮುಗಿಲ ತೊಟ್ಟಿಲಲಿ . . .**

ಯಾವುದೋ ಅತಿಯಾಗಬಾರದು. ಬೆರೆಯವರಿಗೆ ಕೈಲಾದಷ್ಟೂ ಸಹಾಯ ಮಾಡಬೇಕು. ಸಮಾಜಮುಖಿಯಾಗಿ ಬಾಳಬೇಕು ಎಂದು ತನ್ನ ತಂದೆ ಗಂಜಾಂ ತಿಮ್ಮಣ್ಣಯ್ಯ ಹೇಳುತ್ತಿದ್ದರು (ಶ್ರೀರಂಗಪಟ್ಟಣಕ್ಕೆ ಅಂಟಿಕೊಂಡಿರುವ ಗ್ರಾಮ ಗಂಜಾಂ) ಅದರಂತೆ ನಡೆಯುತ್ತಿದ್ದರು. ನಾನು ಅದನ್ನೂ ಪಾಲನೆ ಮಾಡುತ್ತಿದ್ದೇನೆ ಅಷ್ಟೆ. ನನ್ನ ಆಹಾರ ಅಭ್ಯಾಸ ಕೂಡ ಸರಳ. ತರಕಾರಿ, ಅನ್ನ, ಸಾರು, ಪಲ್ಯ, ಹಣ್ಣು, ಕುರುಕಲು ತಿಂಡಿ– ಇದೇ ನನ್ನ ಮೆನು. 2 ವರ್ಷದಿಂದ ರಾತ್ರಿ ಊಟ ಬಿಟ್ಟಿದ್ದೀನಿ. ಮುಂಜಾನೆ ನಾಲ್ಕೂವರೆಗೆ ಏಳ್ತೀನಿ. ಒಂದೂವರೆ ಗಂಟೆ ವಾಕಿಂಗ್, ವ್ಯಾಯಾಮ, ಸ್ನೇಹಿತರ ಜೊತೆ ಮಾತು–ಕತೆ, 9ರಿಂದ 2 ಗಂಟೆವರೆಗೆ ಅಧ್ಯಯನ, ಬರೆಹ, 2 ರಿಂದ 4 ಗಂಟೆವರೆಗೆ ಹೆಂಡತಿ ಜೊತೆ ಹಳೆಯಪಳೆಯ ವಿಷಯಗಳ ಕುರಿತು ಸಂಭಾಷಣೆ, ಎಂದು ನೂರು ಸಂವತ್ಸರಗಳ ದಿನಚರಿಯನ್ನು ಅವರು ಬಿಡಿಸಿಟ್ಟರು.

**ಏಸೊಂದು ನಗೆ ಇತ್ತಾ. . . .**

ಹೆಜ್ಜೆಗಳ ಮೇಲೆ ವಯಸ್ಸಿನ ತೂಕ ಬಿದ್ದಿಲ್ಲ. ಬೆನ್ನು ಬಾಗಿಲ್ಲ. ನೆನಪುಗಳು ಕೈಕೊಡುವುದಿಲ್ಲ. ನೂರಾದರೂ ಊರುಗೋಲು ಬಂದಿಲ್ಲ. ಕೆದಕಿಕೊಂಡರೆ ಕೈಗೆ ಸಿಗುವುದೆಲ್ಲ ಚಿನ್ನ (ಏನು ಸಿಕ್ಕರೂ ಅದು ಬಂಗಾರ ಎಂದೇ ಅವರು ಬಗೆಯುತ್ತಾರೆ). 'ಸಾರ್, ಜೀವನ ಚರಿತ್ರೆ ಬರೆಯೋ ಆಸೆ ಇದೆಯಾ?' ಅಂದ್ರೆ, ಅಯ್ಯೋ, ಅಷ್ಟು ದೊಡ್ಡ ಮನುಷ್ಯ ನಾನಲ್ಲ' ಎಂದು ಬಿಡುತ್ತಾರೆ. ಕೆಲವು ಹೇಳಿಕೊಳ್ಳಲೇಬೇಕಾದ ವಿಷಯಗಳಿವೆ. ಅದನ್ನು ಘಟನಾ ಸರಣಿಯಂತೆ ಬರೆಯಬೇಕು ಎಂದು ಇತ್ತೀಚೆಗೆ ಅನ್ನಿಸ್ತಾ ಇದೆ ಎಂದರು. ಕಾಲೇಜು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ನಿಘಂಟಿನ ಕೆಲಸ. ಇವುಗಳಲ್ಲಿ ನನ್ನ ನೂರು ವರ್ಷ ಹಂಚಿ ಹೋಗಿದೆ. 40 ವರ್ಷ ವಿದ್ಯಾರ್ಥಿಗಳ ಜೊತೆ ಒಡನಾಡಿರುವೆ. ಅದೊಂದು ಸುಖವಾದ ಕಾಲ ಎಂದು ಜೀವಿ ಮಾತನ್ನು ನಿಲ್ಲಿಸಿ ಕಣ್ಣು ಮುಚ್ಚಿದರು. ಕಣ್ಣೀರಾದರು. ಅದರಿಂದ ಜಳಕಗೊಂಡು ಬಂದ ಮಾತು; "ಶಿಕ್ಷಕನಿಗೆ ವಿದ್ಯಾರ್ಥಿಗಳ ಜೊತೆ ಒಂದು ಎಮೋಷನಲ್ ಬಾಂಡ್ ಇತ್ತು. ಕನ್ನಡದಲ್ಲಿ ಏನ್ ಹೇಳ್ತೀವಿ? ಭಾವನಾತ್ಮಕ ನಂಟು. . . ಉಹೂಂ, ಅದೊಂದು ಅಟ್ಯಾಚ್‌ಮೆಂಟ್, ಹೃದಯಕ್ಕೆ ಮುಟ್ಟುವಂಥದ್ದು" ಎಂದರು. "ಅದನ್ನು ನಮಗೆ ಟಿ ಎಸ್ ವೆಂಕಣ್ಣಯ್ಯ, ಎ.ಆರ್.ಕೃಷ್ಣ ಶಾಸ್ತ್ರಿಯಂತಹ ಮೇಷ್ಟ್ರುಗಳು ತೋರಿಸಿಕೊಟ್ಟರು. ಹೈಸ್ಕೂಲ್ ಹೆಡ್‌ಮಾಸ್ಟ್ರು ರಾಜೀವಲೋಚನ ಅಂತ ಇದ್ರು. ಅದು ನನ್ನ ಜೀವನದ ತುಂಬಾ ಸಂತಸದ ಗಳಿಗೆಗಳು" ಎಂದು ಮತ್ತೆ ಕಣ್ಣು ಮುಚ್ಚಿದರು. ಭಾವದ ಅಲೆಗಳ ಮೇಲೆ ತೇಲಿದರು. ನಾನು ತುಂಬ ಎಮೋಷನಲ್ ಎಂದು ತೆಳುವಾಗಿ ನಕ್ಕರು. ಮುಖ ಮತ್ತೆ ಒರೆಸಿಕೊಂಡರು.

**ಗುರುವೇ ನಮಃ**

ನನ್ನ ವಿದ್ಯಾರ್ಥಿಗಳನ್ನು ಈಗಲೂ ಜ್ಞಾಪಿಸಿ ಕೊಳ್ಳುವೆ. ದೊಡ್ಡ ದೊಡ್ಡ ಅಧಿಕಾರಿಗಳಾಗಿದ್ದಾರೆ. ಎಂ.ವಿ.ಕೃಷ್ಣಪ್ಪ, ಬಿ.ರಾಚಯ್ಯ, ಬಿಇಎಂಎಲ್ ಡೈರೆಕ್ಟರ್ ಆಗಿದ್ರು ಒಬ್ರು. ಎಂ ಬಿ ಸಿಂಗ್, ವೈ ಎನ್ ಕೆ, ಕೆ. ಸತ್ಯನಾರಾಯಣ, ದೊರೆ–ಭಗವಾನ್, ಇವ್ರೆಲ್ಲ ನನ್ನ ಶಿಷ್ಯರೇ, 1973 ರಲ್ಲಿ ನಾನು ರಿಟೈರ್ಡ್ ಆದೆ. ಸಾವಿರಾರು ಮಂದಿ ಕಲಿತವರು ಇದ್ದಾರೆ ಎನ್ನುತ್ತ ಅವರು ಪಾಠ ಮಾಡುವ ಕಾಲದಿಂದ ಪಾಠ ಕೇಳಿಸಿಕೊಂಡ ಕಾಲಕ್ಕೆ ಜಿಗಿದರು. ಕೃಷ್ಣ ಶಾಸ್ತ್ರಿ, ಯಾಸ್ಕ ಪಂಡಿತನ 'ನಿರುಕ್ತ' ಪಾಠ ಮಾಡಿದರು. ನಿಘಂಟು ಕುರಿತ ಆಸಕ್ತಿ ಬೆಳೆದದ್ದು ಅವರಿಂದಲೇ, ಅಧ್ಯಾಪನ, ಸಂಶೋಧನೆ, ಪದಾರ್ಥ



ಶೋಧನೆ– ಹೀಗೆ ಎಲ್ಲವೂ ಒಂದಕ್ಕೊಂದು ತಳುಕು ಹಾಕಿಕೊಂಡ ಕ್ಷೇತ್ರಗಳಲ್ಲಿ ನಾನು ತೊಡಗಿಕೊಂಡೆ.

ವಿಜಯ ಕಾಲೇಜು ಹಾಗೂ ಮೈಸೂರು ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದೆ. ಅದರಲ್ಲಿ ಒಂದಿಷ್ಟು ಕೆಲಸ ಮಾಡಿದೆ. ಆದರೆ ಈ ಸಮಾಜ ಕೊಟ್ಟಿದ್ದಕ್ಕಿಂತ ಹತ್ತು ಪಟ್ಟು ಮರಳಿ ಕೊಟ್ಟಿದೆ. ನನ್ನ ಜೀವನ ಆದ್ರೂ ಹೇಗಿತ್ತು? ಎಂದು ಪ್ರಶ್ನೆ ಕೇಳಿಕೊಂಡ ಅವರು, ತಮ್ಮ ದೀರ್ಘ ಜೀವಿತದ ಮತ್ತೊಂದು ಮಜಲಿಗೆ ಜೀಕಿಕೊಂಡರು.

**ಕಲ್ಲರಳಿ ಹೂವಾಗಿ**

ನಮ್ಮ ತಂದೆ ಮೈಸೂರು ಆಸ್ಥಾನ ಪಂಡಿತರಾಗಿದ್ದರು ನಿಜ. ವೃತ್ತಿಯಲ್ಲಿ ಅವರು ಹೈಸ್ಕೂಲ್ ಮೇಷ್ಟು. ನಿವೃತ್ತರಾದಾಗ ಅವರಿಗೆ ಬರುತ್ತಿದ್ದ ಸಂಬಳ 60 ರೂಪಾಯಿ. 9 ಜನ ಮಕ್ಕಳು. ಇವರಿಗೆಲ್ಲ ವಿದ್ಯಾಭ್ಯಾಸ ಮಾಡಿಸಬೇಕಿತ್ತು. ಈಗ ಇಬ್ಬರೂ ಇದ್ದೇವೆ. ಎಲ್ಲರೂ ಶಿಕ್ಷಣ ಇಲಾಖೆಯಲ್ಲಿ ಕೆಲಸ ಮಾಡಿರುವವರೇ. ನಾನು ಕಷ್ಟದಲ್ಲೇ ಬೆಳೆದೆ. ಎಂ.ಎ. ಯಲ್ಲಿ ಚಿನ್ನದ ಪದಕ

ಕೆ. ವೆಂಕಟೇಶ್

ಗಳಿಸಿದೆ. ಮಹಾರಾಜ ಕಾಲೇಜಿನಲ್ಲಿ ಅಧ್ಯಾಪಕನಾದೆ. ಗೋಪಾಲಸ್ವಾಮಿ ಅಯ್ಯಂಗಾರ್ ಅಂತ ಒಬ್ರು ಮೇಷ್ಟ್ರು ಇದ್ರು. ಅವಕಾಶ ವಂಚಿತರು, ವಿದ್ಯೆಯಲ್ಲಿ ಮುಂದೆ ಬಂದಿರುವ ಜಾತಿ ಸಮುದಾಯಗಳಿಗೆ ಇಂಬು ಕೊಡುವ ಕೆಲಸವನ್ನು ಅಯ್ಯಂಗಾರ್ ಜೊತೆ ಸೇರಿಕೊಂಡು ಮಾಡ್ತಾ ಇದ್ವಿ.

**ಕರಿಯಪ್ಪನ ಕತೆ**

ಕರಿಯಪ್ಪ ಸವಿತಾ ಸಮಾಜಕ್ಕೆ ಸೇರಿದ ವಿದ್ಯಾರ್ಥಿ. ಪಿಯುಸಿ ಪಾಸ್ ಆದ. 'ಏನ್ ಮಾಡ್ಲಿ ಗುರುಗಳೇ?' ಎಂದ. 'ಒಂದು ಡಿಗ್ರಿ ತಗೊ, ಒಳ್ಳೇದಾಗುತ್ತೆ' ಎಂದೆ. "ಮೂರು ವರ್ಷ ಜಾಸ್ತಿಯಾಗುತ್ತಲ್ಲ" ಅಂದ. "ಇಲ್ಲ, ನೀನು ಅದನ್ನು ಮುಗಿಸು ಎಂದೆ. ಫಸ್ಟ್ ಕ್ಲಾಸ್‌ನಲ್ಲಿ ಪಾಸ್ ಮಾಡಿಕೊಂಡು ಬಂದ. 'ನೋಡೋ, ನಿನ್ನ ಜಾತಿಯಲ್ಲಿ ನೀನೇ ಮೊದಲ ಪಧವೀದರ. ಈ ವಿಷಯ ಗಮನದಲ್ಲಿಟ್ಟುಕೊಂಡು ಮಿರ್ಜಾ ಇಸ್ಮಾಯಿಲ್ ಅವರಿಗೆ ಒಂದು ಪತ್ರ ಬರಿ, ಅವರನ್ನು ಹೋಗಿ ಕಾಣು, ಈ ವಿಷಯ ಹೇಳು' ಎಂದೆ. ಆತ ಹಾಗೇ ಮಾಡಿದ. ಮಿರ್ಜಾ ಅವರು, ಶಹಬ್ಬಾಸ್ ಎಂದರು. ಆತನಿಗೆ ಅಮಲ್ದಾರ್ ಕೆಲಸ ಕೊಟ್ಟರು. ಕರಿಯಪ್ಪ ಡಿಗ್ರಿ ಆಗಿ ನಿವೃತ್ತನಾದ. ಆತನ ಕುಟುಂಬದ ಪರಿಸ್ಥಿತಿ ಬದಲಾಯ್ತು. ಮಕ್ಕಳೆಲ್ಲ

ಓದಿ ವಿದ್ಯಾವಂತರಾಗಿ ಒಳ್ಳೆ ಕೆಲಸ ಗಳಿಸಿದರು. ಆತನ ಮನೆಯ ಅಕ್ಕಪಕ್ಕದವರೂ ಬದಲಾದರು. ಇದೆನ್ನೆಲ್ಲ ಜ್ಞಾಪಿಸಿಕೊಂಡಾಗ ಎಷ್ಟೊಂದ್ ಖುಷಿಯಾಗುತ್ತೆ ಎಂದರು. 'ಸಾರ್, ಇವತ್ತು ಪ್ರತಿಭೆ, ಶಕ್ತಿ ಇದ್ರೂ ಕೆಲಸ ಸಿಗೋಲ್ಲ' ಎಂದಾಗ ಮತ್ತೆ ಅವರು ಭಾವುಕರಾದರು. ಮೌನಿಯಾದರು. ಸಾವರಿಕೊಂಡು 'ನಿಜ, ಇವತ್ತಿನದನ್ನು ನೆನಸಿಕೊಂಡ್ರೆ ಬೇಜಾರಾಗುತ್ತೆ' ಎನ್ನುತ್ತ ಮಾತಿಗೊಂದು ಅಲ್ಪ ವಿರಾಮ ಕೊಟ್ಟರು.

**ರಾಮಕೃಷ್ಣ ಸ್ಟೂಡೆಂಟ್ಸ್ ಹೋಮ್**

ಮತ್ತೆ ಅವರು ಸರ್ಕಸ್‌ನಲ್ಲಿ ಹಗ್ಗ ಹಿಡಿದು ಒಂದು ಕಡೆಯಿಂದ ಮತ್ತೊಂದು ಕಡೆಗೆ ಹಾರುವ ಪಟುವಿನಂತೆ ತಾವು ಸಂಗಡಿಗರ ಜೊತೆ ಕಳೆದ 20 ವರ್ಷಗಳಿಂದ ಪೊರೆಯುತ್ತ ಬಂದಿರುವ ಶ್ರೀ ರಾಮಕೃಷ್ಣ ಸ್ಟೂಡೆಂಟ್ಸ್, ಹೋಮ್‌ನ ತುದಿ ಹಿಡಿದುಕೊಂಡು ಆ ಲೋಕವನ್ನು ಜಗ್ಗಿ ಅನಾವರಣ ಮಾಡಿದರು. ನಾನು ಅದರ ಅಧ್ಯಕ್ಷ ಪದವಿ ಒಪ್ಪಿಕೊಂಡಾಗ ಅದೊಂದು ಬಡ ಹಾಸ್ಟೆಲ್. 11 ಲಕ್ಷ ರೂಪಾಯಿ ನಿಧಿ ಇತ್ತು. ಈಗ ಎರಡೂವರೆ ಕೋಟಿ ರೂಪಾಯಿ ಇದೆ. 50 ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಲ್ಲಿ ಆಶ್ರಯ ಕೊಟ್ಟಿದ್ದೇವೆ. ಈಗ ಎರಡೂವರೆ ಕೋಟಿ ರೂಪಾಯಿ ಇದೆ. 50 ಬಡ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅಲ್ಲಿ ಆಶ್ರಯ ಕೊಟ್ಟಿದ್ದೇವೆ. ಈಗ ಇದೊಂದು ಫೈವ್ ಸ್ಟಾರ್ ಹಾಸ್ಟಲ್ ಆಗಿದೆ. ಇಲ್ಲಿಂದ ಓದಿಕೊಂಡು ಹೋದವರೇ ಅದಕ್ಕೆ ದುಡ್ಡು ಕೊಡುತ್ತಿದ್ದಾರೆ. ಇದರ ವಾರ್ಷಿಕೋತ್ಸವಕ್ಕೆ ಇಲ್ಲಿ ಕಲಿತವರು ತಮ್ಮ ಮಕ್ಕಳು, ಮೊಮ್ಮಕ್ಕಳ ಸಮೇತ ಬರುತ್ತಾರೆ. ಸ್ವಾತಂತ್ರ್ಯ ಹಬ್ಬದಂದು ಹಾಸ್ಟೆಲ್‌ನ ಬೆಸ್ಟ್ ಸ್ಟೂಡೆಂಟ್‌ಗಳಿಗೆ 10 ಸಾವಿರ ರೂ ಬಹುಮಾನ ಕೊಟ್ಟೆವು. ಎಂಬುದನ್ನು ಖುಷಿ, ಅಭಿಮಾನದಿಂದ ಹೇಳಿಕೊಂಡರು. ಪಡೆದುಕೊಂಡ ಕೈಗಳು ಮರಳಿ ಕೊಡುತ್ತವೆ. ಕಷ್ಟದಲ್ಲಿರುವವರಿಗೆ ಸಹಾಯ ಮಾಡಿದರೆ ಅವರು ಅದನ್ನು ಮರೆಯುವುದಿಲ್ಲ. . . ನಮ್ಮಲ್ಲಿನ್ನೂ ಸಜ್ಜನಿಕೆ ಉಳಿದಿದೆ. ನಿರಾಶರಾಗಬೇಕಾದ ಅಗತ್ಯ ಇಲ್ಲ. 25–40 ವಯೋಮಾನದ ಯುವಕ ಯುವತಿಯರಿಗೆ ಭ್ರಷ್ಟಾಚಾರ ಕಂಡರೆ ಅಸಹ್ಯ ಇದೆ. ಅವರ ಕೈಗೆ ರಾಜಕೀಯ ಅಧಿಕಾರ ಸಿಕ್ಕರೆ ಅವರು ಒಳ್ಳೆಯ ಬದಲಾವಣೆ ತರುತ್ತಾರೆ. ಕೆಟ್ಟವರು 20 ಪರ್ಸೆಂಟ್ ಇರ್ತಾರೆ. ದ್ವೇಷ, ಕೆಡಕು, ಕೊಲೆ, ಸುಲಿಗೆ ಮಾಡ್ತಾರೆ ಎಂದು ತಮ್ಮ ತಕ್ಕಡಿಯಲ್ಲಿ ಒಳಿತು ಕೆಡಕುಗಳನ್ನು ತೂಗಿದರು ಜೀವಿ. ಒಳಿತನ್ನು ಕಾಣುವುದು ಮತ್ತು ಬಯಸುವುದು ಮತ್ತು ಮಾಡುವುದು ಈ ಹಿರಿಯ ಮನುಷ್ಯನ ಆರೋಗ್ಯದ ಗುಟ್ಟಿನಂತೆ ಕಂಡಿತು.

ನಿಮಗೆ ಯಾವುದರಿಂದ ಖುಷಿ ಆಗುತ್ತೆ, ಯಾವುದರಿಂದ ನೋವು ಆಗುತ್ತೆ ಎಂದಾಗ ಅಕ್ಕಪಕ್ಕದವರು ನೆಮ್ಮದಿಯ ಜೀವನ ನಡೆಸಿದಾಗ, ವಯಸ್ಸಾದ ತಂದೆ ತಾಯಿಗಳನ್ನು, ಮಕ್ಕಳು ಚೆನ್ನಾಗಿ ನೋಡಿಕೊಂಡಾಗ, ಅದನ್ನು ಕಂಡಾಗ ನನಗೆ ಸಂತೋಷ ಆಗುತ್ತೆ. ನನ್ನ ಮಗ ಅರುಣ ಹಾಗು ಸೊಸೆ ಹೇಮಾ ನನ್ನ ಜೊತೆ ಇದ್ದಾರೆ ಎನ್ನುವುದಕ್ಕಿಂತ, ಅವರ ಜೊತೆ ನಾನಿರುವೆ ಎಂದರು. ಸಣ್ಣ ಸಣ್ಣ ಸಂತೃಪ್ತಿ, ಖುಷಿ, ಕೃತಜ್ಞತೆಗಳು ಜೀವಿ ಅವರನ್ನು ಎತ್ತರದ ಮನುಷ್ಯನನ್ನಾಗಿಸಿದೆ.

**ಪ್ರೀತಿ ಎಂಬ ಮಾತ ಕೇಳಿ. . . .**

ಕೊಂಚ ಹಿರಿಜೀವದ ಜೊತೆ ತುಂಟಾಟ ಮಾಡೋಣ ಎಂದೆನಿಸಿತು. 'ಸಾರ್, ನಿಮ್ಮ ಕಾಲೇಜ್ ಡೇಸ್‌ನಲ್ಲಿ ಯಾರನ್ನಾದ್ರೂ ಲವ್ ಮಾಡಿದ್ರಾ?' ಎಂದಾಗ ಅವರು ಜೋರಾಗಿ ನಕ್ಕು ಬಿಟ್ಟರು. ನಮ್ಮ ಕಾಲೇಜಿನಲ್ಲಿ 300 ವಿದ್ಯಾರ್ಥಿಗಳಿದ್ದು, ಎಲ್ಲರೂ ಹುಡುಗರು. ಲವ್ವೆ ಇಲ್ಲ. ಅಫೇರೂ ಇಲ್ಲ. 20 ವರ್ಷಕ್ಕೆ ನನ್ನ ಸೋದರ ಮಾವನ ಮಗಳ ಜೊತೆ ಮದುವೆ ಆಯ್ತು. ಆಗ ಆಕೆಗೆ 11, ನನಗೆ 20 ವರ್ಷ ವಯಸ್ಸು. ಮದುವೆ ನಂತರ ಆಕೆಯ ಮುಖವನ್ನು 4 ವರ್ಷಗಳ ನಂತರ ನೋಡಿದೆ. ನಮ್ಮ ಮನೆಯಲ್ಲಿ ಎಲ್ಲರದೂ ಅರೇಂಜ್ಡ್ ಮ್ಯಾರೇಜ್. ಆರು ಮೊಮ್ಮಕ್ಕಳು ಅಮೇರಿಕದಲ್ಲಿದ್ದಾರೆ. ಅವರೂ ಕೂಡ ನಾವು ನೋಡಿದವರನ್ನೇ ಕೈ ಹಿಡಿದಿದ್ದಾರೆ. ಪ್ರೀತಿಯ ಮಾತಿನ ನಗು ಅವರ ಕೊಠಡಿಯಲ್ಲಿ ತುಂಬಾ ಹೊತ್ತು ಅವರ ಸುತ್ತ ಸುತ್ತಾಡಿಕೊಂಡಿತ್ತು.

ಕೃಪೆ: ವಿಜಯಕರ್ನಾಟಕ

## ...ಮೂರು ಕಾದಂಬರಿಗಳು

ಅವನ ಗದ್ದವನ್ನು ಹಿಡಿದು ಹಣೆಗೊಂದು ಮೆಲ್ಲನೆ ಮುದ್ದಿಟ್ಟಳು. ಅಪ್ಪಿಕೊಂಡು ತಲೆಯನ್ನು ಮೂಸಿದಳು. ಎಳೆಯ ಮಕ್ಕಳ ನೆತ್ತಿಯನ್ನು ತಾಯಿ ಮೂಸುವಂತೆ. 'ರೊಳ್ಳಿ ಮೆಲ್ಲನೆ ನಕ್ಕ' ಎಂದು ಕಾದಂಬರಿ ಮುಗಿಯುತ್ತದೆ.

ಕಾದಂಬರಿಯಲ್ಲಿ ಸರಳವಾದ ಭಾಷೆಯಿದೆ. ಎಲ್ಲೂ ಅವಸರದ ಬರಹವಿಲ್ಲ. ಬಯಲುಸೀಮೆಯ ನದಿಯಂತೆ ನಿರಾಳವಾಗಿ ಹರಿಯುತ್ತದೆ. ಆದರೆ ರೊಳ್ಳಿಯ ಮತ್ತು ಅವನ ಹೆಂಡತಿಯ ಮನಸ್ಸಿನಲ್ಲಿ ಆದ ಕ್ಷೋಭೆಯ ಚಿತ್ರ ಗಾಢವಾಗಿದೆ. ಇದೊಂದು ತುಂಬ ಯಶಸ್ವಿಯಾದ ಕಾದಂಬರಿ.

ಕೊನೆಗೂ ಈ ಕಾದಂಬರಿಯಲ್ಲಿ ಗೆಲ್ಲುವವಳು ವೃಂದಾ – ನಾಯಕನ ಹೆಂಡತಿ!

ಮೂರನೆಯ ಪುಸ್ತಕ 'ಬಯಲು–ಬಸಿರು'.



ಇದನ್ನು ಕಾದಂಬರಿ ಎಂದು ಕರೆಯಲು ಸ್ವಲ್ಪ ಹಿಂಜರಿಯಬೇಕಾಗುತ್ತದೆ. ಇದೊಂದು ಬಗೆಯ ಭಾರತದ ಸಂತ ಸಮುದಾಯದ ವಿಶ್ಲೇಷಣೆ. 'ಸಂತ' ಶಬ್ದಕ್ಕೆ ಯತಿ, ಮುನಿ, ವಿರಾಗಿ ಮುಂತಾಗಿ ಅರ್ಥಗಳಿವೆ. ಆದರೆ, ಇಂಗ್ಲೀಷಿನಲ್ಲಿರುವ 'Godman' ಎಂಬ ಶಬ್ದಕ್ಕೆ ಸಮಾನವಾಗುವುದಿಲ್ಲ. ಭಾರತದಲ್ಲಿ ಈಗ ಈ 'Godman' ವ್ಯಾಪ್ತಿ, ಪ್ರಭಾವ ಪರಿಣಾಮಗಳು ಅಗಾಧವಾಗಿ ಬೆಳೆಯುತ್ತಿವೆ. ಈ ಪರಿಸ್ಥಿತಿಯನ್ನು ವಿಶ್ಲೇಷಿಸುವ ಒಂದು ಸಮಾಜಶಾಸ್ತ್ರ ಸಂಬಂಧವಾದ ವ್ಯಾಸಂಗ ಎಂದು ಕರೆಯಬಹುದು. ಬಹು ಸೂಕ್ಷ್ಮವಾದ ವಿಷಯಗಳ ವಿವರಗಳನ್ನು ದಾಖಲಿಸಿ, ಪ್ರತಿಯೊಂದರ ವೈಜ್ಞಾನಿಕ ಸಂಶೋಧನೆ ನಡೆಸಿ ಬರೆದಿರುವ ಕೃತಿ. ಇಲ್ಲಿ ಅನಿಕೇತಾನಂದನೆಂಬ ನಿಜವಾದ ತತ್ವಾನ್ವೇಷಕ ವ್ಯಕ್ತಿ ತನ್ನ ಆಸಕ್ತಿಯನ್ನು ತಣಿಸುವ ಪ್ರಯತ್ನದಲ್ಲಿ ಅನೇಕ ಕಡೆ ಪ್ರಯಾಣ ಮಾಡಿ, ಅನೇಕ ಸಂತ ಶ್ರೇಷ್ಠರನ್ನು ಕಂಡು ಕೊನೆಯಲ್ಲಿ ತನ್ನದೊಂದು ಆಶ್ರಮವನ್ನು ಕಟ್ಟಿ, ಅದರಲ್ಲಿ ತನ್ನ ಸ್ವಂತ ಪ್ರಯೋಗಗಳಲ್ಲಿ ಆಸಕ್ತನಾಗಿದ್ದಾಗ ವಿನಯಾನಂದನೆಂಬ ಆಷಾಢಭೂತಿಯ ಹಿಡಿತಕ್ಕೆ ಸಿಕ್ಕಿ ನಿರುಪಾಯನಾದ ಸ್ಥಿತಿಯ ವರ್ಣನೆ ಇದೆ. ಕೊನೆಗೆ ವಿಜ್ಞಾನಿಗಳು ಕಂಡುಹಿಡಿದ ಹೊಸ ಬಾಂಬಿನ ಸೂಚನೆಯಿಂದ ವ್ಯಾಸಂಗದ ಅಂತಿಮಘಟ್ಟವು ನಿರ್ಮಾಣವಾಗಿದೆ. ಇದೊಂದು ತಾತ್ವಿಕ ಕೃತಿ. ಇದು ಅನೇಕ ಪ್ರಶ್ನೆಗಳನ್ನು ಎತ್ತಿ ಅದಕ್ಕೆ ಓದುಗರೆಲ್ಲ ಪ್ರಶ್ನೆಗಳನ್ನು ಹುಡುಕುವಂತೆ ಮಾಡುವ ಕೃತಿ. ಓದಲು ಕಷ್ಟ. ಆದರೆ ಓದಿದಂತೆ ಪರಿಣಾಮಕಾರಿ. ಈ ಗ್ರಂಥವನ್ನು ರಚಿಸಿದ್ದಕ್ಕಾಗಿ ನಾನು ದಿವಾಣಜಿ ಅವರನ್ನು ಅಭಿನಂದಿಸುತ್ತೇನೆ.

ನಮ್ಮೊಡನೆ ಇರುವ ಬಹು ಉತ್ತಮ ವಿದ್ವಾಂಸರೂ, ಅತ್ಯುತ್ತಮ ಬೋಧಕರೂ, ಸೃಷ್ಟಿಶೀಲ ಬರಹಗಾರರೂ ಆದ ದಿವಾಣಜಿ ಅವರಿಗೆ ನನ್ನ ಗೌರವಗಳನ್ನು ನೀಡಿ ನನ್ನ ಲೇಖನವನ್ನು ಪೂರೈಸುತ್ತೇನೆ.

ಯೊಶಿರಾ ಮಾರ್ಬೆಲ್‌ರವರ ಇತ್ತೀಚಿನ ಕವಿತೆಗಳು

ದಕ್ಷಿಣ ಆಫ್ರಿಕಾದ ಡರ್ಬನ್ ನಗರದಲ್ಲಿ ನೆಲೆಸಿರುವ ಯೊಶಿರಾ ಮಾರ್ಬೆಲ್ ಭಾರತೀಯ ಮೂಲದವರು. ಕಳೆದ ವರ್ಷವಷ್ಟೆ ಇವರು ತಮ್ಮ ಮೊದಲ ಕವನ ಸಂಕಲನ unspecified ಪ್ರಕಟಿಸಿದ್ದಾರೆ. ಇವರ ಇತ್ತೀಚಿನ ಕವಿತೆಗಳ ಕನ್ನಡ ಅನುವಾದಗಳಿವು. ■

ಕೃಪೆ : ಅವಗಾಹ

# ಕರ್ನಾಟಕದ ಏಕೀಕರಣ
# ಒಂದು ಅಪೂರ್ವ ಚರಿತ್ರೆ

ಭಾರತದ ಯಾವ ಭಾಷಾಪ್ರಾಂತಕ್ಕೂ ಒದಗಿಬಂತು. ಇದಕ್ಕೆ ಮುಖ್ಯಕಾರಣ ನಮ್ಮ ಚರಿತ್ರೆಯಲ್ಲಿ ಕರ್ನಾಟಕದ ಒಂದು ಭಾಗದ ಆಡಳಿತವೇ ಮತ್ತೊಂದು ಆಡಳಿತದ ಮೇಲೆ ಆಕ್ರಮಣ ಮಾಡಿ ಸೋತೋ ಗೆದ್ದೋ ಎರಡು ಕಡೆಗೂ ಹಿಂಸೆ, ಆತಂಕ, ದಾರಿದ್ರ್ಯಗಳನ್ನು ತಂದುಕೊಂಡ ದುರಂತದ ಕಥೆ. ಜೊತೆಗೆ ನಮ್ಮ ದೀರ್ಘಚರಿತ್ರೆಯಲ್ಲಿ ಕನ್ನಡದ ನಾಡೆಂಬುದು ಯಾವಾಗಲೂ ಸಂಪೂರ್ಣವಾಗಿ ಒಂದಾಗಿರಲೇ ಇಲ್ಲ. ಈಗ ಸಿಗುವ ಅಲ್ಪಸ್ವಲ್ಪ ದಾಖಲೆಗಳ ಬಲದ ಮೇಲೆ ಕದಂಬರು ಕರ್ನಾಟಕದ ಉತ್ತರ ಭಾಗದ ಪ್ರದೇಶವನ್ನು ಸುಮಾರು ಎರಡು ಶತಮಾನದವರೆಗೆ ಆಳಿದರೆಂದು ಹೇಳಿರಬಹುದು. ಅದೇ ಕಾಲದಲ್ಲಿ ದಕ್ಷಿಣ ಕರ್ನಾಟಕದಲ್ಲಿ ಗಂಗರು ಆಡಳಿತವನ್ನು ನಡೆಸಿದರು. ಅಂದರೆ ಆ ಕಾಲದಲ್ಲಿಯೇ ಕರ್ನಾಟಕ ಎರಡು ಹೋಳಾಗಿದ್ದದ್ದು ಸ್ಪಷ್ಟ. ಮುಂದೆ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಿಯ ಚಾಲುಕ್ಯರು, ಕಲುಚುರ್ಯರು, ಹೊಯ್ಸಳರು ಮುಂತಾಗಿ ರಾಜರು ಅನಿರ್ದಿಷ್ಟವಾದ ಕನ್ನಡ ನಾಡಿನೆಲ್ಲೆಗಳುಳ್ಳ ರಾಜ್ಯವನ್ನು ಆಳಿದರು. ವಿಜಯನಗರದ ಕಾಲದಲ್ಲಿಯೇ ಕರ್ನಾಟಕದ ದೊಡ್ಡ ಭಾಗವು ಒಂದು ರಾಜ ಮನೆತನದ ಆಡಳಿತಕ್ಕೆ ಒಳಗಾದದ್ದು. ಬಳಿಕ ಮೈಸೂರು ಅರಸರು ನೆಲೆ ನಿಂತ ಮೇಲೆ ಬ್ರಿಟಿಷರ ಅಧೀನರಾಗಿ ಮೈಸೂರಿನಂಥ ಒಂದು ಸಂಸ್ಥಾನ ಒಳ್ಳೆಯ ಆಡಳಿತವನ್ನು ಪಡೆಯಿತು. ಆದರೆ ಮಿಕ್ಕ ಉತ್ತರ ಕನ್ನಡ, ದಕ್ಷಿಣ ಕನ್ನಡದ ದೊಡ್ಡ ಭಾಗ ಇತರ ಆಡಳಿತಗಳಿಗೆ ಸಿಕ್ಕಿ ತುಂಬ ಅವಮಾನವನ್ನೂ ಹಿಂಸೆಯನ್ನೂ ಅನುಭವಿಸಬೇಕಾಯಿತು.

ಮೈಸೂರು ಸಂಸ್ಥಾನದಲ್ಲಿ ವಾಸಿಸುತ್ತಿದ್ದ ಸಾಮಾನ್ಯರಿಗೆ ಏಕೀಕರಣದ ಆಲೋಚನೆಯೇ ಇರಲಿಲ್ಲ. ಪ್ರಜಾಸೌಖ್ಯವನ್ನು ಗಮನಿಸುತ್ತಿದ್ದ ರಾಜರು ಚೆನ್ನಾಗಿ ಆಡಳಿತವನ್ನು ನಡೆಸುತ್ತಾ ಇದ್ದುದರಿಂದ ರಾಜಕೀಯವಾಗಿ ಸಾಮಾನ್ಯರು ಈ ಆಲೋಚನೆಯನ್ನೇ ಮಾಡಲಿಲ್ಲ. ಆದರೆ ಉತ್ತರ ಕರ್ನಾಟಕದ ಜನತೆಗೆ ಕನ್ನಡದ ವಿದ್ಯಾಭ್ಯಾಸವು ದೊರಕದ ಸ್ಥಿತಿಯಲ್ಲಿ ಮರಾಠಿಯನ್ನು ತಲೆಯ ಮೇಲೆ ಹೇರುವ ಒತ್ತಾಯವೂ ಜೊತೆಗೆ ಅವಮಾನವೂ ಕಾಡುತ್ತಿತ್ತು. ಅಲ್ಲಿಯ ಪ್ರಜ್ಞಾವಂತರ ಕೈಯಲ್ಲಿ ಈ ಸ್ಥಿತಿಯನ್ನು ಬದಲಾಯಿಸಬೇಕೆಂಬ ಅಂತರಂಗದ ಒತ್ತಾಯ ಕೆಲಸ ಮಾಡಿಸಿತು. ಆ ಭಾಗವನ್ನು ಆಳುತ್ತಿದ್ದ ಬ್ರಿಟಿಷ್ ಅಧಿಕಾರಿಗಳಿಗೂ




ಭಾಷಾಪರವಾದ ಪ್ರಾಂತಗಳಾದರೆ ಆಡಳಿತವು ಸುಸೂತ್ರವಾಗುತ್ತದೆ ಎಂಬ ಅಭಿಪ್ರಾಯವಿತ್ತು. ಸು. 1800 ರಲ್ಲಿಯೇ ಬಳ್ಳಾರಿ ಜಿಲ್ಲೆಯ ಕಲೆಕ್ಟರ್ ಆಗಿದ್ದ ಸರ್. ಥಾಮಸ್ ಮನ್ರೋ ಎಂಬ ದಕ್ಷ ಅಧಿಕಾರಿಯು ಕನ್ನಡದ ಏಕೀಕರಣದ ಅಭಿಪ್ರಾಯವನ್ನು ಮೇಲಿನ ಅಧಿಕಾರಿಗಳಿಗೆ ತಿಳಿಸಿದ್ದನು. ಮನ್ರೋ ತೆಲುಗು ಪ್ರದೇಶದ ಆಡಳಿತ

✍ ಜಿ.ವೆಂಕಟಸುಬ್ಬಯ್ಯ

ನಡೆಸಿ ಮಹಾಜನಪ್ರಿಯ ಅಧಿಕಾರಿಯಾಗಿ ಪ್ರಸಿದ್ಧನಾದನು. ಅವನ ಮಾತನ್ನು ಬ್ರಿಟಿಷ್ ಅಧಿಕಾರಿಗಳು ಕೇಳಿದ್ದರೆ ಕರ್ನಾಟಕ ಈ ವೇಳೆಗೆ ಅತ್ಯಂತ ಸಮೃದ್ಧ ಭಾಗವಾಗಿ ಬೆಳಗುತ್ತ ಇತ್ತು. ಆ ಭಾಗ್ಯ ನಮಗೆ ಬರಲಿಲ್ಲ.

ಭಾರತದ ಉತ್ತರದಲ್ಲಿಯೂ ಬಂಗಾಳ ಒರಿಸ್ಸಾ ಪ್ರದೇಶಗಳಲ್ಲಿ ಭಾಷಾವಾರು ಪ್ರಾಂತ್ಯದ ಒತ್ತಾಯಗಳು ಏಳುತ್ತಿದ್ದವು. ಕನ್ನಡ ದೇಶದಲ್ಲಿ ಧಾರವಾಡದ ವಿದ್ಯಾವರ್ಧಕ ಸಂಘದ ಸ್ಥಾಪನೆಯಿಂದ ಏಕೀಕರಣದ ಕಾರ್ಯಕ್ಕೆ ದೊಡ್ಡ ಬೆಂಬಲ ದೊರಕಿತು. ರಾ.ಹ. ದೇಶಪಾಂಡೆಯವರ ಪ್ರಯತ್ನದಿಂದ 1890 ರಲ್ಲಿ ವಿದ್ಯಾವರ್ಧಕ ಸಂಗವು ಸ್ಥಾಪಿತವಾಯಿತು. ಅಲ್ಲಿಂದ ಮುಂದೆ ಸಾಹಿತಿಗಳ ತಂಡವೇ ಈ ಕಾರ್ಯಕ್ಕೆ ಮುಂದಾಯಿತು. ಕ್ರಮೇಣ ಮೈಸೂರು ಸಂಸ್ಥಾನದ ಪ್ರಮುಖ ಸಾಹಿತಿಗಳಾದ ಬಿ.ಎಂ.ಶ್ರೀ. ಮತ್ತು ಮಾಸ್ತಿ ಮುಂತಾದವರೆಲ್ಲರೂ ಬೆಂಬಲಿಸಿದರು. ಒಂದು ಗ್ರಂಥಕರ್ತರ ಸಮ್ಮೇಳನವು 1907 ರಲ್ಲಿ ಧಾರವಾಡದಲ್ಲಿ ನಡೆಯಿತು. 1908 ರಲ್ಲಿ ಅಂಥದೇ ಸಮ್ಮೇಳನವು ಅಲ್ಲಿಯೇ ನಡೆದು ಮೈಸೂರು ಸಂಸ್ಥಾನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿಸುವುದಕ್ಕೆ ಕಾರಣವಾಯಿತು. ಆದರೆ ಕನ್ನಡ



ಸಾಹಿತ್ಯ ಪರಿಷತ್ತು ಸ್ಥಾಪಿತವಾಗುವುದಕ್ಕೆ ಮತ್ತೆ ಏಳು ವರ್ಷಗಳು ಕಾಯಬೇಕಾಯಿತು. ಅಲ್ಲಿಂದ ಮುಂದೆ ಈ ಎರಡು ಸಂಸ್ಥೆಗಳು, ವಿದ್ಯಾವರ್ಧಕ ಸಂಘ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಕರ್ನಾಟಕದ ಏಕೀಕರಣಕ್ಕೆ ಹೋರಾಟ ಮಾಡಲು ಬಲ ಪಡೆದವು. ಅವುಗಳ ಕಾರ್ಯವೂ ಕೂಡ ಭಾಷಣ, ಲೇಖನ, ಸಮ್ಮೇಳನಗಳ ಮೂಲಕ ಸಾಹಿತ್ಯಾಸಕ್ತರು ಮಾಡುತ್ತಿದ್ದ ಕಾರ್ಯವೇ ಆಗಿತ್ತು. ಇದರಲ್ಲಿ ರಾಜಕೀಯದವರು ಯಾರೂ ಇರಲಿಲ್ಲ.

ಆಲೂರು ವೆಂಕಟರಾಯರು ರಚಿಸಿದ 'ಕರ್ನಾಟಕದ ಗತವೈಭವ' ಮುಂತಾದ ಗ್ರಂಥಗಳಿಂದ ಕನ್ನಡದ ಜನತೆಯಲ್ಲಿ ತುಂಬಾ ಎಚ್ಚರವುಂಟಾಯಿತು. ಏಕೀಕರಣದ ಕಾರ್ಯದ ಉದ್ದಕ್ಕೂ ಕಾಣುವ ಹೆಸರೆಂದರೆ ಆಲೂರು ವೆಂಕಟರಾಯರ ಹೆಸರು.

ಏಕೀಕರಣದ ಪ್ರಯತ್ನಕ್ಕೆ 1920 ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ಸಿನ ಅಧಿವೇಶನದಲ್ಲಿ ಒಪ್ಪಿಗೆ ದೊರೆಯಿತು. ಅಲ್ಲಿಂದ ಮುಂದೆ ಹೊಸದಾಗಿ ಸ್ಥಾಪಿತವಾದ ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸದಸ್ಯರು ಕೂಡ ಸಾಹಿತಿಗಳ ಬೆಂಬಲಕ್ಕೆ ನಿಂತರು.

ಕೆಲವು ಕಾಲ ಮೈಸೂರು ಸಂಸ್ಥಾನವನ್ನು ಕರ್ನಾಟಕದಲ್ಲಿ ಸೇರಿಸಬೇಕೋ ಬೇಡವೋ ಎಂಬ ವಿಷಯ ಓಲಾಟದಲ್ಲಿತ್ತು. ಆದರೆ ಮೈಸೂರು ಸೇರಿಯೇ ಕರ್ನಾಟಕ ಪ್ರಾಂತವಾಗಬೇಕೆಂಬ ಅಭಿಪ್ರಾಯಕ್ಕೆ ಬೆಂಬಲ ಬಂತು. ಹೀಗಾಗಲು ಶ್ರೀರಂಗ, ಕೆ.ಆರ್.ಕಾಮತ್, ಹನುಮಂತಯ್ಯ ಚಂಗಲರಾಯ ರೆಡ್ಡಿ ಮುಂತಾದವರು ಮುಖ್ಯರಾಗಿ ಕಾರಣರು.

1955 ರಲ್ಲಿ ರಾಯಚೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ಸಮ್ಮೇಳನದ ಅಧ್ಯಕ್ಷರಾದ ಶ್ರೀರಂಗರು ಅವರ ಭಾಷಣದಲ್ಲಿ ಹೀಗೆ ಹೇಳಿದರು.

ಕರ್ನಾಟಕ ಒಂದಾಗಬೇಕೆಂದು ಮೊದಲಿನಿಂದಲೂ ಬಯಸಿ ಹಣ್ಣಾಗುತ್ತಲಿದ್ದ ಮತ್ತು ಅದು ಒಂದೇ ಆಗಿದೆ ಎಂದು ಮೊದಲಿನಿಂದಲೂ ತಮ್ಮ ಕೃತಿ ಚಟುವಟಿಕೆಗಳಿಂದ ತೋರಿಸುತ್ತಲಿದ್ದ ಕನ್ನಡ ಸಾಹಿತಿಗಳ ಈ ಸಮ್ಮೇಳನಕ್ಕೆ ಇಂದು ಏಕೀಕೃತ ಕರ್ನಾಟಕದ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷನಾಗುವ ಭಾಗ್ಯ ನನಗೆ ಒದಗಿಸಿತು.

ಈ ಸಮ್ಮೇಳನವು ನಡೆದ ಕಾಲದಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಯಾಗಿದ್ದೇನೆಂದು ನನಗೆ ಹೆಮ್ಮೆಯಾಗುತ್ತದೆ. ಕರ್ನಾಟಕದ ಏಕೀಕರಣದ ಸಾಧ್ಯವಾದುದಕ್ಕೆ ಈಗಿನ ನಾವು ಕೃತಜ್ಞರಾಗಬೇಕಾದುದು ಎಷ್ಟು ಜನರಿಗೆ

ಎಂದರೆ ಲೆಕ್ಕವೇ ಸಿಕ್ಕುವುದಿಲ್ಲ. ಅದೊಂದು ಜನಾಂಗದ ಹೊಡೆದಾಟದಂತೆ ನೆರವೇರಿತು. 1890 ರಲ್ಲಿ ಪ್ರಾರಂಭವಾಗಿ 1956 ರಲ್ಲಿ ಸಾಧಿತವಾಯಿತು ಎಂದರೆ ಅದು 70 ವರ್ಷಗಳ ಆಂದೋಲನ. ಕರ್ನಾಟಕದ ಏಕೀಕರಣಕ್ಕೆ ಎಲ್ಲ ಸಾಹಿತಿಗಳೂ ಆಸಕ್ತರಾಗಿದ್ದರೂ ಈ ಬಗ್ಗೆ ತುಂಬ ಕಾಳಜಿ ವಹಿಸಿ ಮೊದಲಿನಿಂದ ಪ್ರಚಾರದಲ್ಲಿ ಕೊನೆಯತನಕ ಹೋರಾಡಿದವರಲ್ಲಿ ಶ್ರೀರಂಗ, ಅ.ನ.ಕೃ., ಶಿವಮೂರ್ತಿ ಶಾಸ್ತ್ರಿ ಇವರನ್ನು ವಿಶೇಷವಾಗಿ ಹೆಸರಿಸಬೇಕು. ಇವರಿಗಿಂತ ಹಿರಿಯರಾಗಿದ್ದವರು ಪ್ರಾರಂಭಿಸಿದ ಕಾರ್ಯವನ್ನು ಈ ಮೂವರು ತುಂಬ ಪರಿಣಾಮುದಾಯಕವಾಗಿ ಬೆಳಸಿದರು. ಇದಕ್ಕಾಗಿಯೇ ಶ್ರೀರಂಗರು ತಮ್ಮ ವೃತ್ತಿಗೆ ರಾಜೀನಾಮೆಯನ್ನು ಕೊಡಬೇಕಾಯಿತು. ಅನೇಕ ಆಯೋಗಗಳು ವರದಿಗಳನ್ನು ಸಲ್ಲಿಸಿದ ಮೇಲೆ ರಾಜ್ಯ ಪುನರ್ಗಡಣಾ ಅಯೋಗವು ನೀಡಿದ ವರದಿಯ ಪ್ರಕಾರ 16.11.1956 ರಲ್ಲಿ ಅದರ ಬಗ್ಗೆ ಭಾರತ ಸರ್ಕಾರದ ನಿರ್ಣಯ ಪ್ರಕಟವಾಯಿತು. ಮೈಸೂರು ಎಂಬ ಹೆಸರಿನಲ್ಲಿ ಒಂದು ಎಲ್ಲೆಕಟ್ಟು ನಿರ್ಣಯವಾಯಿತು. ಆದರೆ ಬೀದರ್ ಜಿಲ್ಲೆಯ ಬಸವಕಲ್ಯಾಣವು ಕರ್ನಾಟಕಕ್ಕೆ ಸೇರಿರಲಿಲ್ಲ. ಈ ಸಮಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯನ್ನು ಬೀದರ್ ನಗರದಲ್ಲಿ ಸಭೆ ಸೇರಿಸಿ ಈ ವಿಷಯವನ್ನು ಪರಿಶೀಲಿಸಬೇಕೆಂಬ ನನ್ನ ಮನವಿಯನ್ನು ಅಧಿಕಾರಿಗಳು ಒಪ್ಪಿಕೊಂಡರು.

ಬಿದರ್ ನಗರಕ್ಕೆ ಪರಿಷತ್ತಿನ ಕಾರ್ಯ ಸಮಿತಿಯು ಹೋದಾಗ ನಮಗೆ ಆಶ್ಚರ್ಯವೇ ಕಾದಿತ್ತು. ಬೀದರ್ ನಗರದಲ್ಲಿ ಅಂಗಡಿ ಬೀದಿಯಲ್ಲಿ ಒಂದು ಕನ್ನಡದ ಬೋರ್ಡ್ ಇರಲಿಲ್ಲ. ಅಲ್ಲಿ ಕನ್ನಡದ ಶಾಲೆಗಳಿರಲಿಲ್ಲ. ಅಲ್ಲಿಯ ಜನಕ್ಕೆ ಕನ್ನಡಕ್ಕೆ ಒಂದು ವರ್ಣಮಾಲೆ ಇದೆ ಎಂಬುದು ಗೊತ್ತಿರಲಿಲ್ಲ. ಎಲ್ಲ ಮರಾಠೀಮಯ. ಮನೆಯಲ್ಲಿ ಎಲ್ಲರೂ ಕನ್ನಡ ಮಾತನಾಡುತ್ತಿದ್ದರು. ಹೊರಗೆ ಮರಾಠಿ. ಇಷ್ಟೊಂದು ಹಿಂದೆ ಬಿದ್ದಿರುವ ಕನ್ನಡ ಪ್ರದೇಶವನ್ನು ಕನ್ನಡ ಭಾಷೆಯ ಅಕ್ಷರಗಳಿಂದ ಪ್ರಾರಂಭಿಸಿ ಕನ್ನಡಮಯವನ್ನಾಗಿ ಮಾಡಬೇಕಾಗಿತ್ತು. ಆಗ ಸಮಿತಿಯ ಎಲ್ಲ ಸದಸ್ಯರೂ ಅನೇಕ ಕಡೆಗಳಲ್ಲಿ ಪ್ರಯಾಣ ಮಾಡಿ, ಕನ್ನಡದಲ್ಲಿ ಉಪನ್ಯಾಸ ಮಾಡಿ ಜನರ ಮನಸ್ಸಿನಲ್ಲಿ ಕನ್ನಡದ ಹಿರಿಮೆಯನ್ನು ಮೂಡಿಸಬೇಕಾಯಿತು. ಅದು ಕರಿಮಣ್ಣಾದ ನೆಲ; ನಡೆಯುವುದು ಸುಲಭವಲ್ಲ. ಹೊಲದಲ್ಲಿ ನಡೆದರೆ ಕಾಲಿಗೆ ದಟ್ಟವಾಗಿ ಮಣ್ಣು ಅಂಟಿಕೊಳ್ಳುತ್ತಿತ್ತು. ಹಾಗಾಗಿ ಸಣ್ಣ ಕುದುರೆಗಳ ಮೇಲೆ ಪ್ರಯಾಣ ಮಾಡಿ ಪ್ರಚಾರ ಮಾಡಾಬೇಕಾಯಿತು. ಹಾಗಾಗಿ ಸಣ್ಣ ಕುದುರೆಗಳ ಮೇಲೆ ಪ್ರಯಾಣ ಮಾಡಿ ಪ್ರಚಾರ ಮಾಡಬೇಕಾಯಿತು. ನಾನು ಹೀಗೆ ಭಾಲ್ಕಿ ತಾಲ್ಲೂಕಿನಲ್ಲಿ ಪ್ರಯಾಣ ಮಾಡಿ ಭಾಷಣಗಳನ್ನು ಮಾಡಿದ ನೆನಪಿದೆ.


ಹೈದರಾಬಾದು ಸಚಿವ ಮಂಡಲದಲ್ಲಿದ್ದ ಡಾ. ಮೇಲುಕೋಟಿಯವರ ಸಹಾಯವು ನಮಗೆ ದೊರಕಿತು. ಕೆಲವರು ಕನ್ನಡ ಮೂಲದ ಅಧಿಕಾರಿಗಳ ಸಹಾಯವೂ ಸಿಕ್ಕಿತು. ಕ್ರಮೇಣ ಬೀದರಿನ ಆ ವ್ಯಕ್ತಿಗಳಿಗೆ ಕನ್ನಡ ವರ್ಣಮಾಲೆಗಳು, ಭೂಗೋಳದ ಭೂಪಟಗಳು ಪಠ್ಯಪುಸ್ತಕಗಳು, ಪತ್ರಿಕೆಗಳು ಇವುಗಳನ್ನು ಕಳುಹಿಸುತ್ತ ಕನ್ನಡ ಪ್ರಚಾರವನ್ನು ಮಾಡಲಾಯಿತು. ಈ ಸಮಯದಲ್ಲಿ ನನಗೆ ಅನ್ನದಾನಯ್ಯ ಪುರಾಣಿಕರು ನೀಡಿದ ಸಹಾಯವು ನೆನಪಿಗೆ ಬರುತ್ತದೆ.

ಕೊನೆಗೆ 1957 –58 ರಲ್ಲಿ ಬೀದರ್ ನಗರದಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಏರ್ಪಡಿಸಿ, ಡಿ.ಎಲ್.ನರಸಿಂಹಚಾರ್ಯರ ಅಧ್ಯಕ್ಷತೆಯಲ್ಲಿ ಕನ್ನಡ ಸಮ್ಮೇಳನವನ್ನು ನೆರವೇರಿಸಲಾಯ್ತು.

ಬಸವಕಲ್ಯಾಣಕ್ಕೆ ಪ್ರಯಾಣ ಬೆಳೆಸಿ ಅಲ್ಲಿಯ ಜನರು ಆ ಊರು ಕರ್ನಾಟಕಕ್ಕೆ ಸೇರಬೇಕೆಂಬ ಆಂದೋಳನ ನಡೆಯುವಂತೆ ಏರ್ಪಾಟು ಮಾಡಲಾಯಿತು.

ಈ ರೀತಿ ಕನ್ನಡ ಏಕೀಕರಣವಾದ ಸಮಯದಲ್ಲಿ ನಾಡಿನಲ್ಲಿ ಸುಳಿದಾಡಿದ ಸಂತೋಷ ಈಗಲೂ ನನ್ನ ನೆನಪಿಗೆ ಬರುತ್ತದೆ.

ಈಗ ಕನ್ನಡ ಏಕೀಕರಣದ ಕಥೆಯು ನಮಗೆ ದೊರಕಿದೆ. ಒಂದು ಗ್ರಂಥದಲ್ಲಿ, ಡಾ. ಎಚ್. ಎಸ್. ಗೋಪಾಲರಾಯರು ರಚಿಸಿದ ಗ್ರಂಥ ಕರ್ನಾಟಕದ ಏಕೀಕರಣ ಇತಿಹಾಸದಲ್ಲಿ. ಹಿಂದೆ ಸಣ್ಣ ಸಣ್ಣ ಪುಸ್ತಕಗಳು ಕೆಲವು ಇದ್ದರೂ ಇಷ್ಟು ವೈಜ್ಞಾನಿಕವಾಗಿ ಯಾರು ವಿಷಯವನ್ನು ಹೀಗೆ ವಿಶ್ಲೇಷಿಸಿರಲಿಲ್ಲ. ಈಗ ಐವತ್ತು ವರ್ಷದ ಬಳಿಕ ಸುವರ್ಣ ಕರ್ನಾಟಕದಲ್ಲಿ ಬದುಕಿರುವುದು ನನಗೆ ತುಂಬ ಸಂತಸದ ವಿಷಯ. ನಾನು ಆಶಾವಾದಿ. ಈಗ ಕಾಡುತ್ತಿರುವ ಅನೇಕ ತೊಂದರೆಗಳು ಪರಿಹಾರವಗಿ ಮುಂದೆ ಕನ್ನಡದ ನಾಡಿನ ಹಿರಿಮೆ ಶಾಶ್ವತವಾಗಿ ಸ್ಥಾಪಿತವಾಗಿ ಜನ ಸುಖವಾಗಿ ಬಾಳುವ ಕಾಲ ಬರುತ್ತದೆಂದು ದೃಢವಾಗಿ ನಂಬಿದ್ದೇನೆ.



ಕೃಪೆ : ಅಂತರ್ಜಾಲ

## ಸ್ನೇಹಕ್ಕೊಂದು ಪ್ರತೀಕ

ಬೊಂಬಾಯಿಯನ್ನೇ ತಮ್ಮ ಜೀವನ ಕ್ಷೇತ್ರವನ್ನಾಗಿಸಿಕೊಂಡು ರಚಿಸಿರುವ ಸಾಹಿತ್ಯರಾಶಿಯ ಬಗ್ಗೆಯೇ ಬೇರೊಂದು ವಿಸ್ತಾರವಾದ ಸಂಬಂಧವನ್ನು ಬರೆಯಬೇಕು. ಅಲ್ಲಿನ ಕನ್ನಡ ಸಂಘವನ್ನು ಬೆಳೆಸಿದ ಬಗೆ, ಕರ್ನಾಟಕದಿಂದ ಅಲ್ಲಿಗೆ ಹೋದವರಿಗೆ ಸಂದ ಗೌರವ ಸನ್ಮಾನಗಳು, ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಇಲಾಖೆ ದೃಢವಾಗಿ ಬೆಳೆದ ರೀತಿ, ಇವೆಲ್ಲ ಕನ್ನಡ ವಾತಾವರಣವನ್ನು ಜೀವಂತವಾಗಿ ಇಟ್ಟಿರುವ ಸಂಘಟನೆಗಳೂ, ಇವೆಲ್ಲ ಬಲ್ಲಾಳರಂಥವರು ನೀಡಿದ ಮಾರ್ಗದರ್ಶನದಿಂದ ಮಾತ್ರ ಸಾಧ್ಯ.

ಬಲ್ಲಾಳರೂ ಅವರ ಕುಟುಂಬದವರೂ ಬಹುಕಾಲ ಸುಖಶಾಂತಿಗಳಿಂದ ಬಾಳಲಿ. ಬೆಂಗಳೂರು ಕೂಡ ಕಾದಂಬರಿಗಳಿಗೂ ಕತೆಗಳಿಗೂ ವಸ್ತುಗಳನ್ನು ನೀಡಬಲ್ಲ ವ್ಯಕ್ತಿಗಳಿಂದಲೂ ವಾಕ್ಯಗಳಿಂದಲೂ ಸಂಘಟನೆಗಳಿಂದಲೂ ಕೂಡಿರುವ ಒಂದು 'ಸಿಟಿ', ಇನ್ನೇನು ಬೊಂಬಾಯಿಯ ಸತ್ತ್ವವನ್ನೇ ಅದೂ ರೂಢಿಸಿಕೊಳ್ಳುತ್ತಿದೆ ಎಂಬುದನ್ನು ಅವರು ಸಾಬೀತು ಪಡಿಸುವ ಕೃತಿಗಳನ್ನು ರಚಿಸಲಿ. ಅವರ ಸಾಹಿತ್ಯದಲ್ಲಿ ಬೆಂಗಳೂರಿಗೂ ಒಂದು ಸ್ಥಾನ ದಕ್ಕಲಿ ಎಂದು ನನ್ನ ಹಾರೈಕೆ.

ಕೃಪೆ : ಅಕ್ಕರೆ

## ...ವೀಣಾ ವಾದನ

ಕಾರ್ಯಕ್ರಮದ ಮುಖ್ಯ ರಾಗವಾಗಿ ಶಂಕರಾಭರಣವನ್ನು ಆಯ್ಕೆ ಮಾಡಿ ರಾಗ ತಾನ ಮತ್ತು ಪುರಂದರ ದಾಸರ "ಪೋಗದಿರೆಲೋ ರಂಗ" ಕೀರ್ತನೆಯನ್ನು ಮಿಶ್ರಛಾಪುತಾಳದಲ್ಲಿ ಪ್ರಸ್ತುತಪಡಿಸಿದರು. ರಾಗವನ್ನು ವಿಸ್ತಾರ ಆಲಾಪನೆಯೊಂದಿಗೆ, ತಾನದಲ್ಲಿ ರಾಗ ಮಾಲಿಕೆ (ರೀತಿಗೌಳ ಮುರುಳಿ ಶ್ರೀ) ಯನ್ನು ನುಡಿಸಿ ಮೇಲು ಸ್ಥಾಯಿಯಲ್ಲೂ ಸುಧೀರ್ಘವಾಗಿ ಸ್ವರಸಂಚಾರ ಮಾಡಿ ಸ್ಪಷ್ಟತೆ, ಇಂಪನ್ನು ಉಳಿಸಿಕೊಂಡು ಕಛೇರಿಗೆ ನ್ಯಾಯ ಒದಗಿಸಿದರು, ವೀಣಾ ವಾದನದಲ್ಲಿ ತಾನವನ್ನು ಕೇಳುವುದೇ ಒಂದು ಹಿತ; ಅದರಲ್ಲೂ ಇಂತಹ ಅಪರೂಪದ ಕಲಾವಿದರ ಕೈ ಚಳಕ ವೀಣೆಯ ಮೇಲೆ ಓಲಾಡಿ, ತೇಲಾಡಿ ಕೇಳುಗರಿಗೂ ಖುಷಿಯುಣಿಸಿ ಮುದಗೊಳಿಸಿದುದು ಕಛೇರಿಯ ವಿಶೇಷವೇ ಸರಿ.

ಸದಾಶಿವ ಬ್ರಹ್ಮೇಂದ್ರರ ಗಾಯಕಿ 'ವನಮಾಲಿ'ಯನ್ನು ರಾಗ ಪಿಲುವಿನಲ್ಲಿ ನುಡಿಸಿದರು. ನಂತರ ಚಿರಪರಿಚಿತವಾದ "ಕೃಷ್ಣಾ ನೀ ಬೇಗನೆ ಬಾರೋ"ವನ್ನು ಸಂಪ್ರದಾಯ ಹಾಗೂ ಶಾಸ್ತ್ರಿಯವಾಗಿ ನುಡಿಸಿ ದೊರೆಸ್ವಾಮಿ ಅಯ್ಯಂಗಾರರ ಪರಂಪರೆಯನ್ನು ಮುಂದುವರಿಸುತ್ತಿರುವುದನ್ನು ಸ್ಪಷ್ಟಗೊಳಿಸಿದರು. ಕೊನೆಯಲ್ಲಿ ತಿಲ್ಲಾನವನ್ನು ನುಡಿಸಿ ಕಛೇರಿಗೆ ಮಂಗಳಹಾಡಿದರು.

ಮೃದಂಗ ವಾದಕರಾದ ಮುಂಬೈನ ಶ್ರೀ. ಶ್ರೀಧರ್ ಪಾರ್ಥಸಾರಥಿ ಹಾಗೂ ಘಟಂ ವಾದಕರಾದ ಮುಂಬೈನ ಶ್ರೀ. ಶೇಖರ್ ವೈಣಿಕರ ಸರ್ವೋತ್ಕೃಷ್ಟಗಳನ್ನು ಅನುಸರಿಸುತ್ತಲೇ ಸ್ವಂತಿಕೆ ಹಾಗೂ ಸೃಜನಶೀಲತೆ ಮೆರೆದು ಕಾರ್ಯಕ್ರಮದ ಒಟ್ಟು ಅಂದವನ್ನು ಎತ್ತಿಹಿಡಿದರು.

**– ಶ್ಯಾಮಲ ರಾಧೇಶ್**

# PORTRAYING THE LIFE OF A LEXICOGRAPHER

Bangalore Feb.24. With the release of Shabda Saagara, a book in honour of the 91 year old lexicopgrapher, G.Venkatasubbaiah, on Wednesday, the Kannada literary scene is likely to have not only an interesting form of reading material but also a new publishing idea. The book is a compilation of articles by Scholars, writers, and poets. Gowrisundar, publisher, who was also a film-maker, says he is keen on bringing out books that are culturally and historically significant. He wants his books to evaluate writers and their works critically and not to be merely biographical and laudatory volumes. Shabda Saagara deals with the evolution of Kannada and the role of Prof. Vvenkatasubbaiah, popularly known as Pro. G.V., in the development of Kannada dictionaries over the years, he says. Mr. Sundar has published critical notes on S.L.Bhyrappa's novels, the Ramayana as G.V.Iyer sees it, Nyayamoorthy Nittoor, and Sulabaha Chiktseby Pandit Taranath.

Despite escalating production costs, discouraging marketing trends, and the alleged irregularities in the Government's book purchase schemes, Mr. Sundar is optimistic of making 100 percent profit. He



argues that it is wrong to say Kannada books lack a lucrative market. Some unscrupulous writers and publishers have created such a false impression in connivance with some people in the government.

Shabda Saagara contains insightful articles on the life and achievements of Prof. G.V. who has earned the distinction of



being one among the senior most lexicographers in the 20th century in the world. He was felicitated at the first international lexicographers meet held in Annamalai University in Tamil Nadu recently. Prof. G.V. has compiled over 10 dictionaries, including the eight-volume Kannada –Kannada Nighantu. His column, I go Kannada, in Prajavani, a Kannada daily, has been popular for over a decade. He has edited over 25 books and published several papers. He was ana advisor to the multilingual dictionary project (Japanese-

**✍ K.N.Venkatasubba Rao**

Kannada-English-Tamil, 1988) of the Institute of Asian Studies, Chennai. He had been a member of the consultative committee of the Telugu lexicon project of the Telugu Academy of the Andhra Pradesh Government from 1970 to 1985. He had been the vice-president of the Lexicographical Association of India for 17 years from 1973. He has won several awards.

---

*Prof. G. Venkatasubbaiah (Kannada: ಪ್ರೊ.ಜಿ.ವೆಂಕಟಸುಬ್ಬಯ್ಯ) (born August 23, 1913) is a Kannada lexicographer who has compiled over 10 dictionaries, edited over 25 books and published several papers. He is regarded as the father of the modern Kannada dictionary.*

*Early life and Education. Venkatasubbaiah was born on August 23, 1913. He was born and brought up in Mysore. He is the son of renowned Kannada and Sanskrit scholar Ganjam Thimmanniah. He secured his Masters of Arts degree from the Maharaja college in Mysore in the year 1932, ranking first in the university. He took up the teaching profession and taught Kannada language at the Maharaja's college in Myasore and the Vijaya College in Bangalore. He served as Head of department of Kannada in Vijaya College and Prof. V.T.Srinivasana was the Principal of that college from 1951 to 1972.*

***Literary contributions***

*Venkatasubbaiah has compiled more than 10 dictionaries, including an eight – volume Kannada Nighantu (Dictionary). This dictionary has also been translated to the Braille language by the Braille Transcription cEntrre of the Canara Bank Relief and welfare society. He has been writing the popular column, Igo Kannada for over a decadein the major Kannada daily, Prajavani. The articles published in Igo Kannada have been compiled into a book in four volumes. He has also authored a dictionary entitled Klishtapada Kosha ( a dictionary of compled Kannada words) which was released to mark the Suvarna Karnataka (Silver Jubilee of the formation of Karnataka). It is the first of its kind in Kannada language which covers different language speicifications such as derivation, punctuation, phoneme and morphological patternas of Kannada language as the language has evolved over the centuries.*

*He has served as the vice president of the Lexicographical Associaiton of India for 17 years. In 1998, he was appointed as an advisor to the multilingual dictionary project of the Institute of Asian studies, Chennai, which comprises Japanese, Kannada, Engalish and Tamil. He was also appointed as a consultative committee member in the Telugu lexicon project initiated by the Telugu Academy of the government of Andhra Pradesh.*

*He was honored with the Presidentship of 77th Akhila Bharata Kannada Sahitya Sammelana helana held at Bangalore on 2011.*

***Awards and recognitions***

*Venkatasubbaiah has been conferred numerous awards, important among which are the Kannada Sahitya Academy award, the Karnataka Rajyotsava award and the Nadoja award, which is honorary degree equivalent to the d.Litt degree. He has also been awarded the Masti Award by the Government of Karnataka. He was President of the Kannada Sahitya Parishat from 1964-69. He has also chaired the annual Kannada literary festival, Alvas Nudisiri in 2007. Hhe was also congratulated at the first international lexicographers meeting held in Annamalai University in Tamil Nadu.*


**ಅನುಜಾ ಮಹಿಳಾ ಸಂಸ್ಥೆ**

*ಅರ್ಪಿಸುವ*

**ಕೆರೆಗೆ ಹಾರ**

**ಜಾನಪದ ಗೀತ ರೂಪಕ**

**ತಾ. 9.9.2012**

೧೬ನೆಯ ರಾಷ್ಟ್ರೀಯ ಮಟ್ಟದ ರಂಗ ಉತ್ಸವ

ನೆಹರು ಸೆಂಟರ್ ಆಡಿಟೋರಿಯಮ್,

ವರ್ಲಿ, ಮುಂಬಯಿ

ಹೆಚ್ಚಿನ ಸಂಖ್ಯೆಯಲ್ಲಿ ಕನ್ನಡ ಬಾಂಧವರು ಭಾಗವಹಿಸಬೇಕೆಂದು ಕೋರಿಕೆ.

**ಉಚಿತ ಪ್ರವೇಶ ಪತ್ರಗಳಿಗೆ ಸಂಪರ್ಕಿಸಿರಿ**

**Tel.: 0251-244696**

**0251-2446296/09322453350**



# ಶ್ರೀ ಸ್ವರ್ಣ ಗೌರಿ ಹಾಗೂ



# ಶ್ರೀ ಮಹಾಗಣಪತಿ ಮಹೋತ್ಸವ - 2012

ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ ಶಕೆಯ ಶ್ರೀ ನಂದನ ನಾಮ ಸಂವತ್ಸರದ ಭಾದ್ರಪದ ಶುದ್ಧ ತೃತೀಯ ಮಂಗಳವಾರ 18.09.2012ರಂದು ಶ್ರೀ ಸ್ವರ್ಣ ಗೌರಿಯನ್ನು ಮತ್ತು ಬುಧವಾರ 19.09.2012ರಂದು ಚತುರ್ಥಿ ಶ್ರೀ ಮಹಾಗಣಪತಿಯನ್ನೂ ಆವಾಹಿಸಿ, ಅಷ್ಟಮಿ ಭಾನುವಾರ ದಿನಾಂಕ 23.09.2012 ರವರೆಗೆ ಉತ್ಸವವನ್ನು ಅಸೋಸಿಯೇಶನ್ನಿನ ಆಶ್ರಯದಲ್ಲಿ ಎಂದಿನಂತೆ ವಿಜೃಂಭಣೆಯಿಂದ ಆಚರಿಸಲು ನಿಶ್ಚಯಿಸಲಾಗಿದೆ.

ದಿನಾಂಕ 23.09.2012 ನೇ ಭಾನುವಾರ ಬೆಳಿಗ್ಗೆ ಸಕಲ ಪೂಜಾದಿ ಸೇವೆಗಳನ್ನು ಸಲ್ಲಿಸಿ, ಮಹಾ ಮಂಗಳಾರತಿ ಮಾಡಿ ಮೆರವಣಿಗೆಯ ನಂತರ ಗೌರಿ ಗಣಪತಿಯನ್ನು ದಾದರ್ ಸಮುದ್ರ ತೀರದಲ್ಲಿ ವಿಸರ್ಜಿಸಲಾಗುವುದು. ತಾವುಗಳೆಲ್ಲರೂ ಈ ಮಹೋತ್ಸವದಲ್ಲಿ ಭಾಗವಹಿಸಿ, ಉದಾರ ಸಹಾಯ ಮಾಡಿ ಭಗವತ್ಕೃಪೆಗೆ ಪಾತ್ರರಾಗಬೇಕೆಂದು ಕೋರುತ್ತೇವೆ. ಸೇವಾರ್ಥ ಕೊಡಲಿಚ್ಛಿಸುವವರು ಪೋಸ್ಟ್ ಕಾರ್ಡ್‌ನಲ್ಲಿ ತಮ್ಮ ಹೆಸರು, ಜನ್ಮ ನಕ್ಷತ್ರ, ಗೋತ್ರ, ಪೂಜೆ ನೆರವೇರಿಸಬೇಕಾದ ದಿನಾಂಕ ಬರೆದು ಪುನಃ ನಮ್ಮ ವಿಳಾಸಕ್ಕೆ ದಿನಾಂಕ 18.09.2012 ರೊಳಗೆ ತಲುಪಿಸಿರಿ.

ಅಧ್ಯಕ್ಷರು ಹಾಗೂ ಸಮಿತಿ ಸದಸ್ಯರು

**ವಿ.ಸೂ.**

1. ಸೇವಾರ್ಥ ನಡೆಸಲಿಚ್ಛಿಸುವವರು 251/- ರೂ.ಗಳ ಅಥವಾ ಹೆಚ್ಚಿನ ಕಾಣಿಕೆಯನ್ನು (ನಗದು/ಚೆಕ್) ಅಂಚೆ ಮೂಲಕ ಕಳುಹಿಸಬಹುದು ಅಥವಾ ಸ್ವತಃ ಅಸೋಸಿಯೇಶನ್ನಿನ ಕಛೇರಿಗೆ ಬಂದು ನೀಡಬಹುದು.
2. ಗೌರಿ ಪೂಜೆಯಲ್ಲಿ ಭಾಗವಹಿಸಲು ಬಯಸುವ ಮಹಿಳೆಯರು ತಮ್ಮ ಹೆಸರನ್ನು ದಿನಾಂಕ 16.09.2012 ರೊಳಗೆ ಕಾರ್ಯದರ್ಶಿಗಳಿಗೆ ತಿಳಿಸಬೇಕೆಂದು ಕೋರಿಕೆ.
3. ಪೂಜೆ ಕಾರ್ಯಕ್ರಮದ ಅಂಗವಾಗಿ ನಡೆಸುವ ಪ್ರತಿ ಸಂಜೆಯ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಡಲಿಚ್ಛಿಸುವ ಸದಸ್ಯರು ರೂ.2500/- ವನ್ನು ದೇಣಿಗೆಯಾಗಿ ಕೊಡಬೇಕೆಂದು ವಿನಂತಿ.

## 60th Year of Shri Swarna Gauri and Shri Mahaganapathi Pooja

In keeping with its glorious tradition, your Association is conducting Shri Swarna Gauri and Shri Mahaganapathi Pooja this year also, with all pomp and gaiety from 18th September 2012 to 28th September 2012. This event will be marked by the traditional pooja every morning and cultural programmes followed by traditional pooja in the evenings. The Visarjana will be on 23rd September 2012. A detailed programme will be mailed to you in due course. Those desirous of giving "Sevartha" Rs. 251/- or more may please send their cheque to the Mysore Association office, stating the preferred date for pooja along with your name, gotra and nakshatra.



# THE MYSORE ASSOCIATION, MUMBAI

*conducts*

# THEATRE WORKSHOP in DEEPAVALI

**The Association is conducting an intensive Theatre Workshop to Children. The Workshop would include Body language, voice modulation, dance-music, story telling, stage craft, makeup & dress design.**

**November 15th, 2012 to November 30th 2012**

| | |
|---|---|
| **Age Group** | : 7 to 15 yrs. |
| **Course Language** | : Kannada & English |
| **Course timings** | : RESIDENTIAL. |
| **Course Director** | : Dr. B. R. Manjunath |
| **Course coordinators** | : Ms. Bhavani Bhargav<br>Smt. Shyamala Radhesh |

## Registration:

FREE CERTIFICATE ISSUED TO PARTICIPANTS

*Contact for Registration: Association's Office*


**Between 11.00 a.m. to 7.00 p.m. on all days**

**Venue:**

The Mysore Association, Mumbai
393, Bhaudaji RoadMatunga,
Mumbai – 400019
Tel. No. 2403 7065 / 2402 4647
e-mail: mysoreassociation.mumbai@gmail.com

*Course Organiser:* **K. Manjunathaiah**




66
ಆಗಸ್ಟ್ 15, 2012
ಕರ್ನಾಟಕ ಸರಕಾರ
ನಾಡ ಜನತೆಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು
ಕೆ. ಎಸ್. ಈಶ್ವರಪ್ಪ
ಜಗದೀಶ್ ಎಸ್. ಶೆಟ್ಟರ್
ಮಾನ್ಯ ಮುಖ್ಯಮಂತ್ರಿಗಳು
ಆರ್. ಅಶೋಕ
ಸಂದೇಶ
ವಿಶ್ವದಲ್ಲಿರುವ ವಿಭಿನ್ನ ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡು
ಭಾರತ ದೇಶದಂತೆ ಅಹಿಂಸಾ ಮಾರ್ಗದಲ್ಲಿ ಸ್ವಾತಂತ್ರ್ಯ ಗಳಿಸಿದ ನಿದರ್ಶನ
ಜಗತ್ತಿನಲ್ಲಿ ಇನ್ನೊಂದಿಲ್ಲ. ಉದಾತ್ತ ಚಿಂತನೆಯೊಂದಿಗೆ
ವಿಶ್ವ ಭ್ರಾತೃತ್ವ ಹಾಗೂ ಶಾಂತಿ ಮತ್ತು ಸಹಬಾಳ್ವೆಯನ್ನು ಸಂಕೇತಿಸುವ
ನಮ್ಮ ಸ್ವಾತಂತ್ರ್ಯ ಸಂಗ್ರಾಮದ ರೂವಾರಿಗಳ ಆಶಯದಂತೆ ಭಾರತೀಯರೆಲ್ಲರಿಗೂ
ಸಮಾನ ಅವಕಾಶಗಳು ದೊರೆತು ಸಮೃದ್ಧಿಯ ಫಲ ಎಲ್ಲರಿಗೂ
ಸಮನಾಗಿ ವಿತರಣೆಯಾದಾಗ ನಮ್ಮ ಸ್ವಾತಂತ್ರ್ಯ ಅರ್ಥಪೂರ್ಣವಾಗುತ್ತದೆ.
ಅಂತಹ ಧೀಃಶಕ್ತಿ ಪ್ರತಿಯೊಬ್ಬ ಭಾರತೀಯರಿಗೂ ಪ್ರೇರಣೆ ನೀಡಲಿ.
ಕರ್ನಾಟಕ ವಾರ್ತೆ



# FOR HOLIDAYS OFF THE BEATEN TRACK

CONCEPT TOURS AND SHORT BREAKS ARE GAINING GROUND IN BANGALORE. FROM HISTORY TO PHOTOGRAPHY, THERE ARE DIVERSE INTERESTS TO EXPLORE.


For Shyam Kumar, a software engineer from Domlur, taking a tour of the Hoysala terrain, was the ideal way to spend the weekend. While most people would associate Belur and Halebeedu (near Hassan) with the Hoysala kingdom, Kurnar also got to explore the ancient town of Dwarasarnudra spread around Halebeedu, ancient tanks and the lesser explored Hoysala temple at Belavadi.

The deviation from the usual Hoysala tourist circuit was courtesy Travel wise, a concept travel firm run by media professional and travel enthusiast Lakshmi Sharath and Arun Bhat, a former IT professional and avid photographer.



***Wildlife photographer Jayanth Sharma, Bangaluru***

The duo started Travel wise with the belief that many people are looking for experiences which go beyond the standard touristy fare. An increasing breed in Bangalore, a complete travel experience for such people means going beyond standard sightseeing and keepsake photography.



Like Travel wise, the idea of concept tours is catching up, though very slowly. JP Nagar based wildlife photographer Jayanth Sharma conducts photo tours across India for amateur and semi-professional shutterbugs and has several Bangaloreans signing up. "Very rarely do you find concept based tourism in India" says Sharma, who got the idea of conducting photo tours after he spent a few years travelling around the country and realised not many were doing wildlife related tours around India.

**✍ Reshmi Chakraborthy**

"I implemented my expertise in photography with my interest in travel," he says.

Knowing your destination


"I mostly get a group of amateur photographers and also some non-




photographers if any of them are coming with family." he says. He also adds that he comes across amateur photographers with expensive equipment but no idea how to use it and people who are interested in wildlife photography but don't know how to get the requisite permission.

While there are several people happy to tick off the requisite number of places from their must-see-list, the number of travelers who want a deeper experience seems to be gradually increasing. "Several people who have been with us


Date of Publication : 09.05.2012 RNI No. 040015 / 83
MH / MR / North East / 093 / 2012- 2014 Date of Posting : 10-09-2012




look for something deeper that enriches their travel. It could be a story, a myth, a lost piece of history or even a nature trail telling them about the birds and the bees in that habitat"says Lakshmi, adding that their focus is on niche experiential tours which are well researched.

A travel writer herself, she and Bhat lay emphasis on the focal culture during all their tours.

An Unusual Experience





What really adds to the difference is that most people who organise concept tours are avid travelers and explorers themselves and seem to understand that people need sufficient amount of time to experiences place properly." I include a lot of anecdotes, storytelling and try to give them an overall experience," Sharma recounts.

Lakshmi and Arun's tours are thoroughly researched by them by visiting the sites, speaking to locals, getting to know the locals, visiting archives to read up related material and even talking to historians and professors.

Seeking more than an unusual experience? How about something that encourages the concept of social entrepreneurship? Ruralzing, an initiative by Infosys Young Indians, has started the concept of rural tourism. The aim is to give people a taste of rural life and create an alternative source of income for villages, says Pritam Kumar Sinha, who's heading the group.

*Courtesy:* TREND

## FORTHCOMING PROGRAMMES:

**Tuesday 18.09.2012**

10.00 a.m. Shree Swarna Gowri Pratishthapana & Pooja
9.00 p.m. Pooja & Mangalarathi

**Wednesday 19.09.2012**

9.30 a.m. Shree Mahaganapathi Pratishtapana Pooja
9.00 p.m. Pooja & Mangalarathi

**Thursday 20.09.2012**

9.30 a.m. Pooja & Mangalarathi
7.000 p.m. Carnatic Music: Master Tejas Seshadri Sarma
8.00 p.m. Carnatic Music: Ms. M.V.S.Nisha
9.00 p.m. Pooja & Mangalarthi



**Friday 21.09.2012**

9.30 a.m. Pooja & Mangalarathi
5.30 p.m Haldi Kumkum for Ladies
7.00 p.m. Hindustani Music by Sri. Abhijit Shenoy, Bangalore
9.00 a.m. Pooja & Mangalarathi

**Saturday 22.09.2012**

9.30 a.m. Pooja & Mangalarathi
7.00 p.m. Carnatic Music: Chari Kanakavalli Santhanam
8.00 p.m. Carnatic Music: Dharini Veeraraghavan
9.00 p.m. Pooja & Mangalarathi

**Sunday 23.09.2012**

9.00 a.m. Pooj a & Mangalarathi
10.00 a.m. Vedga Ghosha by Vaidikas of Shankar Mutt
12.00 p.m. Pooja & Mangalarathi
Procession of Shri Swarna Gauri & Shri. Ganapathi to Dadar Beach for Immersion Prasada Viniyoga

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 ● Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938